ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 16 ಏಪ್ರಿಲ್ 13-19, 1998 ರೂ.2.00

ಬರೀ ಮಾತು, ಮುಖಂಡತ್ವ ಬದಲಾವಣೆ ಜನರಲ್ಲಿ ವಿಶ್ವಾಸ ಮರಳಿಸೀತೇ?

ಕಾಂಗ್ರೆಸ್ಸಿಗರಿಗೆ ಸುರ್ಜಿತ್ ಪ್ರಶ್ನೆ

ಕಾಂಗ್ರೆಸ್ ಪಕ್ಷ ದೊಡ್ಡ ದೊಡ್ಡ ಮಾತುಗಳಿಂದಲೇ ತೃಪ್ತಿಪಡದೆ ತನ್ನ ಹಿಂದಿನ ತಪ್ಪುಗಳಿಗೆ ಹೊಣೆ ಒಪ್ಪಿಕೊಂಡು ಜಾತ್ಯಾತೀತತೆಯ ಬಗ್ಗೆ ತಾನೇ ಹೇಳಿಕೊಂಡಿರುವುದನ್ನು ಪಾಲಿಸಲು ಕೆಲಸ ಮಾಡುವ ಪ್ರತಿಜ್ಞೆ ತೊಡಬೇಕು - ಆಗ ಮಾತ್ರವೇ ಆ ಪಕ್ಷ ಅಲ್ಪಸಂಖ್ಯಾತರ ಹಾಗೂ ದೇಶದ ಜಾತ್ಯಾತೀತ ಮನೋಭಾವದ ಜನಗಳ ವಿಶ್ವಾಸವನ್ನು ಮತ್ತೆ ಪಡೆಯಲು ಸಾಧ್ಯ ಎಂದು ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಏಪ್ರಿಲ್ 6ರಂದು ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಕೈಗೊಂಡ ರಾಜಕೀಯ ನಿರ್ಣಯದ ಬಗ್ಗೆ ಟಿಪ್ಪಣಿ ಮಾಡುತ್ತಾ ಸುರ್ಜಿತ್ ಹೀಗೆ ಹೇಳಿದ್ದಾರೆ.

ಕೇವಲ ಮುಖಂಡತ್ವವನ್ನು ಬದಲಿಸಿದರೆ, ಅಥವಾ ವಂಶಪ್ರತಿಷ್ಠೆಯ ಬಗ್ಗೆಯೇ ಮಾತನಾಡುತ್ತಿದ್ದರೆ ತಮ್ಮ ಪಕ್ಷದ ಪುನಶ್ಚೇತನ ಸಾಧ್ಯ, ಅದರ ಗತವೈಭವ ಮರಳಿ ಬರಲು ಸಾಧ್ಯ ಎಂದು ಕಾಂಗ್ರೆಸ್ಸಿಗರು ನಂಬಿದ್ದರೆ ನಿಜವಾಗಿಯೂ ಅವರೊಂದು ಗಂಭೀರ ತಪ್ಪು ಮಾಡುತ್ತಿದ್ದಾರೆ. ಮಾತುಗಳು, ವ್ಯಕ್ತಿಗಳೇ ಸಾಕು, ತಮ್ಮ ನೀತಿ-ಧೋರಣೆಗಳನ್ನು ಬದಲಿಸಬೇಕಾಗಿಲ್ಲ ಎಂದು ಭಾವಿಸಿದ್ದರೆ ಅದು ಕೇವಲ ಭ್ರಮೆ ಎಂದು ಸುರ್ಜಿತ್ ಎಚ್ಚರಿಸಿದ್ದಾರೆ.

ಇದು ಇತ್ತೀಚೆಗೆ ಕಾಂಗ್ರೆಸ್ ತನ್ನ ಇತಿಹಾಸದಲ್ಲೇ ಅತಿ ಕಮ್ಮಿ ಎಂದರೆ ಶೇ. 25.81 ಮತ ಪಡೆದ ಮೇಲೆ ನಡೆದಿರುವ ಮೊದಲ ಎಐಸಿಸಿ ಅಧಿವೇಶನ. ಬಿ.ಜೆ.ಪಿ. ಶೇ. 25.34 ಮತಗಳಿಸಿ ಕೇಂದ್ರ ಸರಕಾರದ ನೇತೃತ್ವ ಹಿಡಿದಿರುವ ಹಿನ್ನೆಲೆಯಲ್ಲಿ ಈ ಅಧಿವೇಶನದಲ್ಲಾದರೂ ಈ ಅವನತಿಯ ಬಗ್ಗೆ ಗಂಭೀರ ಆತ್ಮಾವಲೋಕನ, ಸ್ವಯಂ ವಿಮರ್ಶೆ ಮಾಡಿಕೊಂಡು ಪುನಶ್ಚೇತನಕ್ಕೆ ಅಣಿಯಾಗಬಹುದು, ಬಿ.ಜೆ.ಪಿ. ಜಾತ್ಯಾತೀತತೆಗೆ ಒಡ್ಡಿರುವ ಸವಾಲನ್ನು ಎದುರಿಸಲು ಸಜ್ಜಾಗಬಹುದು ಎಂದು ನಿರೀಕ್ಷಿಸಿದವರಿಗೆ ನಿರಾಶೆಯೇ ಆಗಿದೆ ಎಂದು ಸುರ್ಜಿತ್ ಅಭಿಪ್ರಾಯ ಪಟ್ಟಿದ್ದಾರೆ.

ಈ ಅಧಿವೇಶನದಲ್ಲಿ ಇದ್ದದ್ದು ಎರಡೇ ಅಜೆಂಡಾ. ಕಾಂಗ್ರೆಸ್ ಅಧ್ಯಕ್ಷರಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಶ್ರೀಮತಿ ಸೋನಿಯಾ ಗಾಂಧಿಯವರನ್ನು ಚುನಾಯಿಸಿದುದರ ಅನುಮೋದನೆ ಹಾಗೂ ರಾಜಕೀಯ ಠರಾವಿನ ಅಂಗೀಕಾರ. ಕಾಂಗ್ರೆಸ್‌ನಲ್ಲಿ ಸಾಮಾನ್ಯವಾಗಿರುವ ಹೊಗಳು ಭಟ್ಟಂಗಿತನದ ವಾತಾವರಣದಲ್ಲಿ ಮೊದಲ ಅಜೆಂಡಾ ಬೇಗನೇ ಮುಗಿದು ಹೋದುದು ಸಹಜವೇ ಆಗಿತ್ತು. ಆದರೂ ಅಧಿವೇಶನದಲ್ಲಿ ಭಿನ್ನಾಭಿಪ್ರಾಯಗಳಿಲ್ಲ, ವಿವಿಧ ಗುಂಪುಗಳು ಒಂದಾಗಿವೆಯೆಂದು ಭಾವನೆ ಮೂಡಿಸುವ ಪ್ರಯತ್ನ ನಡೆದಿತ್ತು. ಹಿನ್ನೆಲೆಗೆ ಸರಿದಿದ್ದ ನರಸಿಂಹರಾಯರಂತಹ ಮುಖಂಡರು ಮತ್ತೆ ವೇದಿಕೆಯಲ್ಲಿ ರಾರಾಜಿಸುತ್ತಿದ್ದರು. ರಾಜಕೀಯ ಠರಾವು ಹಾಗೂ ಅಧ್ಯಕ್ಷರ ಭಾಷಣ ಎರಡರಲ್ಲೂ ಭ್ರಷ್ಟಾಚಾರದ ವಿರುದ್ಧ ಸಮರದ, ಸಾಮಾಜಿಕ ಜೀವನದಲ್ಲಿ ಪಾರದರ್ಶಕತೆಯ ಮಾತುಗಳಿದ್ದರೂ ವಿವಿಧ ಭ್ರಷ್ಟಾಚಾರ ಹಗರಣಗಳಲ್ಲಿ ಆಪಾದಿತರಾದವರೂ ಭಾಷಣಗಳನ್ನು ಕೊಡುತ್ತಿದ್ದದು ಕಂಡು ಬಂತು.

"ದೇಶವನ್ನು ಆಳಬಲ್ಲ ಸಹಜ ಪಕ್ಷ ಎಂಬ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿನ ಕೇಂದ್ರ ಸ್ಥಾನವನ್ನು ಪಕ್ಷ ಕಳೆದುಕೊಳ್ಳುವ ಭಯವಿದೆ" ಎಂದು ಹೇಳಿದ ಸೋನಿಯಾ ಗಾಂಧಿಯವರು "ದೇಶಾದ್ಯಂತ ಜನಗಳ ಆಶಯಗಳ ಗರಿಗೆದರಿಸುವ ಪಕ್ಷವಾಗುವ ಬದಲು ನಾವು ಜನ ಸಮೂಹಗಳ ಸಂಪರ್ಕ ಕಳಕೊಳ್ಳುತ್ತಿದ್ದೇವೆ" ಎಂದು ಒಪ್ಪಿಕೊಂಡರು; ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ಪುನಶ್ಚೇತನಗೊಳಿಸ ಬೇಕಾಗಿದೆ ಎಂದರು; "ನಾನೇನೂ ಉದ್ಧಾರಕಿ ಅಲ್ಲ- ನಮ್ಮ ಪಕ್ಷದ ಪುನರುಜ್ಜೀವನ ಒಂದು ದೀರ್ಘ ಪ್ರಕ್ರಿಯೆ" ಎಂದೂ ಒಪ್ಪಿಕೊಂಡರು. ಆದರೆ ಕಾಂಗ್ರೆಸ್ ಸರಕಾರ ಆರಂಭಿಸಿದ ಉದಾರೀಕರಣ ಹಾಗೂ ಜಾಗತೀಕರಣದ ಆರ್ಥಿಕ ಧೋರಣೆಗಳಲ್ಲಿ ಅವರಿಗೇನೂ ತಪ್ಪು ಕಾಣಲಿಲ್ಲ. ಬದಲಾಗಿ ಆ ನೀತಿಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು.

"ದೀರ್ಘಕಾಲ ಕಾಂಗ್ರೆಸ್ಸಿಗೆ ವಿಧೇಯರಾಗಿದ್ದ ಬಡ ಹಾಗೂ ಹಿಂದುಳಿದ ಜನವಿಭಾಗಗಳನ್ನು ಅದರಿಂದ ದೂರಮಾಡಿ ಅದರ ಜನಬೆಂಬಲದ ಬೆನ್ನೆಲುಬನ್ನೇ ಮುರಿದ ನೀತಿಗಳಿವು. ಏಕೆಂದರೆ ಇವು ಈ ಜನಗಳ ಮೇಲೆ ಭಾರೀ ಹೊರೆ ಹಾಕಿ ಕೆಲವೇ ಶ್ರೀಮಂತರಿಗೆ ಪ್ರಯೋಜನ ತಂದವು. ಈ ಬೀಳುದಾರಿಯನ್ನು ಬಿಡದೆ 'ಒಂದು ಐಕ್ಯ, ಪುನಶ್ಚೇತನ, ಪುನರುಜ್ಜೀವನ ಗೊಂಡ ಕಾಂಗ್ರೆಸ್' ಸಾಧ್ಯವಿಲ್ಲ ಎಂದು ಆಕೆಗಿನ್ನೂ ಅರಿವಾಗಿಲ್ಲವೇ? ಎಂದು ಸುರ್ಜಿತ್ ಈ ಬಗ್ಗೆ ಪಕ್ಷದ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದಿರುವ ಲೇಖನದಲ್ಲಿ ಪ್ರಶ್ನಿಸಿದ್ದಾರೆ.

ಈ ಅಧಿವೇಶನ ಅಂಗೀಕರಿಸಿದ ರಾಜಕೀಯ ಠರಾವು ಇತ್ತೀಚಿನ ಚುನಾವಣೆಗಳನ್ನು ದೇಶದ ಮೇಲೆ ಹೇರಿದ ತನ್ನ ತಪ್ಪನ್ನು ಒಪ್ಪಿಕೊಂಡಿಲ್ಲ, ಆದರೆ ತನ್ನ ಎಂದಿನ ಜನನೆಲೆ ಹ್ರಾಸಗೊಂಡಿದೆ, ಕೆಲವು ವಿಭಾಗಗಳು ದೂರ ಸರಿದವು ಎಂದು ಒಪ್ಪಿಕೊಂಡಿದೆ. ಇದು ಏಕಾಯಿತು ಎಂದು ಕಂಡುಕೊಳ್ಳುವ ಪ್ರಯತ್ನ ಮಾತ್ರ ಎಲ್ಲೂ ಕಂಡು ಬರಲಿಲ್ಲ.

"ಪರಿಶಿಷ್ಟ ಜಾತಿಗಳ, ಬುಡಕಟ್ಟುಗಳ ಜನ, ಹಿಂದುಳಿದ ವಿಭಾಗಗಳ ಜನ ತಮ್ಮಿಂದ ಏಕೆ ದೂರ ಸರಿದರು ಎಂದು ಗಂಭೀರವಾಗಿ ವಿಮರ್ಶಿಸಬೇಕು. ಎಲ್ಲರಿಗೂ ಗೊತ್ತಿರುವುದನ್ನು ಒಪ್ಪಿಕೊಂಡರಷ್ಟೇ ಏನು ಉಪಯೋಗ? ವಿವಿಧ ಮುಖಂಡರು ತಮ್ಮ ಪಕ್ಷವನ್ನು ಏಕೆ ತ್ಯಜಿಸುತ್ತಿದ್ದಾರೆ, ಬಿ.ಜೆ.ಪಿ. ಸೇರಲೂ ಏಕೆ ಹೇಸುತ್ತಿಲ್ಲ ಎಂಬುದರ ಬಗ್ಗೆಯೂ ಚಿಂತಿಸಬೇಕು" ಎಂದು ಸುರ್ಜಿತ್ ಹೇಳಿದ್ದಾರೆ.

'ನಿಜ ಸಂಗತಿಯೆಂದರೆ ಅಧಿಕಾರದಲ್ಲಿದ್ದಾಗ, ಅಧಿಕಾರವಿಲ್ಲದಾಗ ಕಾಂಗ್ರೆಸ್ ಬಡವರಿಗೆ, ದಮನಕೊಳಗಾದವರಿಗೆ ಹಲವು ಭರವಸೆಗಳನ್ನು ನೀಡಿತು. ಆದರೆ ಅವನ್ನು ಈಡೇರಿಸುವಲ್ಲಿ ವಿಫಲವಾಯಿತು. ಅದೇ ವೇಳೆಗೆ ಆರ್ಥಿಕ ಅಸಮಾನತೆಗಳನ್ನು ಹೆಚ್ಚಿಸಿ ಬಡವರ ಮೇಲೆ ಇನ್ನಷ್ಟು ಹೊರೆ ಹಾಕಿ ಅವರನ್ನು ದೂರಮಾಡಿಕೊಂಡ ಉದಾರೀಕರಣದ ಆರ್ಥಿಕ ನೀತಿಗಳನ್ನು ಮುಂದುವರಿಸುವುದಾಗಿಯೂ ಅದು ಒತ್ತಿ ಹೇಳುತ್ತಿದೆ" ಎಂದಿರುವ ಸುರ್ಜಿತ್ ಕಾಂಗ್ರೆಸ್ ಪಕ್ಷ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಗಳ ಎಡ-ನೇತೃತ್ವದ ಸರಕಾರಗಳಿಂದ ಪಾಠ ಕಲಿಯಬೇಕು ಎನ್ನುತ್ತಾರೆ. ಮುಖ್ಯವಾಗಿ ಭೂಸುಧಾರಣೆಗಳ ಮೂಲಕ ಗ್ರಾಮೀಣ ಬಡವರು ಹಾಗೂ ಭೂಹೀನರನ್ನು ಅಧಿಕಾರ ಸಂಪನ್ನಗೊಳಿಸುವ ನೀತಿ

5ನೇ ಪುಟ ನೋಡಿ

ಪಕ್ಷದ ಆಧಾರದಲ್ಲಿ ಕಾರ್ಮಿಕರ ಸಂಘಟನೆ ಐಕ್ಯತೆಗೆ ಮಾರಕ

ದುಡಿಯುವ ಜನರನ್ನು ಪಕ್ಷದ ಆಧಾರದಲ್ಲಿ ಸಂಘಟಿಸುವ ಪ್ರಯತ್ನಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ರಾಜ್ಯ ಕಾರ್ಯದರ್ಶಿ ಮಂಡಳಿಯು ತೀವ್ರವಾಗಿ ಆಕ್ಷೇಪಿಸಿದೆ. ಲೋಕಶಕ್ತಿ-ಕಾರ್ಮಿಕ ವಿಭಾಗವನ್ನು ಆರಂಭಿಸುತ್ತಿರುವುದು ದುಡಿಯುವ ಜನರಲ್ಲಿ ಐಕ್ಯತೆಗೆ ಒಡಕು ತಂದು, ಒಗ್ಗಟ್ಟನ್ನು ದುರ್ಬಲಗೊಳಿಸುವ ಯತ್ನ ಎಂದು ಸಿಪಿಐ(ಎಂ) ತಿಳಿಸಿದೆ.

ಖಾಸಗೀ ಕಂಪನಿಗಳ ಸ್ವೇಚ್ಛಾಚಾರಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಲೋಕಶಕ್ತಿ ನಾಯಕ ರಾಮಕೃಷ್ಣ ಹೆಗಡೆಯವರು ವಾದಿಸುತ್ತಿದ್ದು, ಇಂತಹ ಪಕ್ಷ ಕಾರ್ಮಿಕ ವರ್ಗದ ಹಿತ ಕಾಪಾಡೀತೆ? ಎಂದು ಸಿಪಿಐ(ಎಂ) ಪ್ರಶ್ನಿಸಿದೆ.

ಕಾರ್ಮಿಕ ವರ್ಗ ತನ್ನದೇ ಆದ ಸಮಸ್ಯೆಗಳ ಪರಿಹಾರಕ್ಕೆ ಸಂಘಟನೆ ಕಟ್ಟುವುದು, ಹೋರಾಡುವುದು ಅತ್ಯಗತ್ಯ ಅನಿವಾರ್ಯ. ಅವರು ಒಂದು ವರ್ಗವಾಗಿ ಸಂಘಟಿತವಾಗಬೇಕು. ವಿಭಿನ್ನ ರಾಜಕೀಯ ಒಲವುಗಳು ಇದ್ದಾಗ್ಯೂ ಐಕ್ಯತೆಯಿಂದ ಹೋರಾಡಬೇಕು.

ಆದರೆ ಕಾರ್ಮಿಕ ವರ್ಗವನ್ನು ರಾಜಕೀಯ ಪಕ್ಷದ ಬಾಲಂಗೋಚಿಯಂತೆ, ಅದರ ಅಂಗವಾಗಿ ಸಂಘಟಿಸುವುದು ದುಡಿಯುವ ವರ್ಗದ ಹಿತಾಸಕ್ತಿಗೆ ಮಾರಕ ವಾಗುವುದು. ದುಡಿಯುವ ವರ್ಗವನ್ನು ಒಡೆಯುವ ಈ ಪ್ರಯತ್ನಗಳು ನಿಲ್ಲಬೇಕು ಎಂದಿದೆ.

ದುಡಿಯುವ ವರ್ಗವನ್ನು ದುರ್ಬಲಗೊಳಿಸುವ ಪ್ರಯತ್ನಗಳನ್ನು ಪ್ರಜ್ಞಾಪೂರ್ವಕ ವಾಗಿ ಕಾರ್ಮಿಕ ವರ್ಗ ವಿಫಲಗೊಳಿಸ ಬೇಕು ಎಂದು ವಿನಂತಿಸಿದೆ.

ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಚುರುಕುಗೊಳ್ಳುತ್ತಿದೆ

ವಿ.ರಾಮಚಂದ್ರರಾವ್

ಲೋಕಸಭಾ ಚುನಾವಣೆಯ ನಂತರ ಇದೀಗ ಕರ್ನಾಟಕದ ರಾಜಕೀಯ ಚುರುಕುಗೊಳ್ಳುತ್ತಿದೆ. ಚುನಾವಣೆಯ ಬೆನ್ನಿನಲ್ಲೇ ಜೆ.ಹೆಚ್.ಪಟೇಲ್‌ರ ಸರಕಾರವು ಕುಸಿದು ಬೀಳುತ್ತದೆ ಎಂಬ ಊಹಾಪೋಹಗಳೆಲ್ಲಾ ತಲೆಕೆಳಗಾಗಿವೆ. ಜೆ.ಎಚ್.ಪಟೇಲರ ಸರಕಾರವು ರಾಜ್ಯಪಾಲರ ಅಭಿನಂದನಾ ಠರಾವಿಗೆ ಸುಸೂತ್ರವಾಗಿ ಅಂಗೀಕಾರ ಪಡೆದುಕೊಂಡಿದೆ ಹಾಗೂ ತಾತ್ಕಾಲಿಕ ಬಜೆಟ್ ಪಾಸು ಮಾಡಿಕೊಂಡಿದೆ. ಈಗ ಎಲ್ಲಾ ಪಕ್ಷಗಳು ಒಂದಲ್ಲ ಒಂದು ಚಳುವಳಿಯ ಕಾರ್ಯಕ್ರಮ ಹಾಕಿ ಕಾರ್ಯೋನ್ಮುಖವಾಗುತ್ತಿವೆ.

ಜನತಾದಳ ಸರಕಾರವು ಒಡನೇ ಎರಡು ಮಂತ್ರಿಗಳನ್ನು ಸೇರಿಸಿ ತನ್ನ ಮಂತ್ರಿಮಂಡಳವನ್ನು 37 ರಿಂದ 39ಕ್ಕೆ ಏರಿಸಿಕೊಂಡಿದೆ. ಅದೇ ವೇಳೆ ಇನ್ನೂ ಮೂರು ಮಂದಿಯನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವ ತಮ್ಮ ಇಚ್ಛೆಯನ್ನು ಜೆ.ಎಚ್.ಪಟೇಲರು ತಾತ್ಕಾಲಿಕವಾಗಿ ಕೈ ಬಿಟ್ಟಿದ್ದಾರೆ. ಮೇ ತಿಂಗಳಲ್ಲಿ ಬಜೆಟ್ ಅಧಿವೇಶನದ ನಂತರ ತನ್ನ ಮಂತ್ರಿಮಂಡಳವನ್ನು 50 ಕ್ಕೇರಿಸಲಾಗುವುದು ಎಂದು ಅವರ ಕಡೆಯಿಂದ ಹೇಳಿಕೆ ಇದೆ. ಅದೇ ವೇಳೆ ಜನತಾದಳದಲ್ಲಿ ಭಿನ್ನಾಭಿಪ್ರಾಯ, ಗುಂಪುಗಾರಿಕೆ, ಬಹಿರಂಗ ಪರಸ್ಪರ ದೋಷಾರೋಪಣೆ ಇವೆಲ್ಲಾ ಹೆಚ್ಚಾಗುತ್ತಿವೆ. ಒಂದೆಡೆ, ಸಿಂಧ್ಯಾರವರ 'ರಾಜೀನಾಮೆ ನಾಟಕ' ನಡೆದರೆ, 'ತಮಗೆ ಕುಮಾರ ಸ್ವಾಮಿ ಮತ್ತು ರೇವಣ್ಣ ಇವರ ಕಡೆಯಿಂದ ಧಾಳಿ ನಡೆಯಿತು' ಎಂದು ಸುದ್ದಿ ಹರಡಿದರೆ, ಇನ್ನೊಂದೆಡೆ ಕುಮಾರ ಸ್ವಾಮಿಯಿಂದ ಜನತಾದಳದ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಬಂದಿದೆ. ಕುಮಾರ ಸ್ವಾಮಿಯವರು ಹಲವು ಜನತಾದಳದ ಮುಖಂಡರ ಮೇಲೆ - ಅಧ್ಯಕ್ಷ ಶಂಕರ ಇವರ ಮೇಲೂ - ಆಪಾದನೆಯುಳ್ಳ ಪತ್ರ ಬರೆದಿದ್ದಾರೆ.

ಮಾತ್ರವಲ್ಲ, ಪಕ್ಷದ ಸಂಘಟನೆಯನ್ನು 'ತೃಣಮೂಲ'ಕ್ಕೆ ಒಯ್ಯಲು ಹಲವು ತಂತ್ರಗಳಲ್ಲಿ ಜನತಾದಳದ ಮುಖಂಡರು ರಾಜ್ಯಾದ್ಯಂತ ಪಯಣ ಹೊರಟಿದ್ದಾರೆ.

ಇನ್ನು ಲೋಕಶಕ್ತಿಯ ಮುಖಂಡ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಚುನಾವಣೆಯ ಫಲವಾಗಿ ಕೇಂದ್ರ ಸರಕಾರದಲ್ಲಿ ವಾಣಿಜ್ಯ ಮಂತ್ರಿಸ್ಥಾನ ಗಿಟ್ಟಿಸಿಕೊಂಡು ಇದೀಗ ಕರ್ನಾಟಕ ರಾಜ್ಯಕ್ಕೆ ಹಿಂತಿರುಗಿದ್ದಾರೆ. 'ರಾಮಕೃಷ್ಣ ಹೆಗಡೆಯವರೇ, ನೀವು ನಮ್ಮನ್ನೆಲ್ಲಾ ದಿಕ್ಕೆಟ್ಟಿಸಿ ಸ್ವತಃ ಮಂತ್ರಿಸ್ಥಾನ ಗಳಿಸಿದರೆ, ನಾವು ಹಲವರು ಮಂತ್ರಿ ಸ್ಥಾನಗಳನ್ನು ಕಳೆದುಕೊಂಡೆವು, ಹೊಸತಾಗಿ ಮಂತ್ರಿಸ್ಥಾನ ದೊರೆಯುವುದೆಂದು, ಜೆ.ಎಚ್.ಪಟೇಲರ ಸರಕಾರ ಉರುಳಿತೆಂದು ಆಶೆ ಕಟ್ಟಿಕೊಂಡಿದ್ದೆವು. ಅವೆಲ್ಲಾ ನಿರರ್ಥಕವಾಯಿತಲ್ಲಾ!" ಎಂದು ಬೊಬ್ಬಿಟ್ಟರು. ಅವರನ್ನೆಲ್ಲಾ ಸಮಾಧಾನ ಪಡಿಸುವುದರಲ್ಲೇ ಶ್ರೀ ರಾಮಕೃಷ್ಣ ಹೆಗಡೆಯವರ ಸಮಯ ಕಳೆಯಿತು.

ಬಿಜೆಪಿಯಲ್ಲಿ ಎರಡು ಅಭಿಪ್ರಾಯಗಳು; ಜೆ.ಎಚ್.ಪಟೇಲರ ಸರಕಾರ ಕೂಡಲೇ ರಾಜೀನಾಮೆ ಇತ್ತು ಹೊಸ ಚುನಾವಣೆ ನಡೆಸಬೇಕೆಂದು ಒಂದು ಅಭಿಪ್ರಾಯ, ಬೇಡ, ಸ್ವಲ್ಪ ಕಾಲ ಕಾದುನೋಡೋಣ ಎಂಬ ಇನ್ನೊಂದು ಅಭಿಪ್ರಾಯ. ಈ ಅಭಿಪ್ರಾಯ ಭಿನ್ನತೆ ಇದೀಗ ವಿಧಾನಸಭಾ ಮುಖಂಡರನ್ನೇ ಬದಲಾಯಿಸುವ ಮಟ್ಟಿಗೆ ಹೋಗಿದೆ ಎಂದು ಕಾಣುತ್ತದೆ. ಅದೇ ವೇಳೆ, ಹೊರಗಿನವರಿಗೆ ತಾವೆಲ್ಲಾ ಒಟ್ಟಾಗಿದ್ದೇವೆ ಎಂದು ತೋರಿಸಲು, ಬಿಜೆಪಿ ಏಪ್ರಿಲ್ 15 ರಂದು ಜೆ.ಎಚ್.ಪಟೇಲರ ಸರಕಾರದ 'ವೈಫಲ್ಯತೆ'ಯನ್ನು ಬಹಿರಂಗಪಡಿಸಲು ರಾಜ್ಯಾದ್ಯಂತ ಕಾರ್ಯಕ್ರಮ ಹಮ್ಮಿಕೊಂಡಿದೆ.

ಇನ್ನು ಧನಂಜಯ ಕುಮಾರ್‌ರನ್ನು ಇವರನ್ನು ಕೇಂದ್ರದಲ್ಲಿ ಮಂತ್ರಿ ಮಾಡದೆ ಬೆಂಗಳೂರಿನ ಅನಂತಕುಮಾರರನ್ನು ಮಂತ್ರಿ ಮಾಡಿದುದರ ವಿರುದ್ಧ ಅವರಲ್ಲೇ ಹಲವು ಮಂದಿಗೆ ತೀರಾ ಆಘಾತವಾಗಿದೆಯಂತೆ.

ಕಾಂಗ್ರೆಸ್ ಪಕ್ಷದಲ್ಲಿ ಇದೀಗ ಸೋನಿಯಾಗಾಂಧಿ ಅಧ್ಯಕ್ಷತೆ ವಹಿಸಿಕೊಂಡ ನಂತರ, ಕರ್ನಾಟಕ ರಾಜ್ಯಕ್ಕೆ ಜನಾರ್ಧನ ರೆಡ್ಡಿಯವರ ನೇತೃತ್ವದ ಒಂದು ಕೇಂದ್ರದ ತಂಡ ಚುನಾವಣೆಯಲ್ಲಿ ನಿರೀಕ್ಷಿಸಿದ ಗೆಲುವು ಏಕೆ ಕಾಂಗ್ರೆಸ್(ಐ) ಪಕ್ಷಕ್ಕೆ ದೊರೆಯಲಿಲ್ಲ ಎಂಬುದನ್ನು ಪರೀಕ್ಷಿಸಲು ಬಂದಿದೆ. ಪರಿಣಾಮವಾಗಿ, ಧರ್ಮಸಿಂಗ್ ಪರ ಮತ್ತು ಧರ್ಮಸಿಂಗ್ ವಿರೋಧ ಗುಂಪುಗಳು ಪರಸ್ಪರ ದೂಷಣೆ ಸತ್ರ ನಡೆಸುತ್ತಿವೆ. ಸೋತ ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ಸೋಲಿಗೆ ಇಂತಿಂತಹ ಮುಖಂಡರು ಕೆಲಸ ಮಾಡದಿರುವುದೇ ಕಾರಣ ಎಂದು ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ಹಲವು ಹಳೆ ಕಾಂಗ್ರೆಸ್ ಮುಖಂಡರನ್ನು ಪಕ್ಷದಿಂದಲೇ ಉಚ್ಛಾಟನೆ ಮಾಡಬೇಕೆಂಬ ಕೂಗು ಬಂದಿದೆ.

ಇದೇ ವೇಳೆ ಕಾಂಗ್ರೆಸ್ಸು ಕೂಡಾ ರಾಜ್ಯ ಸರಕಾರ ಕೃಷ್ಣಾ ನದಿ ದಂಡೆ ಯೋಜನೆಗಳಲ್ಲಿ ಹಣದ ದುರುಪಯೋಗವಾಗಿದೆ, ಅದರ ಕುರಿತು ತನಿಖೆ ನಡೆಯಬೇಕೆಂದು ಚಳುವಳಿ ಆರಂಭಿಸಿದೆ.

ಅದೇ ವೇಳೆ, ರಾಜ್ಯದಲ್ಲಿ ಹಲವು ಜಿಲ್ಲೆಗಳಲ್ಲಿ ಕೃಷಿ ಉತ್ಪನ್ನಗಳ ಬೆಲೆಗಳಲ್ಲುಂಟಾದ ಕುಸಿತದಿಂದ ಕಂಗಾಲಾದ ರೈತರ ಆತ್ಮಾಹುತಿ ಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವು ಕಾ। ಶ್ರೀ ರಾಮರೆಡ್ಡಿ(ಸಿಪಿಐಎಂ ಶಾಸಕರು), ಮಾರುತಿ ಮಾನ್ಪಡೆ(ಅಧ್ಯಕ್ಷರು) ಮತ್ತು ಸಂಗ್ರಾಮ (ಬೀದರ್ ರೈತ ಮುಖಂಡರು) ಬೀದರ್ ಮತ್ತು ಗುಲ್ಬರ್ಗದಲ್ಲಿ ಹಲವೆಡೆ ಸಂಚಾರ ಮಾಡಿ ರೈತರ ಇಂದಿನ ಶೋಚನೀಯ ಪರಿಸ್ಥಿತಿ, ಆತ್ಮಹತ್ಯೆ ಇತ್ಯಾದಿ ಕುರಿತು ಪರಿಶೀಲನೆ ನಡೆಸಿ, ಸರಕಾರದ ನೀತಿಯನ್ನು ತೀವ್ರವಾಗಿ ಖಂಡಿಸಿದರು.

ರಾಜ್ಯ ರೈತ ಸಂಘ, ಸಿಪಿಐ ನೇತೃತ್ವದ ರೈತ ಸಂಘ ಮತ್ತು ಪ್ರಾಂತ ರೈತ ಸಂಘಗಳ ಪ್ರತಿನಿಧಿಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಕೃಷಿ ಕೂಲಿಕಾರರ ಸಂಘ ಮತ್ತು ಸಿಐಟಿಯು ಟೌನ್‌ಹಾಲ್‌ನಲ್ಲಿ ಸೇರಿಸಿ ರೈತರ ಪರಿಸ್ಥಿತಿಗೆ ಪರಿಹಾರ ಕಂಡುಕೊಳ್ಳಲು ಸಮಾವೇಶ ನಡೆಸಿ, ಜಂಟಿಯಾಗಿ ರೈತರ ಸಮಸ್ಯೆಗಳನ್ನೆತ್ತಿ ಹೋರಾಟಕ್ಕೆ ಮುಂದಾಗಬೇಕೆಂದು ತೀರ್ಮಾನ ಮಾಡಿದ್ದಾರೆ.

ರಾಜ್ಯದ ಜನತೆ ಅತಿ ಬೇಸಿಗೆಯಿಂದ ತೀವ್ರ ಬಳಲುತ್ತಿದ್ದಾರೆ. ವಿದ್ಯುಚ್ಛಕ್ತಿ ಕೊರತೆ ಮತ್ತು ನೀರಿನ ಕೊರತೆಯಿಂದ ಕಂಗಾಲಾಗುತ್ತಿದ್ದಾರೆ. ಸರ್ಕಾರವು ಒಂದೇ ಸಮನೆ ವಿದ್ಯುಚ್ಛಕ್ತಿ ದರವನ್ನು ಏರಿಸುತ್ತಾ ಹೋಗುತ್ತಿದೆ. ಅದೇ ವೇಳೆ ನೀರನ್ನು ಒದಗಿಸುತ್ತೇವೆಂದು ಭರವಸೆಯನ್ನಷ್ಟೇ ಕೊಡುತ್ತಿದೆ.

ಒಟ್ಟಿನಲ್ಲಿ ರಾಜ್ಯದಲ್ಲಿ ರಾಜಕೀಯ ಚುರುಕುಗೊಳ್ಳುತ್ತಿದೆ.


ಕೇಂದ್ರದಲ್ಲಿ ಬಿಜೆಪಿಯ ನೇತೃತ್ವದ ಸರಕಾರ ಏರ್ಪಟ್ಟರೂ ತಮ್ಮ ಸಮಸ್ಯೆಗಳಿಗೆ ಪರಿಹಾರ ಇಲ್ಲ ಎಂದು ಜನರು ಅಲ್ಲಲ್ಲಿ ಮಾತಾಡಲು ಶುರು ಮಾಡಿದ್ದಾರೆ.

ಜನರ ತೀವ್ರ ಹೋರಾಟವೊಂದೇ ಹಾದಿ ಎಂದು ಮೆಲ್ಲನೆ ರಾಜ್ಯದ ಜನತೆಯಲ್ಲಿ ಅರಿವು ಮೂಡಿ, ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಚಳುವಳಿ ವಿಶಾಲವಾಗಿ ಬೆಳೆದು ಬರುವುದೆಂದು ಹಾರೈಸೋಣವೇ?

ಭಾರತೀಯ ವಿಮೋಚನಾ ಸಮರ




ಸುಮಾರು ಎರಡು ಶತಮಾನಗಳ (೧೭೫೭ -೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.



ನಾವಿಕ ಪಡೆಯಲ್ಲಿ ಮಾತ್ರವಲ್ಲ ಭೂಸೇನೆ ಮತ್ತು ವಾಯುಸೇನೆಗಳಲ್ಲೂ ಜಬಲ್‌ಪುರ, ಪುಣೆ ಮತ್ತಿತರ ಕಡೆಗಳಲ್ಲಿ ಮುಷ್ಕರಗಳು, ಮತಪ್ರದರ್ಶನಗಳು ನಡೆದವು. ಕಲ್ಕತ್ತಾದ ಫೋರ್ಡ್ ವಿಲಿಯಮ್ಸ್‌ನಲ್ಲಿ **ಮೇಜರ್ ಜಯಪಾಲ್ ಸಿಂಗ್**‌ರನ್ನು ಬಂಧಿಸಿ ಸೇನೆಯೊಳಗೆ ಬಂಡಾಯದ ಪಿತೂರಿಯ ಆಪಾದನೆ ಹಾಕಲಾಯಿತು. ಅವರು ಬ್ರಿಟಿಶ್ ಜೈಲಿನಿಂದ ಪರಾರಿಯಾಗಿ ತಲೆ ತಪ್ಪಿಸಿಕೊಂಡರು.(ಇವರು ನಂತರ ಸಿಪಿಐ(ಎಂ) ಸೇರಿದರು. ಕೇಂದ್ರ ಸಮಿತಿ ಸದಸ್ಯರಾಗಿ ಆಯ್ಕೆಯಾದರು) ಬ್ರಿಟಿಶರು ಭೂಸೇನೆ, ನೌಕಾಸೇನೆ ಹಾಗೂ ವಾಯುಸೇನೆಗಳಿಂದ ಹಲವರನ್ನು ಅವರು ಸ್ವಾತಂತ್ರ್ಯ ಹೋರಾಟದೊಂದಿಗೆ ಸಂಬಂಧ ಹೊಂದಿದ್ದರು ಎಂಬ ಸಂದೇಹದ ಮೇಲೆ ವಜಾ ಮಾಡಿದರು.

ಅಕ್ಟೋಬರ್ 10,1945. ಮುಂಬೈಯಿಂದ 50 ಮೈಲಿ ದೂರದಲ್ಲಿರುವ ಥಾಣೆ ಪ್ರದೇಶದ ದಲ್ವಾರಾ ಎಂಬ ಹಳ್ಳಿಯಲ್ಲಿ ಒಂದು ದೊಡ್ಡ ಪೋಲೀಸ್ ಪಾರ್ಟಿ ಇದ್ದಕ್ಕಿದ್ದಂತೆ ಆದಿವಾಸಿಗಳ ಮೇಲೆ ಗೋಳೀಬಾರ್ ನಡೆಸಿತು. ಐದು ಮಂದಿ ಹುತಾತ್ಮರಾದರು. ಅವರ ಹೋರಾಟಗಳಿಗೆ ನೇತೃತ್ವ ನೀಡುತ್ತಿದ್ದ **ಶ್ಯಾಮರಾವ್ ಪರುಳೇಕರ್** ಮತ್ತು **ಗೋದಾವರಿ ಪರುಳೇಕರ್** ರವರನ್ನು ಬ್ರಿಟಿಶರು ಗಡೀಪಾರು ಮಾಡಿದರು. ಅವರು ಈ ಪ್ರದೇಶದಲ್ಲಿ ಸುಮಾರು



ಎರಡೂವರೆ ಲಕ್ಷ **ವಾರಲೀ ಆದಿವಾಸಿಗಳ** ನಡುವೆ ಕೆಲಸ ಮಾಡುತ್ತಿದ್ದರು. ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಸದಸ್ಯರಾಗಿ ಇಲ್ಲಿ ಕೆಲಸ ಮಾಡಲು ಬಂದ ಇವರಿಬ್ಬರು ಇಲ್ಲಿ ತಮ್ಮ ಸ್ವಂತ ಅನುಭವಗಳಿಂದ ಕಮ್ಯುನಿಸ್ಟರಾದವರು. ಗೋದಾವರಿ ತಮ್ಮ ಕೆಲಸಗಳಿಂದಾಗಿ ಆದಿವಾಸಿಗಳ 'ಗೋದೂತಾಯಿ'(ಗೋದೂಅಕ್ಕ) ಆಗಿದ್ದರು.

ಗೋದಾವರಿ ಈ ಪ್ರದೇಶಕ್ಕೆ ಬರುವಾಗ ಅಲ್ಲಿ ಚಿತ್ರಹಿಂಸೆ, ಬಿಟ್ಟಿ ದುಡಿಮೆ, ಕೊಲೆ-ಮಾನಭಂಗ ವಾರಲೀ ಆದಿವಾಸಿಗಳ ನಿತ್ಯದ ಗೋಳಾಗಿತ್ತು. ಜನವರಿ 1945ರಲ್ಲಿ ಈ ಪ್ರದೇಶದಲ್ಲಿ ನಡೆದ ಪ್ರಾಂತೀಯ ಕಿಸಾನ್ ಸಭಾ ಸಮ್ಮೇಳನದಲ್ಲಿ ಇಲ್ಲಿನ 250 ಆದಿವಾಸಿಗಳು ಭಾಗವಹಿಸಿದ್ದರು. ಇದು ಅವರಲ್ಲಿ ಹೊಸ ಉತ್ಸಾಹ ಮೂಡಿಸಿತು. ಮೇ23,1945ರಂದು ಐದು ಸಾವಿರ ಆದಿವಾಸಿಗಳು ಒಂದು ಸಾರ್ವಜನಿಕ ಪ್ರತಿಜ್ಞೆ ಕೈಗೊಂಡರು -ತಾವು ಇನ್ನು ಮುಂದೆ ಜಮೀಂದಾರರು, ಟೇಕೇದಾರರುಗಳ ಕೆಳಗೆ ಕಲಸ ಮಾಡುವುದಿಲ್ಲ, ತಮ್ಮ ಅರೆ-ಗುಲಾಮ ಅವಸ್ಥೆ ಕೊನೆಗೊಳ್ಳಬೇಕು ಎಂದು. ಮತ್ತೆ ಅಕ್ಟೋಬರ್ 10ರಂದು ಅದೇ ಪ್ರತಿಜ್ಞೆಯನ್ನು ಪುನರುಚ್ಚರಿಸುತ್ತಿದ್ದ ಆದಿವಾಸಿಗಳ ಮೇಲೆ ಈ ಮೊದಲು ಹೇಳಿದ ಗೋಳೀಬಾರನ್ನು ನಡೆಸಲಾಯಿತು. ಪರುಳೇಕರ್ ದಂಪತಿಗಳು ಭೂಗತರಾಗಿ ಹೋರಾಟ ಮುಂದುವರಿಸಿದರು. ಹಲವು ಏಳು-ಬೀಳುಗಳ ನಡುವೆ ವಾರಲೀ ಆದಿವಾಸಿಗಳ ಹೋರಾಟ ಮುಂದುವರೆಯಿತು.

'ವಾರಲೀಗಳೊಂದಿಗೆ ರಾಜಿ ಸಾಧ್ಯವಿಲ್ಲ' ಎಂದು ಆಗ ಮುಂಬೈ ಪ್ರಾಂತದ ಕಾಂಗ್ರೆಸ್ ಗೃಹಮಂತ್ರಿಯಾಗಿದ್ದ ಮೊರಾರ್ಜಿ ದೇಸಾಯಿ ಅಬ್ಬರಿಸಿದರು. 'ತೆಲಂಗಾಣಾ, ವಾರಲೀ, ಕಾಕದ್ವೀಪ ಆಂದೋಲನಗಳನ್ನು ಮಣ್ಣು ಮುಕ್ಕಿಸುತ್ತೇವೆ' ಎಂದು ತಮ್ಮ ಅಬ್ಬರವನ್ನು ಸೇರಿಸಿದರು ಕೇಂದ್ರ ಗೃಹ ಮಂತ್ರಿಯಾಗಿದ್ದ ಸರ್ದಾರ್‌ಪಟೇಲ್. ಇವೆಲ್ಲಾ ನಾವು ಈಗಾಗಲೇ ನೋಡಿರುವಂತೆ ಎರಡನೇ ಮಹಾಯುದ್ಧ ಮುಗಿದ ಕೂಡಲೇ ಭುಗಿಲೆದ್ದ ಹೋರಾಟಗಳಾಗಿದ್ದವು.

ಅದಾಗಲೇ ಹೈದರಾಬಾದ್ ಸಂಸ್ಥಾನದಲ್ಲೂ ನಿಜಾಮಶಾಹಿಯ ದಮನದ ವಿರುದ್ಧ ರೈತರ ಹೋರಾಟ ಆರಂಭವಾಗಿತ್ತು. ತೆಲಂಗಾಣಾ ಪ್ರದೇಶದ ಜಲಗಾಂವ್ ತಾಲೂಕಿನ ಒಬ್ಬ ದಮನಕಾರೀ 'ದೇಶಮುಖ'(ಜಮೀಂದಾರ) ವಿಸ್ನೂರು ರಾಮಚಂದ್ರ ರೆಡ್ಡಿ ಎಂಬಾತ ಇಲಮ್ಮ ಎಂಬ ಬಡ ಮಡಿವಾಳ ಹೆಂಗಸಿನ ಸಣ್ಣ ಜಮೀನನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ. ಕಮ್ಯುನಿಸ್ಟಳಾಗಿದ್ದ ಆಕೆ ತನ್ನ ಇತರ ಸಂಗಾತಿಗಳ ನೆರವಿನಿಂದ ಅದನ್ನು ಪ್ರತಿರೋಧಿಸಿ ತಾನು ಬೆಳೆದ ಭತ್ತವನ್ನು ಮನೆಗೊಯ್ದಳು.

ಮರುದಿನ ಆ ದೇಶಮುಖನ ಕುಮ್ಮಕ್ಕಿನಿಂದ ರೈತರ ಸಾಮೂಹಿಕ ಬಂಧನಗಳು ನಡೆದವು. ಆರು ಮುಖಂಡರನ್ನು ಬಂಧಿಸಿ ಭಯಾನಕವಾಗಿ ಹಿಂಸಿಸಲಾಯಿತು. ಜುಲೈ4,1946. ನಿಜಾಮನ ಸಶಸ್ತ್ರ ಪೋಲೀಸರು ಮತ್ತು ಭೂಮಾಲಕರ ಸಶಸ್ತ್ರ ಗೂಂಡಾಗಳು ಒಂದು ಕಡೆ, ಇನ್ನೊಂದು ಕಡೆ ಯುವ ಕಮ್ಯುನಿಸ್ಟ್ ಸ್ವಯಂಸೇವಕರ ನಡುವೆ ಒಂದು ಬೃಹತ್ ಸಂಘರ್ಷ ನಡೆಯಿತು. ಯುವ ಕಮ್ಯುನಿಸ್ಟ್ ಮುಖಂಡ **ದೊಡ್ಡಿ ಕೊಮರಯ್ಯ** ಗೂಂಡಾಗಳ ಗುಂಡಿಗೆ ಬಲಿಯಾಗಿ ಧರೆಗುರುಳಿದ. ಮುಂದೆ ಸ್ವಾತಂತ್ರ್ಯ ಬಂದ ನಂತರವೂ ಮತ್ತೆ ನಾಲ್ಕು ವರ್ಷ ಮುಂದುವರೆದ ಇನ್ನೂ ಸುಮಾರು ಐದು ಸಾವಿರ ಮಂದಿ ಹುತಾತ್ಮರಾದ ವೀರ ತೆಲಂಗಾಣ ಹೋರಾಟದ ಮೊದಲ ಹುತಾತ್ಮ ಆತ.


ದೊಡ್ಡಿ ಕೊಮರಯ್ಯ ಹುತಾತ್ಮನಾದ ಸುದ್ದಿ ಕಾಳ್ಗಿಚ್ಚಿನಂತೆ ಹರಡಿ ಪ್ರತಿರೋಧದ ಜ್ವಾಲೆ ಇಡೀ ತೆಲಂಗಾಣಾವನ್ನು ಆವರಿಸಿತು. ಐದು ವರ್ಷಗಳ ಕಾಲ ನಡೆದ ಈ ಹೋರಾಟ



ಒಬ್ಬ ತೆಲಂಗಾಣ ರೈತ ಹೋರಾಟಗಾರ

ಮೊದಲಿಗೆ ಬ್ರಿಟಿಶ್ ಪರವಾಗಿದ್ದ ನಿಜಾಮಶಾಹಿ ಹಾಗೂ ಧರ್ಮಾಂಧ ರಜಾಕಾರ ಪಡೆಗಳ ವಿರುದ್ಧ ನಡೆದರೆ, ಕೊನೆಯ ಹಂತದಲ್ಲಿ ಭೂಮಾಲಕರ ಪರ ವಹಿಸಿ ನಿಂತ ಹೊಸದಾಗಿ ಅಧಿಕಾರ ವಹಿಸಿಕೊಂಡ ಭಾರತೀಯ ಆಳುವ ಮಂದಿಯ ವಿರುದ್ಧವೂ ನಡೆಯಿತು. ಈ ವೀರ ಹೋರಾಟದಿಂದಾಗಿ ಹೈದರಾಬಾದ್ ಸಂಸ್ಥಾನ ನಿಜಾಮನ ಬಯಕೆಗೆ ವಿರುದ್ಧವಾಗಿ ಸ್ವತಂತ್ರ ಭಾರತ ಒಕ್ಕೂಟವನ್ನು ಸೇರುವಂತಾಯಿತು ಎಂಬುದು ಗಮನಾರ್ಹ.

ಈ ಹೋರಾಟದಲ್ಲಿ 5000 ಮಂದಿ ಹುತಾತ್ಮರಾದುದಲ್ಲದೆ 10ಸಾವಿರ ಕಮ್ಯುನಿಸ್ಟರು, ಹಿತೈಷಿಗಳು ಜೈಲುಗಳಲ್ಲಿ, ಸುಮಾರು 50ಸಾವಿರ ಮಂದಿ ಮಿಲಿಟರಿ, ಪೊಲೀಸ್ ಕ್ಯಾಂಪುಗಳಲ್ಲಿ ಚಿತ್ರಹಿಂಸೆ ಅನುಭವಿಸಿದರು. ಸಾವಿರಾರು ಹಳ್ಳಿಗಳಲ್ಲಿ ಲಕ್ಷಾಂತರ ಮಂದಿ ತಮ್ಮದೆಲ್ಲವನ್ನೂ ಕಳಕೊಂಡರು, ಸಾವಿರಾರು ಮಹಿಳೆಯರು ಅತ್ಯಾಚಾರಕ್ಕೊಳಗಾದರು. ಇವರೆಲ್ಲಾ ಕೃಷಿಕಾರ್ಮಿಕರು ಮತ್ತು ಬಡರೈತರು. ಸುಮಾರು ಮೂರು ಸಾವಿರ ಹಳ್ಳಿಗಳನ್ನು





ನಿಜಾಮಶಾಹಿಯಿಂದ, ಅದರ ಬೆನ್ನೆಲುಬಾಗಿದ್ದ ದೇಶಮುಖರ ಶೋಷಣೆಯಿಂದ ವಿಮೋಚನೆಗೊಳಿಸಿ ಈ ಶ್ರಮಜೀವಿಗಳು ತಮ್ಮ ಬದುಕಿನಲ್ಲಿ ಮೊತ್ತಮೊದಲ ಬಾರಿಗೆ ಮನುಷ್ಯರಾಗಿ ಬದುಕಲು ಅವಕಾಶ ಮಾಡಿಕೊಟ್ಟ ನಿಜವಾದ ಅರ್ಥದ ಜನತಾ ಆಡಳಿತ ಸ್ಥಾಪಿಸಿದ್ದರು.

ಈ ಹೋರಾಟ 1855ರ ಸಂತಾಲ ಬಂಡಾಯ, 1857-58ರ ಮಹಾನ್ ಬಂಡಾಯದ ನಂತರ ವಸಾಹತುಶಾಹೀ ಅವಧಿಯಲ್ಲಿ ಕೊನೆಯಲ್ಲಿ ನಡೆದ ಅತ್ಯಂತ ದೊಡ್ಡ ಸಶಸ್ತ್ರ ಹೋರಾಟವಾಗಿತ್ತು.

(ಮುಂದುವರಿಯುವುದು)

ಸಾರ್ವಜನಿಕ ಆಸ್ತಿ ದೇಶೀ ಖಾಸಗಿಯವರಿಗೆ

ಸಾರ್ವಜನಿಕ ಆಸ್ತಿಯನ್ನು ಮಾರಾಟ ಮಾಡಲು ಬಿಜೆಪಿ ಹೊರಟಿದೆ. ಅದಕ್ಕೆ ದೇಶೀ ಮಾರುಕಟ್ಟೆಗೆ ಆದ್ಯತೆ ನೀಡುವ ಘನತೆಯ ಸೋಗು ಬೇರೆ. ವಿಷಯವೇನೆಂದರೆ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಾರಾಟ ಮಾಡಲು ಬಿಜೆಪಿ ಹೊರಟಿದೆ. ಇಲ್ಲಿ ಅದಕ್ಕೆ ಬಹಳ ಆತುರವೂ ಇರುವಂತಿದೆ. ಅದಕ್ಕೆ ದೊಡ್ಡದಾಗಿ ವಿದೇಶೀ ಮಾರುಕಟ್ಟೆಗೆ ಮಾರಲು ಅವಕಾಶವಿಲ್ಲ. ಮೊದಲ ಅವಕಾಶ ದೇಶೀ ಮಾರುಕಟ್ಟೆಗೆ ಎಂಬ ದೊಡ್ಡ ಸಂಭಾವಿತ ಮುಖವಾಡ. ಇಂತಹ ದೇಶೀ ಪಕ್ಷಪಾತಕ್ಕೆ (?) ಏನು ಕಾರಣ? ಬಿಜೆಪಿಯ ಪ್ರಕಾರ ಭಾರತ ದೇಶದ ಜನ ತೆತ್ತ ತೆರಿಗೆಯಿಂದ ಈ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕಟ್ಟಲಾಯಿತು. ಆದ್ದರಿಂದ ದೇಶೀ ಮಾರುಕಟ್ಟೆಗೆ ಮೊದಲ ಆದ್ಯತೆ ನೀಡುವುದು ಸಮಂಜಸ.

ಈ ಮೇಲಿನ ತರ್ಕ ಮೊದಲ ನೋಟಕ್ಕೆ ಸರಿಯೆನಿಸೀತು. ಆದರೆ ಇದು ಸರಿಯೇ? ಸಾರ್ವಜನಿಕರು ನೀಡಿದ ತೆರಿಗೆ ಹಣದಿಂದ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕಟ್ಟಲಾಯಿತು ಎಂಬುದು ನಿಜ. ಆದರೆ ಸಾರ್ವಜನಿಕರು ಎಂದರೆ ಈ ದೇಶದ ಶ್ರೀಮಂತರು ಮಾತ್ರವೇ? ಖಂಡಿತವಾಗಿ ಅಲ್ಲ. ದೇಶದ ಎಲ್ಲ ಸ್ತರದ ಜನ ತೆರಿಗೆ ತೆತ್ತಿದ್ದಾರೆ. ಆ ತೆರಿಗೆಯಿಂದ ಈ ಉದ್ದಿಮೆಗಳನ್ನು ಸ್ಥಾಪಿಸಿರುವಾಗ ಈಗ ಕೆಲವೇ ಕೆಲವು ಬಂಡವಾಳಿಗರು (ಬಹುತೇಕ ಕಪ್ಪು ಹಣ ಕೂಡಿ ಹಾಕಿರುವವರಿರಬಹುದು- ತೆರಿಗೆ ತಪ್ಪಿಸಿ ಕೊಂಡವರಿರಬಹುದು) ಇದರ ಲಾಭ ಪಡೆಯಲು ಅವಕಾಶ ಮಾಡಿಕೊಡುವುದು ಸರಿಯೇ ಎಂಬುದು ಪ್ರಶ್ನೆ.

ಇಲ್ಲಿ ಇನ್ನೊಂದು ಪ್ರಶ್ನೆ. ಈ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಯಾಕೆ ಸ್ಥಾಪಿಸಿದರು ಎಂಬುದು. ಸ್ವಾತಂತ್ರ್ಯ ಬಂದ ನಂತರ ಸಾಮ್ರಾಜ್ಯಶಾಹಿಗಳು ಭಾರತದ ಔದ್ಯಮೀಕರಣಕ್ಕೆ ನೆರವು ನೀಡಲು ಮುಂದೆ ಬಾರದೇ ಇದ್ದಾಗ ಔದ್ಯಮೀಕರಣದ ಮೂಲಕ ಸ್ವಾವಲಂಬನೆ ಸಾಧಿಸುವ ಸಲುವಾಗಿ ಈ ಉದ್ದಿಮೆಗಳನ್ನು ಸ್ಥಾಪಿಸಲಾಯಿತು. ಇಂದು ಅವು ದೇಶದ ಸ್ವಾವಲಂಬನೆಯ ಜೀವಂತ ಲಾಂಛನಗಳಾಗಿವೆ. ಲಕ್ಷ ಲಕ್ಷ ಜನರಿಗೆ ಉದ್ಯೋಗಗಳನ್ನು ಒದಗಿಸಿವೆ. ಸಹಸ್ರ ಸಹಸ್ರ ಸಣ್ಣ, ಗುಡಿ ಕೈಗಾರಿಕೆಗಳಿಗೆ ಅವಕಾಶ ಮಾಡಿಕೊಟ್ಟಿವೆ. ದೇಶದ ಅಧಿಕಾರಕ್ಕೆ ಬಲ ನೀಡಿವೆ. ಹೀಗಿರುವಾಗ ಅವುಗಳ ಮಾರಾಟ ದೇಶೀ ಶ್ರೀಮಂತರಿಗೆ ಮಾತ್ರ ಎಂದರೆ ಅದಕ್ಕೆ ಏನರ್ಥ?

ದೇಶೀ ಬಂಡವಾಳಿಗರು ವಿದೇಶಿಯರಿಗೆ ಇವುಗಳನ್ನು ಮಾರುವುದಿಲ್ಲ ಎಂಬ ಭರವಸೆಯಿಲ್ಲ. ಇರುವ ಕಾರ್ಮಿಕರನ್ನು ಉದ್ಯೋಗಿಗಳನ್ನು ಕೆಲಸದಿಂದ ತೆಗೆದು ಹಾಕುವುದಿಲ್ಲವೆಂದೇನಿಲ್ಲ. ಹೀಗೆ ಈ ಮಾರಾಟ ಭಾರತೀಯ ಜನ ಸಾಮಾನ್ಯರಿಗೆ ಕಷ್ಟಗಳನ್ನೇ ತಂದೊಡ್ಡುವಾಗ ಬಿಜೆಪಿ ನಾವು ದೇಶೀಯರಿಗೆ ಮಾತ್ರ ಈ ಶೇರುಗಳ ಮಾರಾಟ ಮಾಡುವುದು ಎಂದರೆ ಅದಕ್ಕೆ ಅರ್ಥವಿದೆಯೇ?

ಬಹುರಾಷ್ಟ್ರೀಯ ಕಂಪನಿಗಳಿಂದ ಭಾರತೀಯ ಕಂಪನಿಗಳಿಗೆ ರಕ್ಷಣೆ ಬೇಕು

ಉದಾರೀಕರಣವನ್ನು ಜೋರಾಗಿ ಸ್ವಾಗತಿಸುವ ಈ ದಿನಗಳಲ್ಲಿ ಇಂತಹ ಹೇಳಿಕೆಯನ್ನು ಯಾರು ನೀಡಿದರು ಎಂದು ಆಶ್ಚರ್ಯ ಪಟ್ಟಿರೆ? ಹೀರೊ ಹೋಂಡಾ ಕಂಪನಿಯ ಅಧ್ಯಕ್ಷ ಬೃಜ್‌ಮೋಹನ್ ಲಾಲ್ ಮಂಜಲ್ ಎಂಬಾತನೇ ಈ ರೀತಿಯ ಹೇಳಿಕೆ ನೀಡಿರುವುದು.

ಜಂಟಿ ಸಾಹಸಗಳಲ್ಲಿ ಈ ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಸಹಭಾಗಿತ್ವವನ್ನು ಎತ್ತಿ ಹೊರಕ್ಕೆಸೆಯುವುದು ಸಾಮಾನ್ಯ. ಆದ್ದರಿಂದ ಇಂತಹ ಏಕೀಕರಣದಿಂದ ದೇಶೀ ಕಂಪನಿಗಳಿಗೆ ರಕ್ಷಣೆ ನೀಡಬೇಕೆಂಬುದೇ ಈತನ ಅಹವಾಲು.

ಅವರ ಪ್ರಕಾರ ಈ ವಿದೇಶೀ ಕಂಪನಿಗಳು ಜಂಟಿ ಸಾಹಸಗಳ ಹೆಸರಿನಲ್ಲಿ ಭಾರತದ ಯೋಜನೆಗಳಲ್ಲಿ ಭಾಗವಹಿಸುತ್ತಾರೆ. ಅನಂತರ ಹೆಚ್ಚಿನ ಬಂಡವಾಳ ಹೂಡುವ ನೆಪದಲ್ಲಿ ದೇಶೀ ಕಂಪನಿಗಳು ತಮ್ಮ ಪಾಲುದಾರಿಕೆಯನ್ನೇ ಮಾರಾಟ ಮಾಡುವಂತಹ ಸ್ಥಿತಿಯನ್ನು ತಂದೊಡ್ಡುತ್ತಾರೆ. ಆದ್ದರಿಂದ ಈ ರೀತಿಯ ಪಾಲುದಾರಿಕೆ ಮಾರಾಟವನ್ನು ತಡೆಯುವಂತಹ ನಿರ್ಬಂಧಗಳು ಇರಬೇಕು ಎಂದು ಅವರು ಹೇಳಿದ್ದಾರೆ.

ಇಂದು ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿರುವುದರಿಂದ ಈತ ಹೀಗೆ ಹೇಳುತ್ತಿರಬಹುದು. ಆದರೆ ಇಂತಹ ಪರಿಸ್ಥಿತಿಯನ್ನು ದೇಶದ ಹಲವಾರು ಕಂಪನಿಗಳು ಎದುರಿಸುತ್ತಿರುವುದು ನಿಜ.

ಉದಾರೀಕರಣ ಬೇಕು ಎನ್ನುವಾಗ ಅರೆಬರೆ ಉದಾರೀಕರಣ ಮಾಡುತ್ತೇವೆಂದರೆ ಸಾಮ್ರಾಜ್ಯಶಾಹಿ ದೇಶಗಳು ಮತ್ತು ಅವುಗಳ ಏಜೆಂಟರು ಒತ್ತಡ ಹೇರತೊಡಗುತ್ತಾರೆ ಇನ್ನೂ ಹೆಚ್ಚಿನ ಉದಾರೀಕರಣ ಆಗಬೇಕೆಂದು. ಆದ್ದರಿಂದಲೇ ಒಮ್ಮೆ ಉದಾರೀಕರಣ ಪ್ರಾರಂಭಿಸಿದ ಮೇಲೆ ಅದನ್ನು ನಮಗೆ ಬೇಕಾದಷ್ಟಕ್ಕೇ ನಿಲ್ಲಿಸಲು ಸಾಧ್ಯವಾಗುವುದಿಲ್ಲ. ಅಂತಹ ಬಲೆಯನ್ನೇ ಸಾಮ್ರಾಜ್ಯ ಶಾಹಿಗಳು ಬೀಸುವುದು. ಅಲ್ಲದೆ ನಮ್ಮ ಆಂತರಿಕ ಸಾಮರ್ಥ್ಯ ಸ್ವಾವಲಂಬನೆ ಹೆಚ್ಚಿಸಿಕೊಳ್ಳದೆ ನಮಗೆ ಅಭಿವೃದ್ಧಿ ಹೊಂದಿದ ದೇಶಗಳೊಂದಿಗೆ ಚೌಕಾಸಿ ಮಾಡಲು ಸಾಧ್ಯವಾಗುವುದಿಲ್ಲ. ನಮ್ಮ ದೌರ್ಬಲ್ಯಗಳನ್ನು ಗಮನಿಸಿಯೇ ಸಾಮ್ರಾಜ್ಯಶಾಹಿ ದೇಶಗಳು ತಮಗೆ ಬೇಕಾದ ರೀತಿಯ ಉದಾರೀಕರಣವನ್ನು ಮಾಡುವಂತೆ ಒತ್ತಡ ಹೇರುತ್ತಿವೆ.

ಕರ್ನಾಟಕದಲ್ಲಿ ಶೇ 20 ರಷ್ಟು ವಿದ್ಯುತ್‌ಕಡಿತ

ದುರ್ಭಿಕ್ಷದಲ್ಲಿ ಅಧಿಕ ಮಾಸ ಎಂಬಂತೆ ಈಗಾಗಲೇ ಔದ್ಯಮಿಕ ರಂಗದಲ್ಲಿ ಹಿಂಜರಿತವಿರುವಾಗ ಕರ್ನಾಟಕ ಸರ್ಕಾರ ರಾಜ್ಯದಾದ್ಯಂತ ಉದ್ದಿಮೆಗಳಿಗೆ ಶೇ 20 ರಷ್ಟು ವಿದ್ಯುತ್‌ಕಡಿತವನ್ನು ಘೋಷಿಸಿದೆ.

ವಿದ್ಯುತ್ ಎಂಬುದು ಅಭಿವೃದ್ಧಿಯ ಜೀವಾಳ. ವಿದ್ಯುತ್ ಇಲ್ಲದೆ ಆಧುನಿಕ ಅರ್ಥದಲ್ಲಿ ಅಭಿವೃದ್ಧಿ ಸಾಧ್ಯವೇ ಇಲ್ಲ. ಹೀಗಿರುವಾಗ ವಿದ್ಯುತ್ ಕೊರತೆ ಬಾರದಂತೆ ಸರ್ಕಾರಗಳು ನೋಡಿಕೊಳ್ಳಬೇಕು. ಆದರೆ ಬೂರ್ಝ್ವಾ ಸರ್ಕಾರಗಳು ತಮ್ಮ ಅಲ್ಪಕಾಲೀನ ಹಿತಾಸಕ್ತಿಗಳಲ್ಲಿ ಮುಳುಗಿ ಹೋಗುವುದರಿಂದ ರಾಜ್ಯ ಮತ್ತು ದೇಶದ ದೀರ್ಘಕಾಲೀನ ಅಭಿವೃದ್ಧಿಯ ದೃಷ್ಟಿಕೋನವೇ ಅವಕ್ಕೆ ದಕ್ಕುವುದಿಲ್ಲ.

ಈಗಾಗಲೇ ದೇಶದಾದ್ಯಂತ ಉದಾರೀಕರಣದ ಕನಸಿನ ಬಜೆಟುಗಳು ಆರ್ಥಿಕ ಹಿಂಜರಿತವನ್ನು ತಂದೊಡ್ಡಿವೆ. ಔದ್ಯಮಿಕ ರೋಗಗ್ರಸ್ತತೆ ಹೆಚ್ಚಾಗಿದೆ. ಹಲವು ಘಟಕಗಳು ಮುಚ್ಚಿ ಹೋಗಿರುವುದರಿಂದ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಒಟ್ಟಾರೆ ವಿದ್ಯುತ್ತಿನ ಬಳಕೆಯು ಕಡಿಮೆಯಾಗಿದೆ.

ಹೀಗಿರುವಾಗ ಈಗಿರುವ ಬೇಡಿಕೆಯ ಮೇಲೆ ಶೇ 20ರ ಕಡಿತವನ್ನು ಹೇರುವುದರಿಂದ ಔದ್ಯಮಿಕ ಬೆಳವಣಿಗೆ ಉತ್ಪಾದನೆ ಇವೆಲ್ಲ ಕುಸಿಯುತ್ತವೆ. ಇದರಿಂದಾಗಿ ಒಟ್ಟಾರೆ ಅಭಿವೃದ್ಧಿಗೆ ಹೊಡೆತ ಬೀಳುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಪಶ್ಚಿಮ ಬಂಗಾಳದಲ್ಲಿ ಮಾಡಿರುವ ಸಾಧನೆಯನ್ನು ಗಮನಿಸ ಬೇಕು. ರಾಜ್ಯಕ್ಕೆ ಕೇಂದ್ರದ ನೆರವು ಕಡಿಮೆ ಪ್ರಮಾಣದಲ್ಲಿದ್ದಾಗಿಯೂ ಪಶ್ಚಿಮ ಬಂಗಾಳ ಸರ್ಕಾರ ಕಳೆದ ಹಲವು ವರ್ಷಗಳಿಂದ ವಿದ್ಯುತ್ತಿಗಾಗಿ ದೊಡ್ಡ ಮೊತ್ತದ ಹಣವನ್ನು ತೆಗೆದಿರಿಸುತ್ತಲೇ ಬಂದಿವೆ. ಇದರಿಂದಾಗಿ ಪಶ್ಚಿಮ ಬಂಗಾಳದಲ್ಲಿ ಇಂದು ವಿದ್ಯುತ್ ಮಿಗುತೆ ಇದೆ. ಅದು ಬೇರೆ ರಾಜ್ಯಗಳಿಗೆ ಈ ವಿದ್ಯುತ್ತನ್ನು ಮಾರಾಟಮಾಡುತ್ತಿದೆ. ಬೂರ್ಝ್ವ ಪಕ್ಷಗಳು ಇದರಿಂದ ಪಾಠ ಕಲಿಯುವವೇ?.

ಆರ್ಥಿಕ ಟಿಪ್ಪಣಿ

ಜಿ.ಎಸ್.ಮಣಿ

ಭಾರತದ ಮೇಲೆ ಅಮೇರಿಕ ಯುರೋಪಿನ ಸಮುದಾಯದ ಒತ್ತಡ

ಬೌದ್ಧಿಕ ಆಸ್ತಿ ಹಕ್ಕುಗಳ ವಿಷಯದಲ್ಲಿ ವಿಶ್ವವ್ಯಾಪಾರ ಸಂಸ್ಥೆಯಲ್ಲಿ ಅಮೇರಿಕ ಮತ್ತು ಯುರೋಪಿನ ಸಮುದಾಯ ಭಾರತದ ಮೇಲೆ ತೀವ್ರ ಒತ್ತಡ ಹೇರಲಿವೆ. ಏಪ್ರಿಲ್ ತಿಂಗಳ ಪ್ರಾರಂಭದಲ್ಲಿ ನಡೆಯಲಿರುವ ಮಾತುಕತೆಗಳಲ್ಲಿ ಅವು ಈ ರೀತಿಯ ಒತ್ತಡ ಹೇರಲು ತಯಾರಿ ನಡೆಸಿವೆ. ಭಾರತದ ಜವಳಿ ಉಡುಪು ಆಹಾರ ಪದಾರ್ಥಗಳ ಮೇಲೆ ಈಗಾಗಲೇ ವಿವಿಧ ರೀತಿಯ ಸುಂಕೇತರ ನಿರ್ಬಂಧಗಳನ್ನು ಹೇರಲಾಗಿದೆ.

ಗ್ಯಾಟ್ ಒಪ್ಪಂದದ ಪ್ರಕಾರ ಭಾರತ ಆರು ವರ್ಷಗಳ ಅವಧಿಯಲ್ಲಿ ಎಲ್ಲ ತರಹದ ಪ್ರಮಾಣಾತ್ಮಕ ನಿರ್ಬಂಧಗಳನ್ನು ತೆಗೆದುಹಾಕುವ ಭರವಸೆ ನೀಡಿತ್ತು. ಇದನ್ನು ಭಾರತ ಹೇಗೆ ಸಾಧಿಸುತ್ತದೆ ಮತ್ತು ಎಂದು ಸಾಧಿಸುತ್ತದೆ ಎಂಬುದು ಈ ದೇಶಗಳ ಪ್ರಶ್ನೆ.

ಇದಲ್ಲದೆ ಭಾರತದ ಟೆಲಿಕಾಂ ಮತ್ತು ಆಟೊಮೊಬೈಲ್ (ಮೋಟಾರು ವಾಹನ) ನೀತಿಗಳ ಬಗೆಗೂ ಈ ದೇಶಗಳು ಒತ್ತಡ ಹೇರುತ್ತಿವೆ. ಭಾರತದ ಆಟೊಮೊಬೈಲ್ ನೀತಿ ಟ್ರಿಮ್ಸ್(ಟ್ರೇಡ್ ರಿಲೇಟೆಡ್ ಇನ್ವೆಸ್ಟಮೆಂಟ್ ಮೆಷರ್ಸ್) ನಲ್ಲಿನ ಭರವಸೆಗಳನ್ನು ಪೂರೈಸುವುದಿಲ್ಲ ಎಂಬುದು ಈ ಅಭಿವೃದ್ಧಿ ಹೊಂದಿದ ದೇಶಗಳ ಪುಕಾರು.

ಇದಲ್ಲದೆ ಕಂಪನಿಗಳ ಮೇಲಿನ ತೆರಿಗೆ ದರಗಳು ವಿದೇಶೀ ಕಂಪನಿಗಳ ಮೇಲಿನ ತಾರತಮ್ಯಗಳು ಇತ್ಯಾದಿ ಚರ್ಚೆಗೆ ಬರಲಿವೆ.

ಗ್ಯಾಟ್ ಒಪ್ಪಂದವನ್ನು ಪೂರ್ತಿ ವಿರೋಧಿಸದೆ ಅದರ ಪರವಾಗಿಯೇ ಮಾತನಾಡಿದ ಬಿಜೆಪಿ ಭಾರತದ ಹಿತಾಸಕ್ತಿಗಳನ್ನು ಕಾಯುವಲ್ಲಿ ಹೆಚ್ಚಿನ ಆಸಕ್ತಿ ತೋರುವ ಬಗ್ಗೆ ಆಸೆಯಿಟ್ಟುಕೊಳ್ಳುವುದು ಅತಿ ಆಶಾವಾದವಾದೀತಲ್ಲವೆ?

ವಿದೇಶೀ ನೇರ ಹೂಡಿಕೆಗೆ ರಿಯಾಯಿತಿ

ವಿದೇಶೀ ನೇರ ಹೂಡಿಕೆಯ ವಿರುದ್ಧ ಅದರಲ್ಲೂ ಬಳಕೆ ವಸ್ತುಗಳ ಕ್ಷೇತ್ರಗಳಲ್ಲಿ ಅವುಗಳ ಅನವಶ್ಯಕತೆಯ ಬಗ್ಗೆ ಅಬ್ಬರಿಸಿದ್ದ ಬಿಜೆಪಿ ಸರ್ಕಾರ ಈಗಾಗಲೇ ಈ ವಿದೇಶೀ ನೇರ ಹೂಡಿಕೆಯ ಬಗೆಗೆ ಮೃದು ಧೋರಣೆ ತಾಳತೊಡಗಿದೆ. ಅತ್ಯಂತ ಪ್ರಗತಿಪರ ಕಾಳಜಿಯುಳ್ಳ ಸರ್ಕಾರದಂತೆ ಅಬ್ಬರಿಸುವ ಬಿಜೆಪಿ ಸರ್ಕಾರ ಅದೇ ಸಮಯದಲ್ಲಿ ತದ್ವಿರುದ್ಧವಾದದ್ದನ್ನು ಮಾಡ ಹೊರಡುವುದು ಬಹಳ ಮೋಜಿನವಾಗಿದೆ.

ಆದ್ಯತೆಯ ಕ್ಷೇತ್ರವಲ್ಲದ ವಲಯಗಳಲ್ಲಿ ವಿದೇಶೀ ನೇರ ಹೂಡಿಕೆಯನ್ನು ನಕಾರಾತ್ಮಕ ಪಟ್ಟಿಯಲ್ಲಿ ಸೇರಿಸುವ ಮಾತನ್ನು ಬಿಜೆಪಿ ಮೊದಲು ಆಡಿತ್ತು. ಇದರಲ್ಲಿ ಬಳಕೆ ವಸ್ತುಗಳು ಸೇರಿದ್ದವು. ಈಗ ಬಿಜೆಪಿ ಸರ್ಕಾರ ಎಲ್ಲ ಪ್ರಸ್ತಾಪಗಳನ್ನು ಅವುಗಳ ಶಕ್ತಿಸಾಮರ್ಥ್ಯದ ಆಧಾರದ ಮೇಲೆ ಮಾತ್ರ ಪರಿಗಣಿಸಲಾಗುವುದು ಎಂದು ಹೇಳಿದೆ. ಆದ್ಯತೆ ಮತ್ತು ಆದ್ಯತೆಯಿಲ್ಲದ ಪಟ್ಟಿ ಮಾಡುವ ಸಾಹಸಕ್ಕೂ ಈ ಸರ್ಕಾರ ಹೋಗಿಲ್ಲ. ಹೀಗಿರುವುದರಿಂದ ಈಗ ವಿದೇಶೀ ನೇರ ಹೂಡಿಕೆಯ ಪ್ರಸ್ತಾಪಗಳನ್ನು ಶೀಘ್ರವಾಗಿ ಅನುಮೋದಿಸುವುದು ಸರ್ಕಾರದ ಉದ್ದೇಶ.

ಬಿಜೆಪಿಯ ಪ್ರಣಾಳಿಕೆ ಇದಕ್ಕೆ ವಿರುದ್ಧವಾದದ್ದನ್ನೇ ಹೇಳಿತು. ಮುಖ್ಯ ವಲಯಗಳಲ್ಲಿ ವಿದೇಶೀ ಹೂಡಿಕೆಯನ್ನು ಪ್ರೋತ್ಸಾಹಿಸಿ ಆದ್ಯತೆಯದಲ್ಲದ ಕ್ಷೇತ್ರಗಳಲ್ಲಿ ಈ ಹೂಡಿಕೆಗಳಿಗೆ ತಡೆಯೊಡ್ಡುವುದಾಗಿ ಹೇಳಿತು. ಈಗ ಪ್ರಣಾಳಿಕೆಯಲ್ಲಿನ ಭರವಸೆಯನ್ನೇ ಸರ್ಕಾರ ಮುರಿದಿದೆ.

ಹೇಗಿದೆ ಬಿಜೆಪಿಯ ಮುಖವಾಡ?

ಸೋಲಿಗೆ ಕಾರಣ ಹುಡುಕದ ಜನತಾದಳ – ಕಾಂಗ್ರೆಸ್ ಪಕ್ಷಗಳು

ಎನ್.ಕೆ.ಉಪಾಧ್ಯಾಯ

ಫೆಬ್ರವರಿಯಲ್ಲಿ ಆಕಸ್ಮಿಕವಾಗಿ ನಡೆದ 12ನೇ ಲೋಕಸಭಾ ಚುನಾವಣೆಯು ಜನತಾದಳ ಮತ್ತು ಕಾಂಗ್ರೆಸ್ ಪಕ್ಷಗಳ ಮುಖಂಡರಲ್ಲಿ ಹಾಗೂ ಕಾರ್ಯಕರ್ತರಲ್ಲಿ ಗಂಭೀರವಾದ ಕೆಟ್ಟ ಪರಿಣಾಮ ಬೀರಿದೆ. ತಮ್ಮ ಪಕ್ಷಗಳಿಗಾದ ಹೀನಾಯ ಸೋಲಿಗೆ ಕಾರಣಗಳೇನೆಂಬುದರ ಕುರಿತು ಆತ್ಮಶೋಧನೆ ನಡೆಸುವ ತುರ್ತು ಕಾರ್ಯ ಗಂಭೀರವಾಗಿಯೇ ಪ್ರಾರಂಭವಾಗಿದೆ. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಅದರ ಮಿತ್ರಗಳೊಂದಿನ ಸರಕಾರ ಅಧಿಕಾರಕ್ಕೆ ಬಂದ ನಂತರ ದೇಶದ ರಾಜಕೀಯದ ಮೇಲೆ, ವಿರೋಧ ಪಕ್ಷಗಳು ನಡೆಸುತ್ತಿರುವ ರಾಜ್ಯ ಸರಕಾರಗಳ ಮೇಲೆ ಅದೆಂಥ ಪರಿಣಾಮ ಬೀರಬಹುದೆಂಬುದನ್ನು ಈಗಲೇ ಊಹಿಸಲು ಸಾಧ್ಯವಾಗದಿದ್ದರೂ, ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ಧೋರಣೆಯಿಂದ ಮುಂದಾಗಬಹುದಾದ ಪರಿಣಾಮಗಳ ಗಾಂಭೀರ್ಯವನ್ನು ತಿಳಿದುಕೊಳ್ಳಲು ಕಷ್ಟಸಾಧ್ಯ ವೇನಿಲ್ಲೆಂದು ಹೇಳಬಹುದು. ಸಿಪಿಐ(ಎಂ) ಮತ್ತು ಇತರ ಮೂರು ಎಡಪಕ್ಷಗಳು ಈಗಾಗಲೇ ಮುಂದುಂಟಾಗಬಹುದಾದ ಅಪಾಯದ ಕುರಿತು ದೇಶದ ಜನರಿಗೆ ಹಾಗೆಯೇ ಸಂಯುಕ್ತ ರಂಗದ ಭಾಗಿದಾರರಿಗೆ ಮತ್ತು ಕಾಂಗ್ರೆಸ್ಸಿಗೆ ಎಚ್ಚರಿಕೆ ನೀಡಿವೆ. ತಮ್ಮ ಪಕ್ಷಗಳ ಹೀನಾಯ ಸೋಲು, ದೇಶದ ಐಕ್ಯತೆ, ಸಾರ್ವಭೌಮತೆಗೆ, ಜಾತ್ಯಾತೀತತೆಗೆ ಉಂಟಾಗಬಹುದಾದ ಅಪಾಯಗಳ ಕುರಿತು ಆಳವಾದ ಚಿಂತನೆ ಅಗತ್ಯ ಎಂಬುದನ್ನು ಕಾಂಗ್ರೆಸ್, ಜನತಾದಳ ಪಕ್ಷಗಳು ಅರ್ಥೈಸಿ ಕೊಂಡಂತೆ ಕಂಡುಬರುತ್ತದೆ.

ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ಸಿಗೆ ದೊಡ್ಡ ಸೋಲೇನಾಗಲಿಲ್ಲ. ಹೋದ ಚುನಾವಣೆಯಲ್ಲಿ 5 ಸ್ಥಾನಗಳಿಸಿದ ಕಾಂಗ್ರೆಸ್ ಈ ಸಲ 9 ಸ್ಥಾನಗಳಿಸಿದೆ. ಅಂದರೆ ನಾಲ್ಕು ಸ್ಥಾನ ಹೆಚ್ಚು ಪಡೆದಿದೆ. ಆದರೆ 1996 ರ ಚುನಾವಣೆಯ ನಂತರ ನಡೆದ ಜಿಲ್ಲಾ ಪಂಚಾಯತ್, ತಾಲೂಕು, ಗ್ರಾಮ ಪಂಚಾಯತ್ ಹಾಗೆಯೇ ವಿಧಾನ ಸಭೆಗೆ ನಡೆದ 3 ಉಪ ಚುನಾವಣೆ ಪೈಕಿ ಎರಡರಲ್ಲಿ ಗೆಲುವು ಕಂಡ ಕಾಂಗ್ರೆಸ್ಸಿಗೆ 12ನೇಯ ಲೋಕಸಭೆ ಚುನಾವಣೆ ಸಮಾಧಾನ ಉಂಟುಮಾಡಲು ಸಾಧ್ಯವಿಲ್ಲ. ಹೆಚ್ಚು ಸ್ಥಾನಗಳಿಸುವ ಆಸೆ ಹೊಂದಿದ್ದರೆ ಅದು ಸಹಜವಾಗಿತ್ತು. ಆದರೆ ಕಾಂಗ್ರೆಸ್ಸಿನೊಳಗಿರುವ ಗುಂಪುಗಾರಿಕೆ, ಆಂತರಿಕ ಭಿನ್ನಾಭಿಪ್ರಾಯ, ಕೊನೆಗಳಿಗೆಯಲ್ಲಿ ಜಾತಿ, ವ್ಯಕ್ತಿ ಆಧಾರದಲ್ಲಿ ಉಮೇದುವಾರ ಬದಲಾವಣೆಗಳಿಂದಾಗಿ ಕಾಂಗ್ರೆಸ್ ಕೆಲವು ಕಡೆ ಸೋಲನ್ನನುಭವಿಸಬೇಕಾಯಿತೆಂಬುದನ್ನು ಕಾಂಗ್ರೆಸ್ ಮುಖಂಡರು ಮರೆಯಲಾರರು.

ಮಂಗಳೂರು, ಉಡುಪಿ, ಚಾಮರಾಜನಗರ ಮತ್ತಿನ್ನಿತರ ಕೆಲವು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲುವ ವಾತಾವರಣವಿದ್ದರೂ, ಮುಖಂಡರೊಳಗಿನ ವೈರತ್ವದಿಂದಾಗಿ ಬಾಯಿಗೆ ಬರತಕ್ಕ ತುತ್ತನ್ನು ಕಳಕೊಳ್ಳಬೇಕಾಯಿತು.

ಈಗ ರಾಜಶೇಖರ್ ರೆಡ್ಡಿಯವರ ನೇತೃತ್ವದಲ್ಲಿ ಸೋನಿಯಾಗಾಂಧಿ ಅವರ ಆದೇಶದಂತೆ ನಾಲ್ಕು ಜನರ ಒಂದು ತಂಡ ಬೆಂಗಳೂರಿಗೆ ಬಂದು ಇಲ್ಲಿಯ ಕಾಂಗ್ರೆಸ್ ಸಂಘಟನೆಯ ಅಧ್ಯಯನ ನಡೆಸಿ ಹೋಗಿದ್ದಾರೆ. ಅವರು ಇಲ್ಲಿ ತಮ್ಮ ಅಧ್ಯಯನ ನಡೆಸುತ್ತಿದ್ದಾಗಲೇ ಅವರ ಸಮಕ್ಷಮ ಎರಡು ಗುಂಪುಗಳ ನಡುವೆ ತೀವ್ರ ಹೊಡೆದಾಟ ನಡೆದ ಸಂಗತಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಹಳೇ ಮುಖಂಡರ ವಿರುದ್ಧ ಯುವಕರು ಬಂಡಾಯ ಎದ್ದಿರುವಂತೆ ಕಂಡು ಬರುತ್ತದೆ. ಕೆಳಮಟ್ಟದಿಂದಲೇ ಪಕ್ಷದ ಸಂಘಟನೆ ಬೆಳೆದು ಬರಬೇಕೆಂಬ, ಜಡತ್ವ, ಅಶಿಸ್ತು ಹೋಗಬೇಕೆಂಬ ಸೋನಿಯಾ ಗಾಂಧಿಯವರ ಕರೆ ಇಲ್ಲಿಯ ಕಾಂಗ್ರೆಸ್ ಪಕ್ಷದೊಳಗೆ ಮೂಡಿಬರುವ ಲಕ್ಷಣಗಳಿಲ್ಲದಂತೆ ಕಂಡು ಬರುತ್ತದೆ. ತಮ್ಮ ಸೋಲಿನ ಕಹಿ ಅನುಭವವನ್ನು ಕಾಂಗ್ರೆಸ್ ಮುಖಂಡರು ಕರಗಿಸಿ ಕೊಂಡಂತೆ ಕಂಡು ಬರುವುದಿಲ್ಲ.

ಜನತಾದಳದ ವಿಮರ್ಶೆ

ಲೋಕಸಭಾ ಚುನಾವಣೆಯಲ್ಲಿ ಅತ್ಯಂತ ಹೀನಾಯ ಸೋಲನ್ನು ಅನುಭವಿಸಿದ್ದು, ರಾಜ್ಯದಲ್ಲಿ ಅಧಿಕಾರದಲ್ಲಿರುವ ಕೇಂದ್ರದಲ್ಲಿಯೂ ಅಧಿಕಾರದಲ್ಲಿದ್ದ ಜನತಾದಳ 16 ಸ್ಥಾನದಿಂದ 3 ಸ್ಥಾನಕ್ಕಿಳಿದು ಮುಖ ತಗ್ಗಿಸಿಕೊಳ್ಳುವಂತಾಗಿದೆ, ಇಂಥ ಹೀನಾಯ ಸೋಲಿಗೆ ಕಾರಣ ಹುಡುಕಲು, ಆತ್ಮಾವಲೋಕನ ಮಾಡಿಕೊಳ್ಳಲು ಜನತಾದಳದ ಮುಖಂಡರೆಲ್ಲ ಬೆಂಗಳೂರಿನಲ್ಲಿ ಸೇರಿ ಚಿಂತನೆ ನಡೆಸಿ 'ಮುಖಂಡರ ಕಚ್ಚಾಟವೇ ತಮ್ಮ ಸೋಲಿಗೆ ಕಾರಣ' ಎಂದು ಸಂಶೋದನೆ ಮಾಡಿ ವಾಸ್ತವ ಪರಿಸ್ಥಿತಿಗನುಗುಣವಾಗಿಲ್ಲೆಂದೇ ಹೇಳಬೇಕಾಗುತ್ತದೆ. ತಮ್ಮ ಸೋಲಿಗೆ ಕಾರಣಗಳೇನೆಂಬುದನ್ನು ವಿಶ್ಲೇಷಿಸುತ್ತಾ ಮುಖ್ಯಮಂತ್ರಿ ಜೆ.ಎಚ್. ಪಟೇಲರು ಈ ಬಾರಿ ವಾಜಪೇಯಿ ಅವರೇ ಪ್ರಧಾನಿ ಆಗಬೇಕೆಂಬ ತೀರ್ಮಾನಕ್ಕೆ ಮತದಾರರು ಬಂದಿದ್ದರು. ಹೀಗಾಗಿ ಮತದಾರರು ಕಣ್ಣು ಮುಚ್ಚಿ ದೊಣ್ಣೆಯನ್ನು ಬೀಸಿದ್ದಾರೆ. ಹಾಗೆ ಬೀಸಿದ ದೊಣ್ಣೆಗೆ ಬಹಳ ತಲೆಗಳು ಉರುಳಿವೆ ಎಂದು ಹೇಳಿದ್ದಾರೆ. ಬಂಡವಾಳಶಾಹಿ ಪತ್ರಿಕೆಗಳೂ, ಟಿ.ವಿ. ಮೊದಲಾದ ಪ್ರಚಾರಮಾಧ್ಯಮಗಳೂ ವಾಜಪೇಯಿಯವರ ಕುರಿತು ಗೊಬೆಲ್ಸ್‌ರ ಪ್ರಚಾರ ನಡೆಸಿದ್ದರೂ, ರಾಜ್ಯದಲ್ಲಿ ಬಿಜೆಪಿ ಗೆಲುವಿಗೆ, ಜನತಾದಳದ ಸೋಲಿಗೆ ಅದೊಂದೇ ಮುಖ್ಯ ಕಾರಣವಲ್ಲ, ಅದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾದ ಕಾರಣಗಳಿವೆಂಬುದನ್ನು ಜೆ.ಎಚ್.ಪಟೇಲರು ತಿಳಿಯುವುದಗತ್ಯ. ಚುನಾವಣೆಯ ಪೂರ್ವ ದಲ್ಲಿಯೇ ಯಾಕೆ, ಹೋದ ಚುನಾವಣೆಯಲ್ಲಿ ಕಾಂಗ್ರೆ ಸೋಲಿಸಿ, ಜನತಾದಳ ಅಧಿಕಾರಕ್ಕೆ ಬಂದಂದಿನಿಂದಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಜನತಾದಳ ಮುಖಂಡರಿಗೆ ಹಾಗೆಯೇ ಜನತಾದಳ ಸರಕಾರಕ್ಕೆ ಎಚ್ಚರಿಕೆ ನೀಡುತ್ತಾ ಬಂದಿದೆ. ಸರಕಾರ ಜನಪರ ನೀತಿ ಅನುಸರಿಸಬೇಕು. ನೀರಾವರಿಗೆ ಪ್ರಾಧಾನ್ಯತೆ ಕೊಡಬೇಕು, ಕೇಂದ್ರದ ಕೈಗಾರಿಕಾ ನೀತಿಯನ್ನು ಕೈ ಬಿಟ್ಟು ರಾಜ್ಯದ ಸಾರ್ವಜನಿಕ ಕ್ಷೇತ್ರವನ್ನು ಬಲಪಡಿಸುವ, ಬೀಡಿ, ಕೈಮಗ್ಗ, ನೂಲಿನ ಬಟ್ಟೆ ಗಿರಣಿ, ವಿದ್ಯುತ್ ಉತ್ಪಾದನೆಗಳ ಕುರಿತು ಮರು ಚಿಂತನೆ ಮಾಡಬೇಕು, ಅವುಗಳು ಬಲಗೊಳ್ಳುವಂತೆ ಮುಚ್ಚಲ್ಪಡದಂತೆ ನೋಡಿಕೊಳ್ಳಬೇಕು. ರೈತರ, ಕೃಷಿ ಕೂಲಿಗಾರರ, ವಿದ್ಯಾರ್ಥಿ, ಯುವಜನತೆಯ ಸಮಸ್ಯೆಗಳಿಗೆ ಸ್ಪಂದಿಸಬೇಕು, ಭ್ರಷ್ಟಾಚಾರ ತಡೆಗಟ್ಟಿ, ಆಡಳಿತೆಯನ್ನು ಚುರುಕುಗೊಳಿಸಬೇಕು ಎಂಬಲ್ಲ ಸಲಹೆಗಳನ್ನು ನೀಡಿದ್ದು ಮಾತ್ರವಲ್ಲ ನಾನಾ ರೀತಿಯ ಹೋರಾಟಗಳನ್ನು ನಡೆಸಿದ್ದವು. ಆದರೆ ಬಂಡವಾಳಶಾಹಿ ಪ್ರವೃತ್ತಿಯನ್ನು ಬಿಟ್ಟು ಕೊಡಲೊಪ್ಪದ ದಳ ಸರಕಾರ ಮತ್ತು ಪಕ್ಷ, ಜನರ ಕೂಗಿಗೆ ಕಿವಿ ಕೊಡಲಿಲ್ಲ. ಪಂಚಾಯತ್, ಕಾರ್ಪೋರೇಷನ್ ಮುನಿಸಿಪಾಲಿಟಿ, ಶಾಸನ ಸಭೆಗಳ ಉಪಚುನಾವಣೆಗಳ ಸೋಲಿನ ಕುರಿತೂ ಚಿಂತಿಸಲಿಲ್ಲ. ದೇವೇಗೌಡ-ಹೆಗಡೆ ಗುಂಪುಗಳ ವೈರುಧ್ಯ ಮುಂದುವರಿಯಿತು. ಲೋಕಸಭೆ ಚುನಾವಣೆ ಬಂದಾಗ ಜನತಾದಳ-ಅದರ ಸರಕಾರ ಎಲ್ಲಿದೆಂಬ ಪ್ರಶ್ನೆ ಕೇಳಿಬರಲಾರಂಭಿಸಿತು.

ಚುನಾವಣೆ ಘೋಷಣೆಯಾದ ಕೂಡಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿ, ಹಾಗೆಯೇ ವಿದ್ಯಾರ್ಥಿ-ಯುವಜನ ಸಂಘಟನೆಗಳು ಮತದಾರರಲ್ಲಿ ರಾಜಕೀಯ ಜಾಗೃತಿ ಉಂಟುಮಾಡುವ ದೃಷ್ಟಿಯಿಂದ ಹಲವಾರು ಸೂಚನೆಗಳನ್ನು ಜನತಾದಳ ಮುಖಂಡರ ಮುಂದಿಟ್ಟವು. ಜನತಾದಳದ ಮುಖಂಡರು ಅದಕ್ಕೆ ಸರಿಯಾಗಿ ಪ್ರತಿಕ್ರಿಯಿಸಲಿಲ್ಲ. ಚುನಾವಣೆಯಲ್ಲಿ ರಾಜ್ಯಾದ್ಯಂತ ಜಂಟಿ ಪ್ರಚಾರ, ವಿದ್ಯಾರ್ಥಿ-ಯುವಜನತೆಯ ರ‍್ಯಾಲಿಗಳೆಲ್ಲ ನಡೆಯಲಿಲ್ಲ. ಸಿಪಿಐ(ಎಂ) ಜೊತೆಯಲ್ಲಿ ಹೊಂದಾಣಿಕೆಯೂ ಆಗಲಿಲ್ಲ. ಜಾತಿ ಆಧಾರದ ಮೇಲೆ ಗುಂಪುಗಳ ಒತ್ತಾಯಕ್ಕೆ ಮಣಿದು ಉಮೇದುವಾರರನ್ನು ಸ್ಪರ್ಧೆಗಿಳಿಸಲಾಯಿತು. ದಳದ ಮುಖಂಡರೇ ತಮಗಾಗದ ಉಮೇದುವಾರರ ಸಲುವಾಗಿ ಪ್ರಚಾರಕ್ಕಿಳಿಯದೆ ಬಿಜೆಪಿ, ಕಾಂಗ್ರೆಸ್, ಲೋಕಶಕ್ತಿಗಳಿಗೆ ಮತ ಹಾಕಿಸಿದ ಸುದ್ದಿಗಳು ಪ್ರಚಾರದಲ್ಲಿವೆ.

ಜನತಾದಳ ತನ್ನ ಸೋಲಿನಿಂದ ಬುದ್ಧಿ ಕಲಿತಂತೆ ಕಂಡು ಬರುವುದಿಲ್ಲ. ಆದರೆ ಕೇಂದ್ರದಂತೆಯೇ, ರಾಜ್ಯದಲ್ಲಿಯೂ ಅಧಿಕಾರ ಚುಕ್ಕಾಣಿ ಹಿಡಿಯಲು ತುದಿಗಾಲ ಮೇಲೆ ನಿಂತಿರುವ ಬಿಜೆಪಿ ಮುಖಂಡರಿಗೆ ಸರಿಯಾಗಿ ಬುದ್ಧಿ ಕಲಿಸಬೇಕಾದರೆ ಕರ್ನಾಟಕವನ್ನು ಮತೀಯ ಶಕ್ತಿಗಳಿಂದ ಬಚಾವ್ ಮಾಡಬೇಕಾದರೆ ಜನತಾದಳ ತನ್ನ ಸೋಲಿನ, ಆತ್ಮ ಸಂಶೋಧನೆ ಮಾಡಿಕೊಳ್ಳಬೇಕು. ಸಂಘಟನಾ ತಪ್ಪುಗಳನ್ನು ತಿದ್ದಿಕೊಳ್ಳಲೇಬೇಕು. ಕೆಳಹಂತದ ಕಾರ್ಯಕರ್ತರನ್ನು ರಾಜಕೀಯವಾಗಿ ಪಳಗಿಸಬೇಕು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

ಜೆ.ಎಚ್.ಪಟೇಲ್ ಸರಕಾರವನ್ನು ಉರುಳಿಸಿ, ಲೋಕಶಕ್ತಿ-ಬಿಜೆಪಿಯ ಸರಕಾರ ರಚಿಸುವ ರಾಮಕೃಷ್ಣ ಹೆಗಡೆಯವರ ಸಂಚು ಫಲಕಾರಿಯಾಗಲಿಲ್ಲ. ಜಂಟಿ ಸರಕಾರ ರಚನೆಯ ಕುರಿತು ಯಡಿಯೂರಪ್ಪ- ಹೆಗಡೆಯವರ ನಡುವೆ ಭಿನ್ನಾಭಿಪ್ರಾಯವಿದೆ. ಯಡಿಯೂರಪ್ಪನವರಿಗೆ ವಿಧಾನಸಭೆ ವಿಸರ್ಜಿಸಿ ಚುನಾವಣೆ ನಡೆಸಬೇಕೆಂದಿದೆ. ಅದರಿಂದ ಈ ಬಿಸಿ ವಾತಾವರಣದಲ್ಲಿ ತನ್ನ ಪಕ್ಷಕ್ಕೆ ಬಹುಮತ ಲಭಿಸಬಹುದೆಂಬ ಆಸೆ. ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದರೂ ಜೆ.ಎಚ್. ಪಟೇಲ್ ಸರಕಾರ ಉರುಳಿಸುವ ತರಾತುರಿಯನ್ನು ಹೆಗಡೆಯವರು ಕೈ ಬಿಟ್ಟಂತೆ ಕಾಣುತ್ತದೆ. ಶಾಸಕರು ಚುನಾವಣೆ ಎದುರಿಸಲು ತಯಾರಿಲ್ಲ. ಲೋಕಶಕ್ತಿ-ಬಿಜೆಪಿಗೆ ಈಗಿನ ಪರಿಸ್ಥಿತಿಯಲ್ಲಿ ಬಹುಮತ ಸಾಧ್ಯವಾಗಲಿಕ್ಕಿಲ್ಲೆಂಬ ಸಂಶಯ. ಹೀಗಾಗಿ ಸದ್ಯ ಪಟೇಲ ಸರಕಾರಕ್ಕೆ ಅಪಾಯವಿಲ್ಲೆಂದು ಹೇಳಬಹುದು.

ದಳದೊಳಗಿನ ಆಂತರಿಕ ಜಗಳಕ್ಕೆ ಕೊನೆಗೆರೆ ಎಳೆಯಬೇಕು. ಪಿ.ಜಿ.ಆರ್.ಸಿಂಧ್ಯಾ ಮಂತ್ರಿ ಮಂಡಳಕ್ಕೆ ರಾಜೀನಾಮೆ ಕೊಡುವ ಹೊಂಚಿನಲ್ಲಿದ್ದಾರೆ. ಇಂಥ ಘಟನೆಗಳು ನಡೆಯಬಾರದು ಜನತಾದಳ ಎಡಪಕ್ಷಗಳ ಜೊತೆ ಸೇರಿ, ಐಕ್ಯತೆ ಸಾಧಿಸಿದರೆ ಮಾತ್ರ ಜನಪರ ಆಡಳಿತೆ ನಡೆಸಿದರೆ ಮಾತ್ರ ಮುಂದಿನ ಚುನಾವಣೆಯಲ್ಲಿ ಬಿಜೆಪಿ, ಕಾಂಗ್ರೆಸ್ಸನ್ನು ಸೋಲಿಸಿ ಜನತಾದಳ, ಎಡ ಪಕ್ಷಗಳ ಶಕ್ತಿ ಹೆಚ್ಚುಗುವಂತೆ ಮಾಡಲು ಸಾಧ್ಯ.

ಕಿರ್ಲೋಸ್ಕರ್ ಬ್ಯಾಟರೀಸ್ ಕಾರ್ಮಿಕರ ಸತತ ಹೋರಾಟ

ಬೆಂಗಳೂರು ನಗರದ ಕಿರ್ಲೋಸ್ಕರ್ ಬ್ಯಾಟರಿ ಕಂಪನಿಯ ಸುಮಾರು 400 ಕಾರ್ಮಿಕರು ಕಳೆದ ಎರಡು ತಿಂಗಳಿಂದ ಹೋರಾಟದಲ್ಲಿದ್ದಾರೆ. ತಮ್ಮ ಸಂಸ್ಥೆಯ 50 ವರ್ಷಗಳ ಇತಿಹಾಸದಲ್ಲೇ ಕಾಣದ ರೀತಿಯಲ್ಲಿ ದಬ್ಬಾಳಿಕೆ ಮಾಡಿ ನಾಲ್ಕು ಸಂಗಾತಿಗಳನ್ನು ಹೊರ ರಾಜ್ಯಗಳಿಗೆ ವರ್ಗ ಮಾಡಿರುವುದನ್ನು, 17 ಕಾರ್ಮಿಕರನ್ನು ಅಮಾನತ್ತಿಲ್ಲಿಟ್ಟದನ್ನು ಹಾಗೂ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಆಡಳಿತ ಮಂಡಳಿ ನಿರಾಕರಿಸುತ್ತಿರುವುದನ್ನು ಪ್ರತಿಭಟಿಸಿ ಈ ಕಾರ್ಮಿಕರು ಹೋರಾಟದಲ್ಲಿದ್ದಾರೆ.

ಕಿರ್ಲೋಸ್ಕರ್ ಬ್ಯಾಟರೀಸ್ ಯು.ಬಿ. ಗುಂಪಿನಿಂದ ಕಿರ್ಲೋಸ್ಕರ್ ಗುಂಪಿಗೆ ಹಸ್ತಾಂತರಗೊಂಡಾಗ ಕಾರ್ಮಿಕರು ಈ ಹೊಸ ಆಡಳಿತ ಮಂಡಳಿಯಾದರೂ ತಮ್ಮ ಬಹುದಿನಗಳ ಬೇಡಿಕೆ ಈಡೇರಿಸುತ್ತದೆ, ತಮ್ಮ ಸಂಬಳ ಸವಲತ್ತುಗಳು ಹೆಚ್ಚುತ್ತವೆ ಎಂದು ನಿರೀಕ್ಷಿಸಿದ್ದರು. ಅದು ಹುಸಿಯಾಯಿತು. ಕಂಪನಿಯ ಅಧಿಕಾರಿಗಳ ದುರ್ವತನೆಯ ವಿರುದ್ಧ ಸ್ವರ ಎತ್ತಿದಾಗ, ಕಾರ್ಮಿಕರನ್ನು ಹೆದರಿಸಿ, ಏಕ ಪಕ್ಷೀಯವಾಗಿ ಬೇರೆ ವಿಭಾಗಗಳಿಗೆ ವರ್ಗಾಯಿಸಿ ಹಿಂಸಿಸಲಾರಂಭಿಸಿದರು. ಕ್ಲರ್ಕ್‌ಗಳನ್ನು ಅಪರೇಟ್‌ಗಳಾಗಿ ನೇಮಿಸಲಾಯಿತು. ಕಾರ್ಮಿಕರ ಸಂಘವು ಅನ್ಯಾಯದ ವಿರುದ್ಧ ಪ್ರತಿಭಟಿಸಲಾರದಂತಹ ವಾತಾವರಣ ಸೃಷ್ಟಿಸಿ, ಈ ಪದ್ಧತಿಯನ್ನು ದುರುಪಯೋಗ ಪಡಿಸಿಕೊಂಡು ಕಾರ್ಮಿಕರಿಗೆ ಹಲವಾರು ವರ್ಷಗಳಿಂದ ಬಂದ ಸೌಲಭ್ಯವನ್ನೂ ಮೊಟಕುಗೊಳಿಸಿತು. ಆಡಳಿತ ಮಂಡಳಿ ಮಾಡಿದ್ದೆ ಸರಿ, ಪ್ರತಿಭಟಿಸಲು ಸಾಧ್ಯವಿಲ್ಲ, ಕೋರ್ಟಿನ ಮೊರೆ ಹೊಕ್ಕಿ ನ್ಯಾಯ ಪಡೆಯುವುದೇ ದಾರಿ ಎಂದು ಕಾರ್ಮಿಕರು ನಂಬುವಂತೆ ಮಾಡಲಾಯಿತು. ಇದರಿಂದಾಗಿ ನ್ಯಾಯಾಲಯದಲ್ಲಿ ಇತ್ಯರ್ಥಗಳು ವಿಳಂಬವಾಗಿ ಕಾರ್ಮಿಕರ ಜೀವನ ಪರಿಸ್ಥಿತಿ ಬಿಗಡಾಯಿಸುತ್ತಿದ್ದಾಗ, ಮಧ್ಯಂತರ ಪರಿಹಾರಕ್ಕೆ ಒತ್ತಾಯಿಸಿ ಹೋರಾಟಕ್ಕಿಳಿದ ಕಾರ್ಮಿಕರು ರೂ. 230 ಮಧ್ಯಂತರ ಪರಿಹಾರ ಪಡೆಯುವಲ್ಲಿ ಯಶಸ್ವಿಯಾದರು. ಆದರೆ 11 ಕಾರ್ಮಿಕರನ್ನು ಸುಳ್ಳು ಆಪಾದನೆಗಳ ಮೂಲಕ ಅಮಾನತ್ತಿನಲ್ಲಿಡಲಾಗಿದೆ.

ಇದಲ್ಲದೆ ಆಡಳಿತ ಮಂಡಳಿ ಕಾರ್ಮಿಕರಿಗೆ ದ್ರೋಹ ಮಾಡಲು ಹೊರಟಿದೆ ಎಂದು ಕಾರ್ಮಿಕ ಮುಖಂಡರಾದ ಕೆ.ಎಸ್. ಸುಬ್ರಮಣ್ಯ ಹೇಳಿದ್ದಾರೆ. ಶೇ 30 ಉತ್ಪಾದನೆ ಹೆಚ್ಚಿಸಲು ಒಪ್ಪಿಕೊಂಡು 4 ವರ್ಷಗಳಿಗೆ 675 ರೂ. ಗಳಿಗೆ ಒಪ್ಪಿ ಇನ್ಸೆಂಟಿವ್‌ನಿಂದ ಬರುವ 1,300 ರೂನ್ನು ಬಿಟ್ಟುಕೊಡಲು ಸಂಘದ ಮೇಲೆ ಒತ್ತಡ ಹೇರಿದಾಗ ಕಾರ್ಮಿಕರು ಇದರಿಂದ ಮುಕ್ತಿ ಪಡೆಯಲು ಸಿಐಟಿಯು ಮುಖಂಡ ಕೆ.ಎಸ್. ಸುಬ್ರಮಣ್ಯಂ ರನ್ನು ಅಧ್ಯಕ್ಷರನ್ನಾಗಿ ಜಿ.ಇ. ಪೊನ್ನುಸ್ವಾಮಿ ಪ್ರಧಾನ ಕಾರ್ಯ ದರ್ಶಿಗಳಾಗಿ ಮಾಡಿದರು. ಇದರಿಂದ ಕುಪಿತಗೊಂಡ ಆಡಳಿತ ವರ್ಗವು ನಾಲ್ಕು ಕಾರ್ಮಿಕರನ್ನು ಹೊರರಾಜ್ಯಕ್ಕೆ ವರ್ಗಾಯಿಸಿದೆ. ಇದರ ವಿರುದ್ಧ ಫೆ. 10 ರಿಂದ ಈ ಕಂಪನಿಯ ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾರೆ.

ಕಾರ್ಮಿಕರ ಈ ಹೋರಾಟವನ್ನು ವಿಫಲಗೊಳಿಸಲು ಆಡಳಿತ ವರ್ಗವು ಕಾರ್ಮಿಕರ ಇನ್ಸೆಂಟಿವ್ ಒವರ್‌ಟೈಂ ರಜಾ ಸಂಬಳ, ಹಬ್ಬದ ಮುಂಗಡ ಹಣ, ಇಎಸ್‌ಐ ಮರುಪಾವತಿ ಹಣ, ಫೆಬ್ರವರಿ ತಿಂಗಳ ಸಂಬಳವನ್ನು ಕೊಡದೆ ಕಾರ್ಮಿಕರನ್ನು ಉಪವಾಸಕ್ಕೆ ತಳ್ಳಿದೆ.

ಏಪ್ರಿಲ್ 6 ರಂದು ನಡೆದ ಗುಪ್ತ ಮತದಾನ ದಲ್ಲಿ ಶೇ 99 ರಷ್ಟು ಮತ ಗಳಿಸಿರುವ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿ ಗಳೊಡನೆ ಮಾತುಕತೆ ನಡೆಸಿ ಸಮಸ್ಯೆ ಪರಿಹಾರಕ್ಕೆ ಮುಂದೆ ಬರಬೇಕೆಂದು ಕೆ.ಎಸ್.ಸುಬ್ರಮಣ್ಯಂ ಕರೆ ನೀಡಿದ್ದಾರೆ.

ಕಾರ್ಮಿಕರು ಈತನಕ ಕಿರ್ಲೋಸ್ಕರ್ ಕಾರ್ಪರೇಟ್ ಕಛೇರಿ, ಕಾರ್ಮಿಕ ಆಯುಕ್ತರ ಕಛೇರಿ ಮುಂದೆ ಧರಣಿ ನಡೆಸಿದ್ದಾರೆ. ಪ್ರತಿದಿನ ಯಶವಂತಪುರದ ಕಾರ್ಖಾನೆ ಮುಂದೆ ಹಗಲು ರಾತ್ರಿ ಮತ ಪ್ರದರ್ಶನ, ಮೆರವಣಿಗೆ ನಡೆಸುತ್ತಿದ್ದಾರೆ. ಈ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ನಗರದ ಈ ಕಾರ್ಮಿಕ ಸಂಘ ಸಂಸ್ಥೆಗಳು ಬೆಂಬಲ ವ್ಯಕ್ತಪಡಿಸಿವೆ. ಸಿಐಟಿಯು, ಮೆಕ್‌ಡೊವೆಲ್, ಗ್ರೆಂಡ್ ವೇಲ್‌ನಾರ್ಟನ್, ಕ್ಯಾಪ್‌ಸ್ಟೀಲ್, ಯಶವಂತಪುರ-ಪೀಣ್ಯ ಪ್ರದೇಶದ ಕಾರ್ಮಿಕರು, ಮೈಸೂರ್ ಲ್ಯಾಂಪ್ಸ್, ಐಟಿಸಿ, ಅಮ್ಕೋ, ವ್ಹೋಲ್ಟಾಸ್, ಇಂಡಿಯನ್ ಆಕ್ಸಿಜನ್ ಮುಂತಾದ ಕಾರ್ಮಿಕ ಸಂಘಗಳು ಬೆಂಬಲ ವ್ಯಕ್ತಪಡಿಸಿವೆ. ಇನ್ನೂ ದೊಡ್ಡ ರೀತಿಯಲ್ಲಿ ಇತರ ಕಾರ್ಮಿಕರು ಬೆಂಬಲ ನೀಡಬೇಕೆಂದು ಕಾರ್ಮಿಕ ಸಂಘದ ಅಧ್ಯಕ್ಷರಾದ ಸುಬ್ರಮಣ್ಯ ಮನವಿ ಮಾಡಿದ್ದಾರೆ.

ಏಪ್ರಿಲ್ 18 ಕ್ಕೆ ಗುತ್ತಿಗೆ ಕಾರ್ಮಿಕರ ರಾಜ್ಯ ಸಮಾವೇಶ

ಗುತ್ತಿಗೆ ಕಾರ್ಮಿಕರ ನಿಯಂತ್ರಣ ಮತ್ತು ರದ್ಧತಿ ಕಾಯಿದೆ ಜಾರಿಗೆ ಒತ್ತಾಯಿಸಿ, ಕ್ಯಾಂಟಿನ್, ಆಸ್ಪತ್ರೆ, ನರ್ಸಿಂಗ್ ಹೋಂ ಮತ್ತು ಮಿನಿಸ್ಟ್ರಿಯಲ್ ಪ್ಲಾಂಟ್ ಮುಂತಾದೆಡೆ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವಂತೆ ಉಚ್ಛ ನ್ಯಾಯಾಲಯ ನೀಡಿರುವ ತೀರ್ಪನ್ನು ಜಾರಿಗೊಳಿಸುವಂತೆ, ಕಾರ್ಮಿಕರ ಬಾಧಕಗಳನ್ನು ಚರ್ಚಿಸಲು, ಬೆಂಗಳೂರಿನ ಎನ್.ಜಿ.ಓ. ಹಾಲಿನಲ್ಲಿ ಏಪ್ರಿಲ್ 18 ಕ್ಕೆ ಕಾಂ.ಸೂರ್ಯ ನಾರಾಯಣ ರಾವ್ ಅಧ್ಯಕ್ಷತೆಯಲ್ಲಿ ನಡೆಯುವ ಸಮಾವೇಶವನ್ನು ರಾಜ್ಯ ಉಪಮುಖ್ಯಮಂತ್ರಿ ಸಿದ್ಧರಾಮಯ್ಯ ಉದ್ಘಾಟಿಸಲಿದ್ದಾರೆ.

ಹೋರಾಟವೀರ ಭಗತ್‌ಸಿಂಗ್ ಜನ್ಮದಿನಾಚರಣೆ

ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯ ಸೆಲೆ, ದೇಶಪ್ರೇಮಿ, ವಿದ್ಯಾರ್ಥಿ - ಯುವಜನತೆಯ ಮುಂಚೂಣಿ ಮುಖಂಡರಾಗಿದ್ದ ಭಗತ್‌ಸಿಂಗ್‌ರ ಜನ್ಮ ದಿನ ಮಾರ್ಚ್ 23 ರಂದು ರಾಜ್ಯದ ವಿವಿಧೆಡೆ ಆಚರಿಸಲಾಯಿತು.

ಕಾರವಾರ: ಎಸ್.ಎಫ್.ಐ. ಸಂಘಟಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಚಿಂತನದ ಸಂಚಾಲಕ ವಿಠ್ಠಲ ಭಂಡಾರಿ 'ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ವಿದ್ಯಾರ್ಥಿ ಯುವಜನರಿಗೆ ಸ್ಫೂರ್ತಿಯ ಚಿಲುಮೆ ಭಗತ್ ಸಿಂಗ್‌ರ ದೇಶಪ್ರೇಮ ಇಂದಿಗೂ ಮಾದರಿಯಾಗಿದೆ. ನವ್‌ಜವಾನ್ ಭಾರತ ಸಭಾ, ಹಿಂದುಸ್ಥಾನ್ ಸಮಾಜವಾದಿ ಗಣತಂತ್ರ ಸೇನೆಯ ಮೂಲಕ ಕೆಚ್ಚೆದೆಯ ಮುಂದಾಳಾಗಿದ್ದು ಇಡೀ ವಿಶ್ವವೇ ತನ್ನ ಸ್ಮೃತಿಯಲ್ಲಿಡುವ ಸಾವನ್ನು ಅಪ್ಪಿದ ಭಗತ್ ಸಿಂಗ್ ಯುವಜನತೆಯ ಉತ್ಸಾಹದ ಚಿಲುಮೆ' ಎಂದರು.

ಅತಿಥಿಗಳಾಗಿದ್ದ ಡಿವೈಎಫ್‌ಐ ನ ಶಾಂತಾರಾಂ ನಾಯಕ್ ಮಾತನಾಡಿ ದೇಶ ಮತ್ತೊಮ್ಮೆ ಆತಂಕದೆಡೆ ಸಾಗುತ್ತಿದೆ. ಇಂತಹ ಸಂದರ್ಭದಲ್ಲಿ ಭಗತ್ ಸಿಂಗ್ ಹಾಗೂ ಸಂಗಾತಿಗಳ ಹೋರಾಟದ ಹಾದಿಯನ್ನು ಕಂಡುಕೊಳ್ಳಬೇಕಾಗಿದೆ ಎಂದರು. ಎಸ್.ಎಫ್.ಐ. ನ ರಾಜೇಶ್ ದೇಸಾಯಿ ಅಧ್ಯಕ್ಷತೆ ವಹಿಸಿದ್ದರೆ, ಯಮುನಾ ಗಾಂವ್ಕರ್, ಕೇಶವ ಮೊಗೇರ ಉಪಸ್ಥಿತರಿದ್ದರು. ಲಕ್ಷ್ಮಿ ಪಟಗಾರ ಕಾರ್ಯಕ್ರಮ ನಿರೂಪಿಸಿದರು. ಇದೇ ಸಂದರ್ಭದಲ್ಲಿ ಇಎಂಎಸ್ ಹಾಗೂ ಪರಿಸರವಾದಿ ಕುಸುಮಾ ಸೊರಬರವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಬೆಂಗಳೂರು: ಸುಂಕದ ಕಟ್ಟೆಯ ಪ್ರದೇಶದಲ್ಲಿ ಡಿವೈಎಫ್‌ಐ ಜಿಲ್ಲಾ ಮುಖಂಡ ಟಿ.ಎಂ.ರಾಮಕೃಷ್ಣ ಧ್ವಜಾರೋಹಣದ ನಂತರ ಮಾತನಾಡಿ ಸ್ವಾತಂತ್ರ್ಯ ಹೋರಾಟಗಳನ್ನು ಮತ್ತೊಮ್ಮೆ ನೆನೆದು ಯುವ ಜನತೆ ದಿಟ್ಟ ಹೋರಾಟದತ್ತ ಮುನ್ನೆಡೆಯುವ ಅಗತ್ಯ ವಿವರಿಸಿದರು. ಇದೇ ಸಂದರ್ಭದಲ್ಲಿ ಡಿವೈಎಫ್‌ಐನ ಸದಸ್ಯತ್ವವನ್ನು ನೊಂದಾಯಿಸಲಾಯಿತು. ಗಂಗರಾಜು ಸ್ವಾಗತಿಸಿದರು. ಕೊನೆಯಲ್ಲಿ ಸಿಹಿ ಹಂಚಲಾಯಿತು.

ಪಂಜಿನ ಮೆರವಣಿಗೆ: ನಗರದ ಶ್ರೀರಾಮಪುರ ಪ್ರದೇಶದಲ್ಲಿ ಡಿವೈಎಫ್‌ಐ ನೇತೃತ್ವದಲ್ಲಿ ಪಂಜಿನ ಮೆರವಣಿಗೆಯೊಡನೆ ಭಗತ್‌ಸಿಂಗ್ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಜಿಲ್ಲಾಕಾರ್ಯದರ್ಶಿ ಗೋಪಾಲಕೃಷ್ಣ ಮಾತನಾಡಿ ಭಗತ್‌ಸಿಂಗ್, ರಾಜಗುರು, ಸುಖದೇವ್, ಸುಭಾಷ್‌ಚಂದ್ರ ಬೋಸ್‌ರನ್ನು ಸ್ಮರಿಸಿದರು.

ಬೆಂಗಳೂರು ನಗರ ಸಾಕ್ಷರತಾ ಸಮಿತಿಯ ಕಾರ್ಯದರ್ಶಿ ಚಲುವರಾಜ್, ಜೆಎಂಎಸ್ ನ ಶಾರದ ಮಾತನಾಡಿ, ಜನತೆಯನ್ನು ಸಾಕ್ಷರತೆಯತ್ತ ಕೊಂಡೊಯ್ದು ದೇಶವನ್ನು ಪ್ರಗತಿಯತ್ತ ನಡೆಸುವುದು ಯುವಜನತೆಯ ಕರ್ತವ್ಯವಾಗಿದೆ ಎಂದರು.

ಭಗತ್ ಸಿಂಗ್‌ರ ಭಾವಚಿತ್ರವಿದ್ದ ಪಂಜಿನ ಮೆರವಣಿಗೆಯಲ್ಲಿ ಗೋಪಿ, ಮುನಿರಾಜ್, ಸುರೇಶ್, ರವಿ ಭಾಗವಹಿಸಿದ್ದರು.

ಹೊಸಕೋಟೆ: ತಾಲೂಕಿನ ಹಾರೋಹಳ್ಳಿಯಲ್ಲಿ ಇದೆ, ಸಂದರ್ಭದಲ್ಲಿ ಡಿವೈಎಫ್‌ಐನ ಘಟಕ ರಚಿಸಿ, ಹುತಾತ್ಮರ ದಿನಾಚರಣೆ ಆಚರಿಸಲಾಯಿತು. ಇದೇ ಊರಿನ ಜನರೆ ಸೇರಿ ಹುತಾತ್ಮ ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಿತು. ವೆಂಕಟರೆಡ್ಡಿ, ತಿಪ್ಪಯ್ಯ, ಕನಕರಾಜ್, ಮಂಜುನಾಥ್ ಮುಂತಾದವರು ಮಾತನಾಡಿದರು. ಕೊನೆಯಲ್ಲಿ ಸಿಹಿ ಹಂಚಲಾಯಿತು.



ಇಎಂಎಸ್ ಮತ್ತು ರೈತ ಆಂದೋಲನ

ಇತರ ಹಲವು ವಲಯಗಳಂತೆ ಭಾರತದ ರೈತ ಆಂದೋಲನದ ಬೆಳವಣಿಗೆಗೂ ಸಿದ್ಧಾಂತ ಮತ್ತು ಆಚರಣೆ ಎರಡರಲ್ಲೂ ಇಎಂಎಸ್ ಶ್ರೀಮಂತ ಮತ್ತು ಅಮೂಲ್ಯ ಕಾಣಿಕೆ ನೀಡಿದ್ದಾರೆ. ದೈನಂದಿನ ಚಟುವಟಿಕೆಗಳು, ಕರ್ಷಕ ಸನ್ನಿವೇಶದಲ್ಲಿನ ಬದಲಾವಣೆಗಳ ಮೌಲ್ಯಮಾಪನ, ಕರ್ಷಕ ಕ್ರಾಂತಿಯ ಕಾರ್ಯನೀತಿ ಮತ್ತು ತಂತ್ರಗಳನ್ನು ರೂಪಿಸುವುದು, ಅನುಭವಗಳ ವಿಶ್ಲೇಷಣೆ ಇತ್ಯಾದಿ ಎಲ್ಲದರಲ್ಲೂ ಅವರ ಕಾಣಿಕೆಗಳಿರುತ್ತಿದ್ದವು ಎನ್ನುತ್ತಾರೆ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳು ಈ ಲೇಖನದಲ್ಲಿ ಅವರ ಕಾಣಿಕೆಗಳನ್ನು ನೆನಪಿಸಿಕೊಂಡಿದ್ದಾರೆ.

ಎಸ್.ರಾಮಚಂದ್ರನ್ ಪಿಳ್ಳೆ

ಆರಂಭದ ದಿನಗಳಲ್ಲಿ ಇಎಂಎಸ್ ಚಟುವಟಿಕೆಗಳು ಕೇರಳ ರಾಜ್ಯದ ಮಲಬಾರ್ ಭಾಗಕ್ಕೆ ಸೀಮಿತವಾಗಿತ್ತು. ಆಗ ಕೇರಳ ಮೂರು ಭಾಗಗಳಾಗಿ ವಿಂಗಡಿತವಾಗಿತ್ತು -ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಮಲಬಾರ್ ಹಾಗೂ ಎರಡು ಸ್ವತಂತ್ರ ಸಂಸ್ಥಾನಗಳಾಗಿದ್ದ ಕೊಚ್ಚಿ ಮತ್ತು ತಿರುವಾಂಕೂರ್. ಮಲಬಾರಿನಲ್ಲಿ 1930ರ ದಶಕದಲ್ಲಿ ಮೆಲ್ಲಮೆಲ್ಲನೆ ರೈತ ಆಂದೋಲನ ಬೆಳೆದು ಬರಲಾರಂಭಿಸಿತ್ತು. ಇಎಂಎಸ್ 1933ರಲ್ಲಿ ವೆಲ್ಲೂರು ಜೈಲಿನಿಂದ ಬಿಡುಗಡೆಯಾಗಿ ಬಂದರು. ಆದಾಗಲೇ ಅವರು ಎಡಪಂಥೀಯ ಕಾಂಗ್ರೆಸಿಗರಾಗಿದ್ದರು. ಕಾಂಗ್ರೆಸಿನೊಳಗಿದ್ದ ಎಡ ಪಂಥೀಯರು ಒಂದು ತೀವ್ರಗಾಮಿ ಕಾರ್ಯಕ್ರಮದ ಆಧಾರದಲ್ಲಿ ರೈತರನ್ನು, ಕಾರ್ಮಿಕರನ್ನು ಸಂಘಟಿಸಿದರು. ಇಎಂಎಸ್ ಮಲಬಾರಿನಲ್ಲಿ ರೈತರನ್ನು ಸಂಘಟಿಸುವಲ್ಲಿ ಸಕ್ರಿಯ ಆಸಕ್ತಿ ವಹಿಸಿದರು.

ಭಾರತದಲ್ಲೂ ಗ್ರಾಮೀಣ ಜನ 1930ರ ದಶಕದಲ್ಲಿ ವಿಶ್ವವ್ಯಾಪಿಯಾಗಿದ್ದ ಆರ್ಥಿಕ ಮುಗ್ಗಟ್ಟಿನಿಂದ ಗಂಭೀರ ಪರಿಸ್ಥಿತಿ ಅನುಭವಿಸುತ್ತಿದ್ದರು. ಇಡಿ ಬಂಡವಾಳಶಾಹೀ ಜಗತ್ತನ್ನು ಅಲುಗಾಡಿಸಿದ ಆ ಮಹಾ ಬಿಕ್ಕಟ್ಟು ಸಮಾಜವಾದೀ ಸೋವಿಯೆತ್ ಒಕ್ಕೂಟವನ್ನು ಮುಟ್ಟಲೂ ಸಾಧ್ಯವಾಗಲಿಲ್ಲ ಎಂಬುದನ್ನು ಇಎಂಎಸ್ ಮತ್ತು ಅವರ ಗೆಳೆಯರು ಕಂಡರು. ಆ ಅವಧಿಯಲ್ಲಿ ಸಮಾಜವಾದಿ ಯೋಜನಾ ಪದ್ಧತಿಯನ್ನು ಬಳಸಿ ಸೋವಿಯೆತ್ ಒಕ್ಕೂಟ ಭಾರೀ ಅಭಿವೃದ್ಧಿ ಮತ್ತು ಬೆಳವಣಿಗೆಯ ಯೋಜನೆ ಹಾಕಿತ್ತು. ಈ ಮಹಾನ್ ಸೋವಿಯೆತ್ ಸಾಧನೆಗಳು ಇಎಂಎಸ್ ಮತ್ತು ಅವರ ಗೆಳೆಯರಿಗೆ ಸ್ಫೂರ್ತಿಯ ಒಂದು ಮೂಲವಾಯಿತು.

ನೇರ ಕಾರ್ಯಾಚರಣೆಗೆ

ಮೂರು ತಕ್ಷಣದ ಬೆಳವಣಿಗೆಗಳಿಂದಾಗಿ ಇಎಂಸ್ ಮತ್ತು ಅವರ ಗೆಳೆಯರು ನೇರ ಕಾರ್ಯಾಚರಣೆಗೆ ಇಳಿದರು. ಆ ಬೆಳವಣಿಗೆಗಳೆಂದರೆ- ಮದ್ರಾಸ್ ಸರಕಾರ ಹೇರಿದ ಭೂಕಂದಾಯ ಹೆಚ್ಚಳ, ಮೇಲಟ್ಟದ ಶ್ರೀಮಂತ ವಿಭಾಗಗಳನ್ನಷ್ಟೇ ರಕ್ಷಿಸಿ ಬಹುಪಾಲು ಗೇಣಿದಾರರನ್ನು ಭೂಮಾಲಕರ ಮರ್ಜಿಗೆ ಬಿಟ್ಟ ಮಲಬಾರ್ ಗೇಣಿ ಕಾನೂನಿಗೆ ಮಾಡಿದ ತಿದ್ದುಪಡಿಗಳು ಹಾಗೂ ರೈತರ ಸಾಲ ಹೊರೆಯಲ್ಲಾಗುತ್ತಿದ್ದ ಸತತ ಹೆಚ್ಚಳ. ಆ ಸಮಯದಲ್ಲಿ ಆರಂಭಿಸಿದ ಆಂದೋಲನಗಳು ಇಡೀ ರೈತಾಪಿ ವರ್ಗದ ಆಗತ್ಯಗಳನ್ನು ಪ್ರತಿನಿಧಿಸಿದ್ದವು, ಆ ವರ್ಗದ ಬಹುಪಾಲು ಬಡವಿಭಾಗಗಳ ಹಿತಾಸಕ್ತಿಗಳನ್ನು ಕೇಂದ್ರವಾಗಿಸಿದ್ದವು.

ಕಿಸಾನ್ ಸಭಾ ಭೂಕಂದಾಯದಲ್ಲಿ ಕಡಿತ, ಸಾಲ ಪರಿಹಾರ ಕ್ರಮಗಳು ಮತ್ತು ಎಲ್ಲಾ ಗೇಣಿದಾರರ ಹಿತಾಸಕ್ತಿಗಳನ್ನು ರಕ್ಷಿಸಲು ಆಗ ಇದ್ದ ಗೇಣಿ ಕಾನೂನುಗಳಲ್ಲಿ ತೀವ್ರ ತಿದ್ದುಪಡಿ ಇವುಗಳ ಬಗ್ಗೆ ಬೇಡಿಕೆಗಳನ್ನು ಇಟ್ಟಿತು. ಜಿಲ್ಲಾ ಕಲೆಕ್ಟರುಗಳು ಹಾಗೂ ಇತರ ಅಧಿಕಾರಿಗಳ ಎದುರು ಹಾಗೂ ಕೆಲವು ಕುಖ್ಯಾತ ಭೂಮಾಲಕರ ಎದುರು ಸಮರಧೀರ ಮತಪ್ರದರ್ಶನಗಳು ಆ ಸಮಯದಲ್ಲಿ ಸಾಮಾನ್ಯ ಸಂಗತಿಯಾಗಿಬಿಟ್ಟವು. ಜೆನ್ಮಿ(ಭೂಮಾಲಕರು) ವಿಪರೀತ ದಮನಕಾರಿಗಳಾಗಿದ್ದಲ್ಲಿ ಗೇಣೀದಾರರು ಕರನಿರಾಕರಣೆ, ಅಸಹಕಾರ ವಿಧಾನಗಳಿಗೂ ಇಳಿದರು. ಇಎಂಎಸ್ ರೈತರ ಬೇಡಿಕೆಗಳ ಸುತ್ತ ಗ್ರಾಮ, ತಾಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಸಮ್ಮೇಳನಗಳು, ರ್‍ಯಾಲಿಗಳು ಹಾಗೂ ಹೋರಾಟಗಳನ್ನು ಸಂಘಟಿಸುವಲ್ಲಿ ಸಕ್ರಿಯ ಭಾಗ ವಹಿಸಿದರು.

ಈ ಚಟುವಟಿಕೆಗಳಿಂದಾಗಿ ಇಎಂಎಸ್ ಕಾಂಗ್ರೆಸಿನಲ್ಲಿದ್ದ ಸಂಪ್ರದಾಯಶರಣ ಬಲಪಂಥೀಯ ವಿಭಾಗಗಳೊಂದಿಗೆ ನೇರ ಘರ್ಷಣೆಗಿಳಿಯ ಬೇಕಾಯಿತು. ಅವರು ವೆಣಂ ಪಟ್ಟಂದಾರರು ಅಂದರೆ ಪ್ರತಿಯಾಗಿ ಏನೂ ತೆರದೆ ಉಂಟಾದ ಗೇಣಿ ಅಥವಾ ಬಾಯ್ದೆರೆ ಗೇಣಿಗೆ ರಕ್ಷಣೆ ಒದಗಿಸುವ ವಿಚಾರವನ್ನು ವಿರೋಧಿಸಿದರು. ಆದರೆ ಇಎಂಎಸ್ ಮತ್ತು ಅವರ ಗೆಳೆಯರಿಗೆ ಸಾಮಾನ್ಯ ಕಾಂಗ್ರೆಸಿಗರಿಂದ ಬೆಂಬಲ ದೊರೆಯಿತು. ಇಎಂಎಸ್ 1937ರಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಸಂಘಟನಾ ಕಾರ್ಯದರ್ಶಿಯಾದರು, 1938ರಿಂದ ಅದರ ಕಾರ್ಯದರ್ಶಿಯಾದರು. ಅವರು ಕಿಸಾನ್ ಸಭಾವನ್ನು ರೈತರ ಒಂದು ಸ್ವತಂತ್ರ ಸಂಘಟನೆಯಾಗಿ ಹಾಗೂ ಅದೇ ವೇಳೆಗೆ ಕಾಂಗ್ರೆಸ್ ನೇತೃತ್ವದ ಸಾಮ್ರಾಜ್ಯಶಾಹಿ- ವಿರೋಧಿ ಆಂದೋಲನದ ಅವಿಭಾಜ್ಯ ಅಂಗವಾಗಿ ಬೆಳೆಸುವಲ್ಲಿ ವಿಶೇಷ ಆಸಕ್ತಿ ವಹಿಸಿದರು. ಈ ಅವಧಿಯಲ್ಲಿ ಅವರು ಮೊದಲು ಒಬ್ಬ ಕಾಂಗ್ರೆಸ್ ಸಮಾಜವಾದಿಯಾದರು, ನಂತರ ಒಬ್ಬ ಕಮ್ಯುನಿಸ್ಟರಾದರು.

ಗೇಣಿ ತನಿಖಾ ಸಮಿತಿಯಲ್ಲಿ

1937ರಲ್ಲಿ ಒಂದು ಕಾಂಗ್ರೆಸ್ ಮಂತ್ರಿಮಂಡಲ ರಾಜಾಜಿಯವರ ನೇತೃತ್ವದಲ್ಲಿ ಮದ್ರಾಸಿನಲ್ಲಿ ಅಧಿಕಾರ ವಹಿಸಿಕೊಂಡು ರೈತರಿಗೆ ಸ್ವಲ್ಪ ಸಾಲ ಪರಿಹಾರ ಒದಗಿಸಿತು. ಇದರಿಂದ ರೈತರಿಗೆ ತಾವು ಒಗ್ಗಟ್ಟಾಗಿ ತಮ್ಮ ಬೇಡಿಕೆಗಳಿಗೆ ಹೋರಾಡಲು ಸಿದ್ಧರಿದ್ದರೆ ಹೆಚ್ಚಿನ ಸಾಧನೆ ಸಾಧ್ಯ ಎಂಬ ಹೊಸ ವಿಶ್ವಾಸ ಮೂಡಿತು. ಮಲಬಾರ್ ಗೇಣಿಕಾನೂನಿಗೆ ಒಂದು ತೀವ್ರ ತಿದ್ದುಪಡಿಗಾಗಿ ಹೋರಾಟ ಶಕ್ತಿಗೂಡಿಸಿಕೊಂಡು ವ್ಯಾಪಕ ಬೆಂಬಲ ಗಳಿಸಿತು. ರಾಜಾಜಿಸರಕಾರದಲ್ಲಿ ರೆವಿನ್ಯೂ ಮಂತ್ರಿಯಾಗಿದ್ದ ಟಿ. ಪ್ರಕಾಶಂ ಹೋರಾಟದ ಪ್ರದೇಶಗಳಿಗೆ ಭೇಟಿಯಿತ್ತರು. ಈ ಕಾನೂನಿನ ಇಡೀ ಪ್ರಶ್ನೆಯ ಬಗ್ಗೆ ತನಿಖೆ ನಡೆಸಲು ಒಂದು ಗೇಣಿ ತನಿಖಾ ಸಮಿತಿಯನ್ನು ನೇಮಿಸಿದರು. ಆ ಸಮಿತಿಯಲ್ಲಿ ಕೇವಲ ಮೂವರು ಎಡಪಂಥೀಯ ಸದಸ್ಯರಿದ್ದರು- ಇಎಂಎಸ್ ಅವರಲ್ಲೊಬ್ಬರು. ಆ ಸಮಿತಿ ಸಾಕ್ಷ್ಯಗಳನ್ನು ಸಂಗ್ರಹಿಸಲು ಹೋದಲ್ಲೆಲ್ಲಾ ಕಿಸಾನ್ ಸಭಾ ಘಟಕಗಳು ತಮ್ಮ ಬೇಡಿಕೆಗಳಿಗಾಗಿ ದೊಡ್ಡ-ದೊಡ್ಡ ಮತ ಪ್ರದರ್ಶನಗಳನ್ನು ನಡೆಸಿದವು; ಇವುಗಳಲ್ಲಿ ಇಎಂಎಸ್ ಮತ್ತು ಇತರ ಎಡಪಂಥೀಯ ಸದಸ್ಯರೂ ಭಾಗವಹಿಸಿದರು.

ಈ ಸಮಿತಿಯಲ್ಲಿ ಎಡಪಂಥೀಯರು ಅಲ್ಪ ಸಂಖ್ಯೆಯಲ್ಲಿ ಇದ್ದರು; ಬಲಪಂಥೀಯ ಮತ್ತು ಎಡಪಂಥೀಯ ಸದಸ್ಯರ ನಡುವೆ ಒಂದು ಗಂಭೀರ ಸಂಘರ್ಷ ನಡೆಯಿತು. ಇಎಂಎಸ್, ಇತರ ಇಬ್ಬರು ಎಡ ಸದಸ್ಯರು ಸಮಿತಿಯ ಬಹುಮತದ ನಿರ್ಣಯಕ್ಕೆ ತಮ್ಮ ಭಿನ್ನಮತದ ಟಿಪ್ಪಣಿಯನ್ನು ಸಲ್ಲಿಸಿದರು. ಇಎಂಎಸ್ ರವರ ಟಿಪ್ಪಣಿ ಮಲಬಾರಿನಲ್ಲಿ ಜೆನ್ಮಿ ಭೂಮಾಲಕ ವ್ಯವಸ್ಥೆಯ ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸುತ್ತಾ ಅದು ಒಟ್ಟಾರೆ ಬೆಳವಣಿಗೆಯ ಪ್ರಕ್ರಿಯೆಗೆ ಉಂಟುಮಾಡಿದ ಹಾನಿಯನ್ನು ವಿವರಿಸಿತ್ತು. ಭೂಮಾಲಕರಿಗೆ ಪರಿಹಾರಕೊಡದೆ (ಅವರಲ್ಲಿ ಬಡವಿಭಾಗಗಳಿಗೆ ಸ್ವಲ್ಪ ಪರಿಹಾರ ನೀಡಿ) ಜೆನ್ಮಿ ಭೂಮಾಲಕ ವ್ಯವಸ್ಥೆಯನ್ನು ರದ್ದುಗೊಳಿಸದೆ ಕೃಷಿ ಆರ್ಥಿಕದ ಆಧುನೀಕರಣ ಹಾಗೂ ಬೆಳವಣಿಗೆ ಸಾಧ್ಯವಿಲ್ಲ ಎಂದು ಈ ಟಿಪ್ಪಣಿ ಒತ್ತಿ ಹೇಳಿತು. ಅವರ ಈ ಟಿಪ್ಪಣಿ ನಂತರ ಮಲಬಾರ್, ಕೊಚ್ಚಿ ಹಾಗೂ ತಿರುವಾಂಕೂರುಗಳಲ್ಲಿ ಭೂಮಾಲಕತ್ವದ ವಿರುದ್ಧ ನಡೆದ ಎಲ್ಲಾ ಚಳುವಳಿಗಳಿಗೆ ಸೈದ್ಧಾಂತಿಕ ಆಧಾರ ನೀಡಿತು.

ಮೊದಲ ಆಗತ್ಯವಷ್ಟೆ

ಭೂಮಾಲಕ ಶೋಷಣೆಯ ರದ್ದತಿ ಸರ್ವತೋಮುಖ ಕೃಷಿ, ಕೈಗಾರಿಕೆ ಮತ್ತು ಸಾಮಾಜಿಕ-ಸಾಂಸ್ಕೃತಿಕ ಬೆಳವಣಿಗೆಗೆ ಮೊದಲ ಆಗತ್ಯವಾದರೂ ಗ್ರಾಮೀಣ ಪ್ರದೇಶದ ಸಮೃದ್ಧಿಗೆ ಹಾಗೂ ಕೈಗಾರಿಕೀಕರಣಕ್ಕೆ ನೆರವಾಗಲು ಇಷ್ಟೇ ಸಾಲದು ಎಂದು ಇಎಂಎಸ್ ತನ್ನ ಆನಂತರದ ಬರಹಗಳಲ್ಲಿ ವಿವರಿಸಿದ್ದಾರೆ. ಅವರ ಪ್ರಕಾರ ಊಳಿಗಮಾನ್ಯ ಭೂಮಾಲಕತ್ವದೊಂದಿಗೆ ಇತರ ಹಲವು ಶಕ್ತಿಗಳೂ-ಕೃಷಿ ಉತ್ಪನ್ನಗಳ ಬೆಲೆಗಳನ್ನು ನಿರ್ಧರಿಸುವ ವಿದೇಶಿ ಗುತ್ತೇದಾರಿ ಬಂಡವಾಳ, ಬೆಳೆಯುತ್ತಿರುವ ಬಂಡವಾಳಶಾಹಿ ವ್ಯವಸ್ಥೆ ಗ್ರಾಮೀಣ ಬಡವರ ಮೇಲೆ ಹೊರಿಸುತ್ತಿರುವ ಸಾಲ ಮತ್ತು ತೆರಿಗೆ ಭಾರ, ರೈತ-ವಿರೋಧಿ ತೆರಿಗೆ ಪದ್ಧತಿ ಇತ್ಯಾದಿ ಇತ್ಯಾದಿ-ಗ್ರಾಮೀಣ ಬಡವರನ್ನು ಅರೆದು ತಿನ್ನುತ್ತಿವೆ. ಈ ಎಲ್ಲಾ ಶೋಷಕರ, ದಮನಕಾರರ ವಿರುದ್ಧ ರೈತಆಂದೋಲನ ಹೋರಾಟಗಳನ್ನು ವಿಸ್ತರಿಸಿ ಮುಂದುವರಿಸಬೇಕು ಎಂದು ಅವರು ಹೇಳಿದರು.

ಈ ಭಿನ್ನಮತದ ಟಿಪ್ಪಣಿಯ ಹದಿನೇಳು ವರ್ಷಗಳ ನಂತರ ಕೇರಳದ ಮುಖ್ಯಮಂತ್ರಿಯಾಗಿ ಇಎಂಎಸ್ ಗೆ ತನ್ನ ಈ ಟಿಪ್ಪಣಿಯ ಸಾರಸತ್ವವನ್ನು ಬದಲಾದ ಒಂದು ಸನ್ನಿವೇಶದಲ್ಲಿ ಆಚರಣೆಗೆ ತರುವ ಒಂದು ಅವಕಾಶ ಸಿಕ್ಕಿತು. ಏಪ್ರಿಲ್ 5, 1957ರಂದು ಕೇರಳದಲ್ಲಿ ಕಮ್ಯುನಿಸ್ಟ್ ಸರಕಾರ ಪ್ರತಿಜ್ಞೆ ಸ್ವೀಕರಿಸಿತು, ಏಪ್ರಿಲ್ 11ರಂದು ಕೇರಳ ಸರಕಾರ ಗೇಣಿದಾರರು, ಉಪಗೇಣಿದಾರರು, ಮನೆ ನಿವೇಶನದಲ್ಲಿ ಇರುವವರು ಇವರನ್ನೆಲ್ಲಾ ಯಾವುದೇ ಕಾರಣಕ್ಕೆ, ಸಮಯಕ್ಕೆ ಸರಿಯಾಗಿ ಗೇಣಿ ತೆರದಿದ್ದರೂ ಕೂಡಾ ಒಕ್ಕಲೆಬ್ಬಿಸುವುದನ್ನು ನಿಷೇಧಿಸುವ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿತು. ಭೂಮಾಲಕರು ಗೇಣೀದಾರರು, ಉಪಗೇಣಿದಾರರು ಹಾಗೂ ಮನೆ ನಿವೇಶನದಲ್ಲಿ ಇರುವವರ ವಿರುದ್ಧ ಆರಂಭಿಸಿದ್ದ ಕೋರ್ಟ್ ಕ್ರಮಗಳಿಗೆಲ್ಲಾ ತಡೆ ಘೋಷಿಸಲಾಯಿತು. ಆ ತುರ್ತು ಶಾಸನದ ಎರಡು ವರ್ಷಗಳ ನಂತರ ಒಂದು ಪೂರ್ಣ ಪ್ರಮಾಣದ ಮಸೂದೆಯನ್ನು- ಕರ್ಷಕ ಸಂಬಂಧಗಳ ಮಸೂದೆಯನ್ನು ಜೂನ್ 1959ರ ಆರಂಭದಲ್ಲಿ ಕೇರಳ ವಿಧಾನಸಭೆ ಅಂಗೀಕರಿಸಿತು.

> *"ಅದು ಮೇಲ್ಜಾತಿಗಳ ಒಂದು ಸಣ್ಣ ವಿಭಾಗ ಬಹುಪಾಲು ಗ್ರಾಮೀಣ ಜನಸಮೂಹಗಳ ಮೇಲೆ ನಡೆಸುತ್ತಾ ಬಂದಿದ್ದ ಆರ್ಥಿಕ ದಬ್ಬಾಳಿಕೆ ಹಾಗೂ ಸಾಮಾಜಿಕ -ಸಾಂಸ್ಕೃತಿಕ ಪ್ರಾಬಲ್ಯವನ್ನು ಕೊನೆಗೊಳಿಸಿತು. ಜಾತಿ ದಬ್ಬಾಳಿಕೆಯ ವಿರುದ್ಧ, ಹಳಸಲಾದ ಕುಟುಂಬ ವ್ಯವಸ್ಥೆಯ ವಿರುದ್ಧ ಹಾಗೂ ಕುರುಡು ನಂಬಿಕೆಗಳು, ಕಂದಾಚಾರಗಳ ವಿರುದ್ಧ ಐವತ್ತಕ್ಕೂ ಹೆಚ್ಚು ವರ್ಷಕಾಲ ನಡೆದ ಸಾಮಾಜಿಕ-ಸಾಂಸ್ಕೃತಿಕ ಆಂದೋಲನಗಳ ಫಲವಾಗಿ ಗ್ರಾಮೀಣ ಜನಸಮೂಹ ಪ್ರತಿಯೊಂದು ರೀತಿಯ ಶೋಷಣೆ, ದಮನದಿಂದ ಬಿಡುಗಡೆ ಪಡೆಯುವಂತಾಯಿತು. ಕೇವಲ ಕರ್ಷಕ ಸಂಬಂಧಗಳ ಮಸೂದೆಯನ್ನು ತಂದದ್ದಕ್ಕಾದರೂ ಕಮ್ಯುನಿಸ್ಟ್ ಸರಕಾರದ 28ತಿಂಗಳ ಅಸ್ತಿತ್ವ ಆಧುನಿಕ ಪ್ರಜಾಸತ್ತಾತ್ಮಕ ಕೇರಳದ ಇತಿಹಾಸದಲ್ಲಿ ಒಂದು ಸ್ಥಾನ ಪಡೆಯುತ್ತದೆ."*

ಎಂದು ಇಎಂಎಸ್ ಈ ಶಾಸನದ ಧ್ಯೇಯೋದ್ದೇಶಗಳ ಬಗ್ಗೆ ಬರೆದಿದ್ದಾರೆ.

ಕಿಸಾನ್ ಸಭಾ ಸಂಘಟಕರಾಗಿ

ಇಎಂಎಸ್ ರೈತ ಆಂದೋಲನವನ್ನು ಬಲಪಡಿಸಲು ಹಾಗೂ ವಿಸ್ತರಿಸಲು ಕಿಸಾನ್ ಸಭಾದ ದೈನಂದಿನ ಚಟುವಟಿಕೆಗಳಿಗೆ ಬಹಳ ಮಹತ್ವ ಕೊಡುತ್ತಿದ್ದರು. ಸನ್ನಿವೇಶದ ಅಂದಾಜು ಹಾಗೂ ಘೋಷಣೆಗಳನ್ನು ರೂಪೀಕರಿಸಿದಾಗ ಮುನ್ನಡೆಯ ಆಧಾರ ಸಿದ್ಧವಾಗುತ್ತದಷ್ಟೆ. ನಿಜವಾದ ಕೆಲಸ ಪ್ರಾರಂಭವಾಗುವುದು ಜನಗಳನ್ನು ಅಣಿನೆರೆಸಿ ಚಲಿಸುವಂತೆ ಮಾಡುವಲ್ಲಿ ಸಂಘಟನೆ ಯಶಸ್ವಿಯಾದಾಗ ಮಾತ್ರ. ವಿಭಿನ್ನ ರೀತಿಯ ಕೆಲಸದ ಮೂಲಕ ರೈತರನ್ನು ಆಕರ್ಷಿಸಬೇಕು-ಅವರ ನೈಜ ಬೇಡಿಕೆಗಳನ್ನು ಎತ್ತಿ, ಅವುಗಳಿಗಾಗಿ ಚಳುವಳಿ ನಡೆಸಿ, ಈಡೇರಿಸಿಕೊಂಡು, ಸಾಕ್ಷರತೆ ತರಗತಿಗಳನ್ನು ನಡೆಸಿ, ಸಾಂಸ್ಕೃತಿಕ ತಂಡಗಳನ್ನು, ಕ್ರೀಡಾ ಸಂಘಗಳನ್ನು, ವಾಚನ ವೃತ್ತಗಳನ್ನು ರಚಿಸಿ, ನೈಸರ್ಗಿಕ ಅನಾಹುತಗಳಲ್ಲಿ ಅಥವಾ ವೈಯಕ್ತಿಕ ತೊಂದರೆಗಳಲ್ಲಿ ನೆರವು ಒದಗಿಸುವುದು ಇತ್ಯಾದಿಗಳ ಮೂಲಕ ರೈತರ ಪ್ರಜ್ಞೆಯನ್ನು ಎತ್ತರಿಸಲು ಅವರ ನಡುವೆ ರಾಜಕೀಯ-ಸೈದ್ಧಾಂತಿಕ ಕೆಲಸಕ್ಕೆ ಇಎಂಎಸ್ ಬಹಳ ಮಹತ್ವವನ್ನು ಕೊಡುತ್ತಿದ್ದರು. ಇವೆಲ್ಲಾ ಕೆಲಸಗಳು ಒಟ್ಟಿಗೇ ನಡೆಯಬೇಕು ಎಂಬುದು ಅವರ ದೃಢ ಅಭಿಪ್ರಾಯವಾಗಿತ್ತು. ರೈತರಿಗೆ ಕಲಿಸುವ ಮತ್ತು ಅವರಿಂದ ಕಲಿಯುವುದರ ಮಹತ್ವವನ್ನು ಅವರು ಸದಾ ಒತ್ತಿ ಹೇಳುತ್ತಿದ್ದರು.

ಇಎಂಎಸ್‌ರವರ ಕೊಡುಗೆಗಳು ಕೇರಳಕ್ಕೇ ಸೀಮಿತವಾಗಿರಲಿಲ್ಲ. ಏಪ್ರಿಲ್ 1936ರಲ್ಲಿ ಅಖಿಲ ಭಾರತ ಕಿಸಾನ್ ಕಾಂಗ್ರೆಸ್ ರಚಿಸಲು ಲಕ್ನೌನಲ್ಲಿ ಸೇರಿದ ಪ್ರತಿನಿಧಿಗಳಲ್ಲಿ ಇಎಂಎಸ್ ಒಬ್ಬರು. ಇದೇ ಮುಂದೆ ಅಖಿಲ ಭಾರತ ಕಿಸಾನ್ ಸಭಾ ಆಯಿತು. ಭಾಕ್ನಾದಲ್ಲಿ 1943ರಲ್ಲಿ ನಡೆದ ಸಮ್ಮೇಳನದಲ್ಲಿ ಅವರು ಅಖಿಲ ಭಾರತ ಜೊತೆ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಆಯ್ಕೆಯಾದರು, 1944ರ ವಿಜಯವಾಡ ಸಮ್ಮೇಳನದಲ್ಲಿ ಮತ್ತು 1945ರ ನೇತ್ರಕೋನ ಸಮ್ಮೇಳನದಲ್ಲಿ ಪುನರಾಯ್ಕೆಗೊಂಡರು. ನಂತರದ ವರ್ಷಗಳಲ್ಲಿ ಇಎಂಎಸ್ ಎ.ಐ.ಕೆ.ಎಸ್.ನ ಪದಾಧಿಕಾರಿಯಾಗಿರದಿದ್ದರೂ ಅದರ ಹೆಚ್ಚಿನ ಅಖಿಲ ಭಾರತ ಅಧಿವೇಶನಗಳಲ್ಲಿ ಭಾಗವಹಿಸಿ ಆಂದೋಲನಕ್ಕೆ ಮಾರ್ಗದರ್ಶನ ನೀಡಿದರು.

ಗಂಭೀರ ಸ್ವಯಂ ಪರಿಶೀಲನೆಯ ಪ್ರಶ್ನೆ

ಅಖಿಲ ಭಾರತ ಕಿಸಾನ್ ಸಭಾದ ಸ್ಥಾಪನೆಯ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅವರೊಂದು ಮಹತ್ವದ ಪ್ರಶ್ನೆಯೆತ್ತಿದರು -ಒಂದು ಗಂಭೀರ ಸ್ವಯಂಪರಿಶೀಲನೆಯ ರೀತಿಯಲ್ಲಿ. ಕಳೆದ 30-40ವರ್ಷಗಳಲ್ಲಿ ಆಂದೋಲನವನ್ನು ಗಮನಾರ್ಹವಾಗಿ ವಿಸ್ತರಿಸುವಲ್ಲಿ ನಾವೇಕೆ ವಿಫಲರಾಗಿದ್ದೇವೆ? ರಾಜಕೀಯ ಪ್ರಭಾವ ಹಾಗೂ ಆಂದೋಲನದ ಸಂಘಟನಾ ಸ್ಥಿತಿಯ ನಡುವಿನ ಈ ಅಂತರವನ್ನು ನಿವಾರಿಸುವುದು ಹೇಗೆ?

ಎರಡು ಪೂರ್ವಶರತ್ತುಗಳನ್ನು

→

ರೈತಪ್ರಶ್ನೆಗಳನ್ನು ಕುರಿತಾದ ಇಎಂಎಸ್ ಕೃತಿಗಳು

A Short History of the Peasant Movement in Kerala(1943)
(ಕೇರಳದಲ್ಲಿ ರೈತ ಆಂದೋಲನದ ಸಂಕ್ಷಿಪ್ತ ಇತಿಹಾಸ)

Kerala: Society and Politics - A Historical Survey (1984)
(ಕೇರಳ ಸಮಾಜ ಮತ್ತು ರಾಜಕೀಯ - ಒಂದು ಐತಿಹಾಸಿಕ ಸರ್ವೇಕ್ಷಣೆ)

Food in Kerala (1944)
(ಕೇರಳದಲ್ಲಿ ಆಹಾರ)

Peasant Question in Kerala (1951)
(ಕೇರಳದಲ್ಲಿ ರೈತ ಪ್ರಶ್ನೆ)

The Peasant in National Economic Construction (1954)
(ರಾಷ್ಟ್ರೀಯ ಆರ್ಥಿಕ ಪುನರ್ರಚನೆಯಲ್ಲಿ ರೈತ)

50 Years of Kisan Sabha
(ಕಿಸಾನ್ ಸಭಾದ 50 ವರ್ಷಗಳು)

ಪೂರೈಸಿದರೆ ಕಿಸಾನ್ ಸಭಾ ಮತ್ತು ಶ್ರಮಜೀವಿಗಳ ಇತರ ಸಮರಧೀರ ಸಂಘಟನೆಗಳು ತ್ವರಿತವಾಗಿ ವಿಸ್ತಾರಗೊಳ್ಳುವ ಮಹಾನ್ ಸಾಧ್ಯತೆಗಳು ಇವೆ ಎಂದು ತನ್ನ ಈ ಪ್ರಶ್ನೆಗೆ ಉತ್ತರಿಸುತ್ತಾ ಇಎಂಎಸ್ ಹೇಳಿದರು.

"ಮೊದಲನೆಯದಾಗಿ, ಒಟ್ಟಾರೆಯಾಗಿ ಅಖಿಲ ಭಾರತ ಸಂಘಟನೆಗಳನ್ನು,ನಿರ್ದಿಷ್ಟವಾಗಿ ಎಐಕೆಎಸ್ ನ ಏಕೀಕರಣವನ್ನು ತಡೆಯುತ್ತಿರುವ ಹಲವು ಧೋರಣೆಯ ಪ್ರಶ್ನೆಗಳನ್ನು ಕುರಿತಾಗಿ ಇರುವ ವ್ಯಾಪಕ ಗೊಂದಲಗಳನ್ನು ನಿವಾರಿಸಿಕೊಳ್ಳಬೇಕು ;ಎರಡನೆಯದಾಗಿ, ಎಐಕೆಎಸ್ (ಅದೇ ರೀತಿ ಎಐಎಡಬ್ಲ್ಯುಯು)ನ ಒಂದು ಬಲಿಷ್ಟ ಅಖಿಲ ಭಾರತ ಕೇಂದ್ರವನ್ನು ಕಟ್ಟಿ ಬೆಳೆಸಲು ಹಲವು ಸಂಘಟನಾ ಕ್ರಮಗಳನ್ನು ಕೈಗೊಳ್ಳಬೇಕು, ಅಲ್ಲಿ ಕಾರ್ಯನಿರ್ವಹಿಸುವವರು ರಾಜ್ಯ ಮತ್ತು ಕೆಳಮಟ್ಟಗಳಿಗೆ ನಿರ್ದಿಷ್ಟ ಸಹಾಯ ಒದಗಿಸಿ ಈಗಿನಂತೆ ಆಂದೋಲನ ಮತ್ತು ಸಂಘಟನೆ ಕೆಲವು ರಾಜ್ಯಗಳಿಗೆ ಮತ್ತು ಕೆಲವು ಪ್ರಭಾವೀ ಪ್ರದೇಶಗಳಿಗಷ್ಟೇ ಸೀಮಿತವಾಗಿರುವುದನ್ನು ತೀವ್ರವಾಗಿ ಬದಲಿಸಬೇಕು. ಇವೆರಡೂ ಪೂರ್ವಶರತ್ತುಗಳು ಪರಸ್ಪರ ಸಂಬಂಧಪಟ್ಟವುಗಳು ಎಂಬುದನ್ನು ಒತ್ತಿಹೇಳಬೇಕಾಗಿದೆ."

ಗೊಂದಲಗಳಿದ್ದ ಹಲವು ಧೋರಣಾ ವಿಷಯಗಳ ಬಗ್ಗೆ ಇಎಂಎಸ್ ವಿವರವಾಗಿ ಮಾತನಾಡಿದರು. ಎಐಕೆಎಸ್ ನ ಸಾಮ್ರಾಜ್ಯಶಾಹಿ-ವಿರೋಧಿ ನಿಲುವುಗಳನ್ನು ಇನ್ನಷ್ಟು ನಿರ್ದಿಷ್ಟಗೊಳಿಸಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು. ಈಗ ದೇಶದ ಮೇಲೆ ನೇರ ವಸಾಹತುಶಾಹಿ ಆಳ್ವಿಕೆ ಇಲ್ಲವಾದರೂ ಇತರ ಹಲವು ಮೂರನೇ ಜಗತ್ತಿನ ದೇಶಗಳೊಂದಿಗೆ ಭಾರತವೂ ನವವಸಾಹತುಶಾಹಿಯ ವಿವಿಧ ಸ್ವರೂಪಗಳಿಗೆ ಒಳಗಾಗಿದೆ. ಕಿಸಾನ್ ಸಭಾ ಸಂಬಂಧಪಟ್ಟ ಪ್ರಶ್ನೆಗಳನ್ನು ಇತರ ಸಂಘಟನೆಗಳೊಡಗೂಡಿ ಎತ್ತಿಕೊಳ್ಳಬೇಕು ಹಾಗೂ ಇತರ ಸಂಘಟನೆಗಳೊಂದಿಗೆ ಒಂದು ವಿಶಾಲ ಸಾಮ್ರಾಜ್ಯಶಾಹಿ-ವಿರೋಧಿ ರಂಗವನ್ನು ಕಟ್ಟಲು ಪ್ರಯತ್ನಿಸಬೇಕು.

ವಿಭಜನಕಾರಿ, ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಅಂದರೆ ಕೋಮುವಾದ, ಜಾತೀವಾದ, ಪ್ರಾದೇಶಿಕ ಪ್ರತ್ಯೇಕತಾವಾದ, ಭಾಷಾ ಮತ್ತು ಜನಾಂಗೀಯ ಸಂಕುಚಿತವಾದ ಇತ್ಯಾದಿಗಳ ವಿರುದ್ಧ ಹೋರಾಡಬೇಕಾದ್ದು ಅವು ವಿಚ್ಛಿದ್ರಕಾರಿ ಎಂಬ ಕಾರಣಕ್ಕಾಗಿ ಮಾತ್ರವೇ ಅಲ್ಲ, ಅವು ಸಾಮ್ರಾಜ್ಯಶಾಹಿ ನಮ್ಮ ದೇಶವನ್ನು ಅಸ್ಥಿರಗೊಳಿಸಲು ಬಳಸುವ ಸಾಧನಗಳು ಕೂಡ.

ಐಕ್ಯ ಹೋರಾಟಗಳ ಅಗತ್ಯ


ಆಳುವ ಮತ್ತು ವಿರೋಧಿ ರಾಜಕೀಯ ಪಕ್ಷಗಳ ಹಿಂದಿರುವ ಲಕ್ಷಾಂತರ ಜನಗಳನ್ನು ತಲುಪಲು ಐಕ್ಯ ಹೋರಾಟದ ಅಗತ್ಯವನ್ನು ಇಎಂಎಸ್ ಒತ್ತಿ ಹೇಳುತ್ತಿದ್ದರು. ಈ ಪಕ್ಷಗಳ ಹಿಂದಿರುವ ಹಾಗೂ ಎಡಪಕ್ಷಗಳು ಮತ್ತು ದುಡಿಯುವ ಜನಗಳ ಹೋರಾಟಶೀಲ ಸಂಘಟನೆಗಳಲ್ಲಿ ಇರುವ ಜನಗಳ ಹಿತಾಸಕ್ತಿಗಳು ಒಂದೇ ಎಂದು ವಿವರಿಸುತ್ತಾ ಅವರು ಒಂದು ವಿಶಾಲ ಅಖಿಲ ಭಾರತ ಆಂದೋಲನವನ್ನು ಕಟ್ಟಿ ಬೆಳೆಸಬೇಕಾದರೆ ಆ ಸಂಘಟನೆಗಳ ಮುಖಂಡತ್ವದ ವರ್ಗ ಸ್ವಭಾವವನ್ನು, ಜನಸಮೂಹಗಳ ಹಿತಾಸಕ್ತಿಗಳಿಗೆ ಅದು ಬಗೆಯುವ ವಿಶ್ವಾಸಘಾತವನ್ನು ಅವುಗಳ ಕಾರ್ಯಕರ್ತರು, ಅನುಯಾಯಿಗಳ ಮುಂದೆ ತೆರೆದಿಡದೆ ಅದು ಸಾಧ್ಯವಾಗದು ಎಂದು ತಿಳಿಸಿ ಹೇಳಿದರು. ಜಾತಿ-ಕೋಮು ಆಧಾರಿತ ಮತ್ತು ಇನ್ನಿತರ ಪಂಥವಾದಿ ಹಾಗೂ ವಿಚ್ಛಿದ್ರಕಾರಿ ಆಂದೋಲನಗಳ, ಸಂಘಟನೆಗಳ ಹಿಂದಿರುವ ಜನಸಮೂಹಗಳನ್ನು ಸರ್ವಸಾಮಾನ್ಯ ಹೋರಾಟಗಳತ್ತ ಸೆಳೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು, ಕೆಲವು ಸೀಮಿತ ಪ್ರಶ್ನೆಗಳ ಮೇಲೆ ಇಂತಹ ಸಂಘಟನೆಗಳ ಮುಖಂಡರೊಂದಿಗೂ ನಿರ್ದಿಷ್ಟ ಸ್ವರೂಪಗಳ ಐಕ್ಯ ಹೋರಾಟದ ಪ್ರಯತ್ನಗಳನ್ನು ಮಾಡಬೇಕು ಎಂಬುದು ಇಎಂಎಸ್ ಅಭಿಪ್ರಾಯವಾಗಿತ್ತು. ಆದರೆ ಇಂತಹ ಪ್ರಯತ್ನಗಳು ಆ ಸಂಘಟನೆಗಳ ಅಥವಾ ಅವುಗಳ ಮುಖಂಡರ ಪಂಥವಾದಿ ಕಾರ್ಯಕ್ರಮ ಮತ್ತು ಆಚರಣೆಗಳ ವಿರುದ್ಧ ಸೈದ್ಧಾಂತಿಕ ಹೋರಾಟಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿಯುಂಟು ಮಾಡುವಂತಿರಬಾರದು.

ಇಎಂಎಸ್ ಅಖಿಲ ಭಾರತ ಕಿಸಾನ್ ಸಭಾದ ವಾರಾಣಸಿ ಅಧಿವೇಶನ(1979)ದ ಪ್ರಧಾನ ಕಾರ್ಯದರ್ಶಿಗಳ ವರದಿಯನ್ನು ಸಂಪೂರ್ಣವಾಗಿ ಒಪ್ಪಿದ್ದರು, ಆ ಆಧಾರದಲ್ಲಿ ನಿರ್ದಿಷ್ಟ ಬೇಡಿಕೆಗಳನ್ನು ರೂಪಿಸಬೇಕು ಎಂದು ಒತ್ತಾಯಿಸಿದ್ದರು. ಕೃಷಿ ಕಾರ್ಮಿಕರನ್ನು ಮತ್ತು ಬಡರೈತರನ್ನು ಸಂಘಟಿಸಿ ಅವರನ್ನು ತಮ್ಮ ನಿರ್ದಿಷ್ಟ ಬೇಡಿಕೆಗಳ ಮೇಲಷ್ಟೇ ಅಲ್ಲ ಇಡೀ ರೈತಾಪಿ ವರ್ಗದ ಸಾರ್ವತ್ರಿಕ ಬೇಡಿಕೆಗಳ ಮೇಲೆ ಕಾರ್ಯಾಚರಣೆಗಿಳಿಸುವುದರ ಮೇಲೆ ರೈತರ ಐಕ್ಯತೆಯನ್ನು ಕಟ್ಟುವ ಕೆಲಸದ ಯಶಸ್ಸು ನಿಂತಿದೆ ಎಂದು ಅವರು ನಂಬಿದ್ದರು. ಇದೇ ರೀತಿ ಇತರ ರೈತಾಪಿ ಜನವಿಭಾಗಗಳನ್ನು ಸೆಳೆಯುವುದೂ ನಮ್ಮ ಸಾಮರ್ಥ್ಯವನ್ನು ಅವಲಂಬಿಸಿದೆ. ಸ್ವಲ್ಪದರಲ್ಲಿ ಹೇಳುವುದಾದರೆ, ಅವರ ಪ್ರಕಾರ, ಇದರಲ್ಲಿ ಯಶಸ್ಸೆಂಬುದು ಕೃಷಿಕಾರ್ಮಿಕರ ಹೋರಾಟಗಳಿಗೆ ರೈತಾಪಿಯ ಇತರ ವಿಭಾಗಗಳಿಂದ ಬೆಂಬಲ ಹಾಗೂ ಇತರ ರೈತಾಪಿ ವಿಭಾಗಗಳ ಹೋರಾಟಗಳಿಗೆ ಕೃಷಿಕಾರ್ಮಿಕರ ಬೆಂಬಲವನ್ನು ಸಂಘಟಿಸುವ ನಮ್ಮ ಸಾಮರ್ಥ್ಯದ ಮೇಲೆ ನಿಂತಿದೆ.

ಇವನ್ನೆಲ್ಲಾ ಕಾರ್ಯರೂಪಕ್ಕೆ ತರಲು ಹಲವು ಸಂಘಟನಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಇಎಂಎಸ್ ನಿರಂತರವಾಗಿ ಒತ್ತಾಯಿಸುತ್ತಿದ್ದರು.ಆ ಕ್ರಮಗಳೆಂದರೆ-

"ಒಂದು ಪರಿಣಾಮಕಾರಿ ಅಖಿಲ ಭಾರತ ಕೇಂದ್ರದ ರಚನೆ ಹಾಗೂ ಅಲ್ಲಿಂದ ರಾಜ್ಯ ಘಟಕಗಳಿಗೆ ರಾಜಕೀಯ ಮತ್ತು ಸಂಘಟನಾ ಮಾರ್ಗದರ್ಶನ ನೀಡಲು ಪೂರ್ಣಕಾಲದ ಕಾರ್ಯಕರ್ತರು -ಇದಕ್ಕೆ ಬೇರಾವುದೇ ಸಂಘಟನಾ ಕ್ರಮಕ್ಕಿಂತ ಮೊದಲ ಆದ್ಯತೆ ನೀಡಬೇಕು. ಕೇಂದ್ರ ತಕ್ಷಣವೇ ಕೈಗೊಳ್ಳಬೇಕಾದ ಒಂದು ಕೆಲಸವೆಂದರೆ ರಾಜ್ಯಕ್ಕಿಂತ ಕೆಳಮಟ್ಟಗಳಲ್ಲಿ ಸಂಘಟನೆಯನ್ನು ಕಟ್ಟಬಲ್ಲ ಸಕ್ರಿಯ ಕಾರ್ಯಕರ್ತರಿಗೆ ಸತತ ತರಬೇತಿ ನೀಡಲು ಕೇಂದ್ರ ಮತ್ತು ರಾಜ್ಯ ಶಾಲೆಗಳನ್ನು ಏರ್ಪಡಿಸುವುದು. ಹೀಗೆ ತರಬೇತಿ ಪಡೆದ ಕಾರ್ಯಕರ್ತರು ಅತ್ಯಂತ ಕೆಳಗಿನ ಆದರೆ ಅತ್ಯಂತ ಮಹತ್ವದ ಮಟ್ಟದಲ್ಲಿ ಅಂದರೆ ಗ್ರಾಮ ಮಟ್ಟದಲ್ಲಿ ರೈತ ಮತ್ತು ಕೃಷಿಕೂಲಿಕಾರ ಸಂಘಟನೆಗೆ ಅಗತ್ಯ ನಾಯಕತ್ವ ನೀಡುವ ಸ್ಥಿತಿಯಲ್ಲಿರಬೇಕು; ಬಹುಪಾಲು ಜನರೊಂದಿಗೆ ದೈನಂದಿನ ಜೀವಂತ ಸಂಪರ್ಕವಿರಬೇಕು,ಅವರ ದೈನಂದಿನ ಜೀವನವನ್ನು ತಟ್ಟುವ ಪ್ರತಿಯೊಂದು ಪ್ರಶ್ನೆಯ ಮೇಲೆ ಅವರನ್ನು ಅಣಿನೆರಸಬೇಕು. ಬೇರೆ ಮಾತುಗಳಲ್ಲಿ ಹೇಳುವುದಾದರೆ,ಸಂಘಟನಾ ಸರಪಣಿಯಲ್ಲಿನ ಎರಡು ಕೊಂಡಿಗಳಾದ ಅಖಿಲ ಭಾರತ ಕೇಂದ್ರ ಮತ್ತು ಗ್ರಾಮವನ್ನು ಬಲಿಷ್ಟಗೊಳಿಸುವದು ಸಂಘಟನಾ ಸಮಸ್ಯೆಯ ಕೇಂದ್ರ ಪ್ರಶ್ನೆ, 50ವರ್ಷಗಳ ಸಂಘಟನೆಯ ಹೆಮ್ಮೆಯ ಪರಂಪರೆಯನ್ನು ಮುಂದುವರೆಸಿ ಕೊಂಡು ಗ್ರಾಮೀಣ ಶ್ರಮಜೀವಿಗಳ ಇಂದಿನ ಹಾಗೂ ಭವಿಷ್ಯದತ್ತ ಕಣ್ಣಟ್ಟಿರುವ ಸಮಸ್ಯೆಯ ಕೇಂದ್ರ ಪ್ರಶ್ನೆ."

ಆಂದೋಲನದ ಹಾಗೂ ಸಂಘಟನೆಯ ಈ ಅಂಶಗಳ ಬಗ್ಗೆ ರೈತ ಮತ್ತು ಕೃಷಿಕಾರ್ಮಿಕ ಕಾರ್ಯಕರ್ತರಿಗೆ ಶಿಕ್ಷಣ ನೀಡಲೆಂದೇ ಇಎಂಎಸ್ ರೈತ ಪ್ರಶ್ನೆಗಳ ಮೇಲೆ ಹಲವಾರು ಪುಸ್ತಕಗಳು, ಕರಪತ್ರಗಳನ್ನು ಬರೆದರು. ○



<u>ಇದು ಇಎಂಎಸ್ ಸಿಪಿಐ(ಎಂ)ನ ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಗೆ ಕಳಿಸಿದ ಕೊನೆಯ ಲೇಖನ. ಕೋಮುವಾದಿ ಶಕ್ತಿಗಳ ವಿರುದ್ಧ, ನಮ್ಮ ರಾಜಕೀಯ ವ್ಯವಸ್ಥೆ ಮತ್ತು ಸಂವಿಧಾನದ ಪ್ರಜಾಸತ್ತಾತ್ಮಕ, ಜಾತ್ಯಾತೀತ ಸ್ವರೂಪದ ರಕ್ಷಣೆಗೆ ಟೊಂಕ ಕಟ್ಟಲು ಶ್ರಮಜೀವಿಗಳಿಗೆ ರಣಕಹಳೆಯಂತಿರುವ ಈ ಲೇಖನ ಕೊನೆಯ ವರೆಗೂ ಮಾರ್ಕ್ಸ್‌ವಾದಕ್ಕೆ ಅವರು ಹೇಗೆ ಬದ್ಧರಾಗಿದ್ದರೆಂದು ತೋರಿಸುತ್ತದೆ. ಇದು ವಾಜಪೇಯಿ ಸರಕಾರ ಆಧಿಕಾರಕ್ಕೆ ಬರುವ ಮೊದಲೇ ಬರೆದದ್ದು ಎಂಬುದನ್ನು ಗಮನಿಸಬೇಕು.</u>

ಎರಡನೇ ವಾಜಪೇಯಿ ಸರಕಾರ

ಇ.ಎಂ.ಎಸ್.ನಂಬೂದಿರಿಪಾಡ್

ಈ ಸಾಲುಗಳು ಮುದ್ರಣಗೊಳ್ಳುವ ವೇಳೆಗೆ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎರಡನೇ ಬಿಜೆಪಿ ಸರಕಾರ ಪ್ರತಿಜ್ಞೆ ಸ್ವೀಕರಿಸಿರುತ್ತದೆ. ನಿಜ, ಅದಾದ ಮೇಲೆ ವಿಶ್ವಾಸ ಮತ ಇರುತ್ತದೆ. ಇದಕ್ಕೂ ಎರಡು ವಾರವೂ ಅಧಿಕಾರದಲ್ಲಿ ಮುಂದುವರಿಯಲಾಗದ ಮೊದಲ ವಾಜಪೇಯಿ ಸರಕಾರದ ಗತಿ ಬರಬಹುದೆ?

ಎರಡನೇ ವಾಜಪೇಯಿ ಸರಕಾರ ಮೊದಲನೆಯದರಂತೆ ಎರಡೇ ವಾರದಲ್ಲಿ ಎಸೆಯಲ್ಪಡುವ ಸಾಧ್ಯತೆ ತುಂಬಾ ಕಮ್ಮಿಯೆಂದೇ ಹೇಳಬೇಕು.ಏಕೆಂದರೆ ಎರಡನೇ ಬಿಜೆಪಿ ಸರಕಾರಕ್ಕೆ ಮೊದಲನೆಯದಕ್ಕಿಂತ ಹೆಚ್ಚಿನ ಎಂಪಿಗಳ ಬೆಂಬಲ ಇದೆ. ಅಲ್ಲದೆ ಕಾಂಗ್ರೆಸ್ ಪ್ರತಿಪಕ್ಷ ಧರ್ಮನಿರಪೇಕ್ಷ ಶಕ್ತಿಗಳ ಕೂಟವೊಂದನ್ನು ರಚಿಸುವ ಮುತುವರ್ಜಿಯನ್ನೇ ತಗೊಳ್ಳಲಿಲ್ಲ. ಆದ್ದರಿಂದ ಈಗಿನ ವಾಜಪೇಯಿ ಸರಕಾರ ಮಾರ್ಚ್ 28ರಂದು ನಡೆಯಲಿರುವ ವಿಶ್ವಾಸ ಮತದಲ್ಲಿ ಉಳಿಯಬಹುದು.ಈ ಹಿಂದಿನದರ ಗತಿ ಇದಕ್ಕೆ ಬರಲಿಕ್ಕಿಲ್ಲ ಎಂದು ನಿರೀಕ್ಷಿಸಬಹುದು.

ಅಂದರೆ ಎರಡನೇ ವಾಜಪೇಯಿ ಸರಕಾರ ಒಂದು ಸ್ಥಿರ ಸರಕಾರ ಎಂದು ಅರ್ಥವಲ್ಲ. ಏಕೆಂದರೆ ಅದು ಒಂದು ಸಮಯಸಾಧಕ ಕೂಟವನ್ನು ಆಧರಿಸಿದೆ. ಈ ಕೂಟದ ಭಾಗೀದಾರರು ಪರಸ್ಪರ ಗುಂಪುಗಾರಿಕೆಯಿಂದ ಮಾತ್ರವೇ ಅಲ್ಲ, ರಾಜಕೀಯವಾಗಿಯೂ ಹೊಡೆದಾಡುತ್ತಿದ್ದಾರೆ.

ಸಮತಾ ಪಾರ್ಟಿಯಂತಹ ಬಿಜೆಪಿಯ ಕೆಲವು ಮಿತ್ರಪಕ್ಷಗಳು ಕಾಶಿ ಮಥುರಾ ಮತ್ತು ದೇಶಾದ್ಯಂತ ಹಲವು ಕಡೆ ದೇವಸ್ಥಾನ ಕಟ್ಟುವ, ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನ-ಮಾನ ನೀಡುವ ಅಂಶವನ್ನು, ವಿರೋಧಿಸುವ ಸಮರೂಪ ನಾಗರಿಕ ಸಂಹಿತೆ ತರಲು ತಕ್ಷಣ ಶಾಸನ ಮತ್ತಿತರ ಬಿಜೆಪಿ ಪ್ರಣಾಳಿಕೆಯ ಬೇಡಿಕೆಗಳನ್ನು, ಪ್ರಸ್ತಾಪಗಳನ್ನು ಬಹಿರಂಗವಾಗಿ ವಿರೋಧಿಸಿವೆ. ಎಐಎಡಿಎಂಕೆ ಕಾವೇರಿ ನೀರು ವಿವಾದಕ್ಕೆ ಸಂಬಂಧಪಟ್ಟ ಬೇಡಿಕೆಯನ್ನು ಬಿಜೆಪಿ ಒಪ್ಪುವಂತೆ ಮಾಡಿದೆ. ಇದನ್ನು ಅದರ ಇನ್ನೊಂದು ಮಿತ್ರ ಕರ್ನಾಟಕದ ಲೋಕಶಕ್ತಿ ವಿರೋಧಿಸಿದೆ.

ಎರಡನೇ ವಾಜಪೇಯಿ ಸರಕಾರ ತನ್ನ ಮಿತ್ರಪಕ್ಷಗಳ ಇಂತಹ ಪರಸ್ಪರ ವಿರೋಧಿ ಧೋರಣೆಗಳನ್ನು ಹೇಗೆ ಸರಿಹೊಂದಿಸಿಕೊಳ್ಳುತ್ತದೆ? ಲೋಕಸಭೆಯಲ್ಲಿ ವಾಜಪೇಯಿಯವರು ಬಹುಮತ ತೋರಿಸಲು ಅನುವು ಮಾಡಿಕೊಡುವ ಒಂದೂವರೆ ಡಝನ್ ಭಾಗೀದಾರರ ನಡುವಿನ ತಿಕ್ಕಾಟಗಳನ್ನು ಈ ಎರಡನೇ ವಾಜಪೇಯಿ ಸರಕಾರದ ಅವಧಿಯಲ್ಲಿ ನೋಡಬೇಕಾಗಿ ಬರಬಹುದು ಎಂಬುದು ಸ್ವಯಂವೇದ್ಯ.

ಆದರೆ ಬಿಜೆಪಿ ಮೈತ್ರಿಯ ಭಾಗೀದಾರರ ನಡುವಿನ ಈ ತಿಕ್ಕಾಟಗಳಿಗಿಂತ ಬಹಳ ಮುಖ್ಯವಾದ ಇನ್ನೊಂದು ಸಂಗತಿಯಿದೆ. ಅದೆಂದರೆ 12ನೇ ಲೋಕಸಭೆಯಲ್ಲಿರುವ ಇನ್ನೆರಡು ರಚನೆಗಳು.ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಹಾಗೂ 14ಪಕ್ಷಗಳ ಸಂಯುಕ್ತ ರಂಗ ಜಾತ್ಯಾತೀತತೆಯನ್ನು ಆಧರಿಸಿದ ಸಾರ್ವಜನಿಕ ಅಭಿಪ್ರಾಯದ ಒಂದು ವ್ಯಾಪಕವಾದ ವಿಭಾಗವನ್ನು ಪ್ರತಿನಿಧಿಸುವಂತವು. ಇವು ಪ್ರತಿನಿಧಿಸುವ ಜಾತ್ಯಾತೀತ ರಾಜಕೀಯ ಶಕ್ತಿಗಳು ಜನಗಳ ನಡುವೆ ಬಿಜೆಪಿ ಮತ್ತು ಮಿತ್ರಪಕ್ಷಗಳಿಗಿಂತ ಬಲಶಾಲಿಯಾಗಿವೆ.ಆದ್ದರಿಂದ 12ನೇ ಲೋಕಸಭೆ ರಾಷ್ಟ್ರೀಯವಾದ ಮತ್ತು ಜಾತ್ಯಾತೀತತೆಗಾಗಿ ಹಾಗೂ ಕೋಮುವಾದದ ವಿರುದ್ಧ ಒಂದು ಸಮರವನ್ನು ಕಾಣಲಿದೆ. ಸಂಸತ್ತಿನ ಹೊರಗಡೆ ಅಂದರೆ ನಗರಗಳಲ್ಲಿ, ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ ಭಾರತದಾದ್ಯಂತ ಒಂದು ಬಲಿಷ್ಟ ಆಂದೋಲನ 12ನೇ ಲೋಕಸಭೆಯಲ್ಲಿನ ಈ ಸಮರದೊಂದಿಗೆ ಸೇರಿಕೊಳ್ಳುತ್ತದೆ.

12ನೇಲೋಕಸಭೆಯಲ್ಲಿ ವಿಶ್ವಾಸಮತ ಠರಾವಿನ ಗತಿ ಏನೇ ಆಗಲಿ,ಇದು ಲೋಕಸಭೆಯೊಳಗೆ ಮಾತ್ರವೇ ಅಲ್ಲ ಹೊರಗಡೆಯೂ ನಡೆಯಲಿರುವ ಒಂದು ದೃಢ ಸಮರದ ಆರಂಭ. ಈ ಸಮರದಲ್ಲಿ ಕೋಟಿಗಟ್ಟಲೆ ಜನ ಅನೀತಿಯುತ ವಿಧಾನಗಳಿಂದ ಅಧಿಕಾರ ಪಡೆದ ಸಮಯಸಾಧಕ ಕೂಟದ ವಿರುದ್ಧ ಅಣಿನೆರೆಯುತ್ತಾರೆ. ಮಾರ್ಚ್ 28ರಂದು ಲೋಕಸಭೆಯಲ್ಲಿ ಕಾಣಲಿರುವ ಸಮಯಸಾಧಕ ಕೂಟದ ವಿರುದ್ಧ ಕೈಗಾರಿಕಾ ಮತ್ತು ಕೃಷಿ ಕಾರ್ಮಿಕರು, ದುಡಿಯುವ ರೈತರು, ಮಧ್ಯಮವರ್ಗದ ನೌಕರರು ಮತ್ತು ಇತರೆಲ್ಲಾ ದುಡಿಯುವ ಜನವಿಭಾಗಗಳು ಮೇಲ್ವರ್ಗಗಳಲ್ಲೂ ಇರುವ ಜಾತ್ಯಾತೀತ ಪ್ರಜಾಪ್ರಭುತ್ವ ವಾದಿ ಶಕ್ತಿಗಳೊಂದಿಗೆ ರ್‍ಯಾಲಿಗಳಲ್ಲಿ, ಮತಪ್ರದರ್ಶನಗಳಲ್ಲಿ ಬೀದಿಗೆ ಬರುತ್ತಾರೆ.

ಅಂದರೆ ವಿಶ್ವಾಸಮತದ ಫಲಿತಾಂಶವೆಂದರೆ ಹೋರಾಟದ ಅಂತ್ಯವಲ್ಲ, ಸಂಸತ್ತಿನ ಹೊರಗಿನ ಸಮರದ ಆರಂಭ.ಆದ್ದರಿಂದ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು ಆರಂಭಿಸಲಿರುವ ಸಂವಿಧಾನೇತರ ಚಳುವಳಿಗಳು ಮತ್ತು ಹೋರಾಟಗಳು ಎರಡನೇ ವಾಜಪೇಯಿ ಸರಕಾರವನ್ನು ಕ್ರಮೇಣ ದುರ್ಬಲಗೊಳಿಸುತ್ತವೆ.

ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು 11ನೇ ಲೋಕಸಭೆಗಿಂತ 12ನೇ ಲೋಕಸಭೆಯಲ್ಲಿ ಬಹಳ ದುರ್ಬಲವಾಗಿವೆ. ಆದರೆ ಅದರರ್ಥ ಈಶಕ್ತಿಗಳು ಲೋಕಸಭೆಯ ಹೊರಗಡೆ ದುಡಿಯುವ ಜನಗಳು ತಮ್ಮ ಸಾಮಾಜಿಕ-ಆರ್ಥಿಕ ಮತ್ತು ರಾಜಕೀಯ ಸಮರಗಳನ್ನು ನಡೆಸಬೇಕಾದ ಹಾಗೂ ನಡೆಸುವ ಹಳ್ಳಿಗಳಲ್ಲಿ,ನಗರದ ವಾರ್ಡುಗಳಲ್ಲಿ ಹೋರಾಡಲು ಸಾಧ್ಯವಿಲ್ಲವೆಂದಲ್ಲ.

ಕಾರ್ಮಿಕಸಂಘಗಳು, ಕಿಸಾನ್ ಸಭಾ, ಕೃಷಿಕಾರ್ಮಿಕರ ಸಂಘಗಳು ಮತ್ತು ದುಡಿಯುವ ಜನರ ಇತರ ಹೋರಾಟನಿರತ ಸಂಘಟನೆಗಳು ತಮ್ಮದೇ ಸಂಘಟನಾ ಶಕ್ತಿಯನ್ನು ಬೆಳೆಸಿಕೊಂಡು ಎಲ್ಲಾ ವರ್ಗಗಳಿಂದ ಬರುವ ಎಲ್ಲಾ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳೊಂದಿಗೆ ಕೈಜೋಡಿಸುತ್ತಾರೆ. ಲೋಕಸಭೆಯ ಹೊರಗಡೆ ಹೋರಾಟದ ತೀವ್ರತೆ 12ನೇ ಲೋಕಸಭೆಯ ಒಳಗಿನ ಹೋರಾಟದ ಹಣೆಬರಹವನ್ನು ನಿರ್ಧರಿಸುತ್ತದೆ.

ಕಾಂಗ್ರೆಸ್ಸಿಗರಿಗೆ ಸುರ್ಜಿತ್ ಪ್ರಶ್ನೆ

ಪುಟ 1 ರಿಂದ

ಗಳಿಂದಾಗಿ ಜನ ಮತ್ತೆ ಮತ್ತೆ ಎಡರಂಗಕ್ಕೆ ಮತ ನೀಡಿದ್ದಾರೆ. ತದ್ವಿರುದ್ಧವಾಗಿ ಕಾಂಗ್ರೆಸ್ ಭೂಸುಧಾರಣೆಯ ಬಗ್ಗೆ ಕೇವಲ ಮಾತಾಡುತ್ತಲೇ ಇದೆ, ಎಂದೂ ಯಾವುದೇ ಕ್ರಮ ಕೈಗೊಂಡಿಲ್ಲ ಎನ್ನುತ್ತಾ ಸುರ್ಜಿತ್ *"1975ರಲ್ಲಿ ಎಐಸಿಸಿಯ ನರೋರಾ ಕ್ಯಾಂಪಿನಲ್ಲಿ ಜಗಜೀವನರಾಂ 1975ರ ವರ್ಷ ಭೂಸುಧಾರಣೆಯ ವರ್ಷವಾಗಲಿ ಎಂದದ್ದು ನನಗೆ ನೆನಪಿದೆ. ಆದರೆ ಏನೂ ಆಗಲಿಲ್ಲ"* ಎಂದು ನೆನಪಿಸಿದ್ದಾರೆ.

ಅದೇ ರೀತಿ ಜಾತ್ಯಾತೀತತೆಯ ಪ್ರಶ್ನೆಯಲ್ಲಿ ಕೂಡಾ ಕಾಂಗ್ರೆಸ್ ತಾನು ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡಿದ್ದರಿಂದ ಅವು ಬೆಳೆಯುವಂತಾಯಿತು, ಬಾಬ್ರಿ ಮಸೀದಿಯ ಧ್ವಂಸ ಇಂತಹ ನೀತಿಯ ಸಹಜ ಪರಿಣಾಮ ಎಂಬುದನ್ನು ಗುರುತಿಸಬೇಕಾಗುತ್ತದೆ. ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಆ ಪಕ್ಷದ ಹಲವು ಮುಖಂಡರ ಮೆರವಣಿಗೆಯೇ ಬಿ.ಜೆ.ಪಿಯತ್ತ ಸಾಗಿದ್ದಕ್ಕಿಂತ ದೊಡ್ಡ ಉದಾಹರಣೆ ಇದಕ್ಕೆ ಇನ್ನೇನು ಬೇಕು ಎಂದು ಸುರ್ಜಿತ್ ಪ್ರಶ್ನಿಸುತಾರೆ.

"ಬಿ.ಜೆ.ಪಿ. ಸರಕಾರ ದೇಶದ ಮೂಲಭೂತ ಜಾತ್ಯಾತೀತ, ಪ್ರಜಾಸತ್ತಾತ್ಮಕ ಹಾಗೂ ಸಮಾನಾತ್ಮಕ ಚೌಕಟ್ಟನ್ನು ಹಾಳುಗೆಡವದಂತೆ ನಿರಂತರ ಜಾಗರೂಕತೆ ವಹಿಸುವಲ್ಲಿ ತನ್ನ ಪಾತ್ರದ ಬಗ್ಗೆ ಕಾಂಗ್ರೆಸ್‌ಗೆ ಪ್ರಜ್ಞೆಯಿದೆ.... ಈ ಮೂಲಭೂತ ಮೌಲ್ಯಗಳನ್ನು ಕಾಪಾಡಬೇಕಾದ ಸನ್ನಿವೇಶಗಳಲ್ಲಿ ಯಾವುದೇ ಕ್ರಮ ಕೈಗೊಳ್ಳುವ ಕರ್ತವ್ಯದಿಂದ ನಾವು ವಿಮುಖರಾಗುವುದಿಲ್ಲ" ಎಂದು ಎಐಸಿಸಿ ಅಧಿವೇಶನದ ರಾಜಕೀಯ ಠರಾವು ಹೇಳಿದೆ. ಅದರಂತೆ ನಡೆಯಲು ಅದು ಶ್ರಮಿಸಬೇಕು ಎಂದು ಸುರ್ಜಿತ್ ಹೇಳಿದ್ದಾರೆ.

ವಾಜಪೇಯಿ ಸರ್ಕಾರದ ಮೊದಲ ವಿಕೆಟ್ ಪತನ

ಭ್ರಷ್ಟಾಚಾರದ ಆರೋಪ ಹೊತ್ತಿರುವ ಕೇಂದ್ರದ ಭೂಸಾರಿಗೆ ಸಚಿವ ಆರ್. ಮುತ್ತಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಅಣ್ಣಾ ಡಿಎಂಕೆ ಪಕ್ಷದ ಈ ಮಂತ್ರಿ ಏಪ್ರಿಲ್ 8 ರಂದು ಪದತ್ಯಾಗ ಮಾಡುವುದರೊಂದಿಗೆ 20 ದಿನಗಳಷ್ಟು ಹಳೆಯದಾದ ಬಿಜೆಪಿ ನೇತೃತ್ವದ ಮೈತ್ರಿಕೂಟ ಸರಕಾರದ ಮೊದಲ ವಿಕೆಟ್ ಪತನ ಆದಂತಾಗಿದೆ.

ಅಣ್ಣಾ ಡಿಎಂಕೆಯ ಜಯಲಲಿತಾ 1991 ರಿಂದ 1996 ರ ವರೆಗೆ ತಮಿಳುನಾಡು ಮುಖ್ಯಮಂತ್ರಿ ಆಗಿದ್ದಾಗ ಮುತ್ತಯ್ಯ ವಿಧಾನ ಸಭೆಯ ಸ್ಪೀಕರ್ ಆಗಿದ್ದರು. ಈ ಅವಧಿ ಯಲ್ಲಿ ಅವರು ಬಲ್ಲ ಆದಾಯ ಮೂಲಕ್ಕಿಂತ ಹೆಚ್ಚಿನ ಆಸ್ತಿಪಾಸ್ತಿ ಗಳಿಸಿದ್ದಾರೆ ಎಂಬ ಆರೋಪವಿತ್ತು.

ಜಯಲಲಿತಾರ ಪಕ್ಷ ವಿಧಾನಸಭೆ ಚುನಾವಣೆಯಲ್ಲಿ ಸೋತು ಸುಣ್ಣವಾಗಿ ಡಿಎಂಕೆ ಸರಕಾರ ಅಧಿಕಾರಕ್ಕೆ ಬಂದಮೇಲೆ ಎಡಿಎಂಕೆ ಸರಕಾರದ ಅವಧಿಯ ಎಲ್ಲಾ ಭ್ರಷ್ಟಾಚಾರದ ಪ್ರಕರಣಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯವೊಂದನ್ನು ರಚಿಸಲಾಗಿತ್ತು.

ನಾಯಕಿ ಜಯಲಲಿತಾ ಆಗಲೇ ಹಲ ವಾರು ಪ್ರಕರಣಗಳಲ್ಲಿ ಸಿಕ್ಕಿಹಾಕಿ ಕೊಂಡಿದ್ದು ಮೊಕದ್ದಮೆಗಳನ್ನು ಎದುರಿಸು ತ್ತಿದ್ದಾರೆ. ಇದೀಗ, ವಿಶೇಷ ನ್ಯಾಯಾಲಯ ಏಪ್ರಿಲ್ ಸಚಿವ ಮುತ್ತಯ್ಯರ ವಿರುದ್ಧ ಆರೋಪ ಪಟ್ಟಿಯನ್ನು ಸಿದ್ಧಪಡಿಸುವಂತೆ ಸೂಚಿಸಿತು.

ರಾಜ್ಯದ ಭ್ರಷ್ಟಾಚಾರ ತಡೆ ದಳ ಮುತ್ತಯ್ಯರ ವಿರುದ್ಧ ಮಾಡಿರುವ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗು ವಂತಿದೆ. ಹಾಗಾಗಿ ಅವರ ವಿರುದ್ಧ ಆರೋಪ ಪಟ್ಟಿಯನ್ನು ರೂಪಿಸ ಬಹುದು ಎಂದು ನ್ಯಾಯಾಲಯ ತಿಳಿಸಿದೆ. ಮುತ್ತಯ್ಯ ಮಾತ್ರವಲ್ಲದೆ ಅವರ ಪತ್ನಿ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಮಗಳು ಕೂಡ ನ್ಯಾಯಾಲಯದ ಕ್ರಮಕ್ಕೆ ಒಳಗಾಗಿದ್ದಾರೆ.

ತಾವೂ ಹಾಗೂ ತಮ್ಮ ಕುಟುಂಬ ಸದಸ್ಯರು ನಿರಪರಾಧಿಗಳು. ಆದ್ದರಿಂದ ಈ ಮೊಕದ್ದಮೆ ಯನ್ನು ವಜಾ ಮಾಡಬೇಕು ಎಂಬ ಮುತ್ತಯ್ಯರ ವಾದವನ್ನು ನ್ಯಾಯಾಧೀಶರು ತಳ್ಳಿ ಹಾಕಿದರು.

ತಾವು ರಾಜಿನಾಮೆ ನೀಡುವುದಿಲ್ಲ ಎಂದು ಮೊದಲಿಗೆ ಮುತ್ತಯ್ಯ ಹೇಳಿದ್ದರು. ಆದರೆ ಜಯಲಲಿತಾರ ಸೂಚನೆ ಮೇರೆಗೆ ಅವರು ಪದತ್ಯಾಗ ಮಾಡಿದ್ದಾರೆ.

ಸಾರ್ವಜನಿಕ ಜೀವನದಲ್ಲಿ ಪರಿಶುದ್ಧತೆ ಯನ್ನು ಕಾಪಾಡುವುದು ತಮ್ಮ ಪಕ್ಷದ ಉದ್ದೇಶ ವಾಗಿದೆ ಎಂದು ಜಯಲಲಿತಾ ಹೇಳಿದ್ದಾರೆ. ಆದರೆ ಅವರ ಈ ಹೇಳಿಕೆ ಎಷ್ಟು ವಿಶ್ವಾಸಾರ್ಹ ವಾದುದು ಎನ್ನುವುದು ಪ್ರಶ್ನಾರ್ಹ ಸಂಗತಿಯೇ ಆಗಿದೆ. ಭ್ರಷ್ಟಾಚಾರ, ಅಕ್ರಮ ಮಾರ್ಗಗಳಿಂದ ಗಳಿಸಿದ ಆಸ್ತಿಪಾಸ್ತಿಯಲ್ಲಿ ಮುಳುಗೆದ್ದಿರುವ ವ್ಯಕ್ತಿಯೊಬ್ಬರ ಈ ಹೇಳಿಕೆಗೆ ಎಷ್ಟು ತೂಕವಿರಲು ಸಾಧ್ಯ?

ಆರೋಪ ಪಟ್ಟಿ

ಈ ಮಧ್ಯೆ ಮುತ್ತಯ್ಯರ ವಿಚಾರದಲ್ಲಿ ತೀರ್ಪು ಕೊಡುವಾಗ ನ್ಯಾಯಾಧೀಶರು ಕೊಟ್ಟ ಇನ್ನೊಂದು ತೀರ್ಪು ಈ ಗಲಾಟೆಯಲ್ಲಿ ಅಷ್ಟೊಂದು ಸುದ್ದಿಯಾಗಲೇ ಇಲ್ಲ. ಜಯಲಲಿತಾರ ಸರಕಾರದಲ್ಲಿ ಮಂತ್ರಿ ಯಾಗಿದ್ದ ಹಾಗೂ ಈಗ ಲೋಕಸಭೆ ಸದಸ್ಯರಾಗಿರುವ ವಿ.ಸತ್ಯಮೂರ್ತಿಯವರ ವಿರುದ್ಧ ಅಕ್ರಮ ಆಸ್ತಿಪಾಸ್ತಿ ಸಂಪಾದನೆ ಪ್ರಕರಣಕ್ಕೆ ಸಂಬಂಧಿಸಿ ಆರೋಪಪಟ್ಟಿ ಯನ್ನು ಸಲ್ಲಿಸುವಂತೆ ವಿಶೇಷ ನ್ಯಾಯಾ ಧೀಶರು ಆದೇಶ ಹೊರಡಿಸಿದ್ದಾರೆ.

ಸತ್ಯಮೂರ್ತಿ ತಮ್ಮ ಕುಟುಂಬದ ಸದಸ್ಯರ ಹೆಸರಲ್ಲಿ ಆಸ್ತಿಪಾಸ್ತಿ ಮಾಡಿ ಕೊಂಡಿದ್ದಾರೆ ಎಂಬ ಆಪಾದನೆಯಿದೆ.

ಬಿಜೆಪಿ ಇಬ್ಬಗೆ ನೀತಿ

ಕೇಂದ್ರ ಮಂತ್ರಿ ಮುತ್ತಯ್ಯರಿಗೆ ಸಂಬಂಧಿಸಿ ವಿಶೇಷ ನ್ಯಾಯಾಧೀಶರ ತೀರ್ಪು ಹೊರಬಂದಾಗ ಬಿಜೆಪಿ ಪ್ರಧಾನ ಕಾರ್ಯದರ್ಶಿ ವೆಂಕಯ್ಯನಾಯ್ಡು ಚೆನ್ನೈನಲ್ಲಿ ದ್ದರು. ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮುತ್ತಯ್ಯರ ಪ್ರಕರಣಕ್ಕೂ ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲೂ ಪ್ರಸಾದರ ಪ್ರಕರಣಕ್ಕೂ ಹೋಲಿಕೆ ಸರಿಯಲ್ಲ ಎಂದು ನಾಯ್ಡು ಹೇಳಿದರು. ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿ ಹೊಂದಿರುವ ಇಬ್ಬಗೆ ನೀತಿಗೆ ಇದು ನಿದರ್ಶನ ಅಲ್ಲವೇ?

ಮಹಾರಾಷ್ಟ್ರದಲ್ಲಿಯೂ ಹಾಲಾಹಲ....

ನೇಣು ಹಾಕಿಕೊಂಡರು,.... ವಿಷ ಕುಡಿದರು ...... ಬಾವಿಗೆ ಹಾರಿದರು.....

ವಿಧಾನ ಬೇರೆ ಬೇರೆ ಇರಬಹುದು. ಈ ರೀತಿಯ ಕೃತ್ಯಕ್ಕಿಳಿದವರ ಉದ್ದೇಶ ಮಾತ್ರ ಒಂದೇ..... ಆತ್ಮಹತ್ಯೆ.

ಹಲವಾರು ಕಾರಣಗಳಿಗಾಗಿ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆದರೆ ಈ ಪ್ರವೃತ್ತಿ ಇದೀಗ ಕಳವಳಕಾರಿ ಆಯಾಮ ವೊಂದನ್ನು ಪಡೆದು ಕೊಳ್ಳುತ್ತಿದ್ದು ದೇಶದ ಅನ್ನದಾತ ರೈತ ಸಮುದಾಯದ ಹಲವರು ಬವಣೆಯನ್ನು ತಾಳಿಕೊಳ್ಳದೆ ಜೀವನವನ್ನೇ ಮುಗಿಸಿಕೊಳ್ಳುವ ಅಪಾಯಕಾರಿ ಮಾರ್ಗದ ಬೆನ್ನು ಹತ್ತಿದ್ದಾರೆ.

ಆಂಧ್ರಪ್ರದೇಶದ ನಂತರ ಕರ್ನಾಟಕಕ್ಕೆ ಕಾವಿಟ್ಟ ಈ ಮಾರಿ ಇದೀಗ ನೆರೆಯ ಮಹಾರಾಷ್ಟ್ರವನ್ನು ಪ್ರವೇಶಿಸಿದೆ.

ವಿಠೂಜಿ ವಾಸುಕರ್, ಭಗವಾನ್ ಸಿಂಗ್ ಠಾಕೂರ್, ಪ್ರತಾಪ ರಾವ್ ಪಾಟೀಲ್, ತುಳಸಿರಾಣಾ ಇಂಗಳೆ ಈ ರೀತಿಯಾಗಿ ಅನೇಕ ರೈತರು ಬೆಳೆ ಹಾನಿಯ ನಷ್ಟ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ಸಂಗತಿ ಇದೀಗ ಬೆಳಕಿಗೆ ಬಂದಿದೆ. ಮಹಾರಾಷ್ಟ್ರದ ವಿದರ್ಭ ಪ್ರದೇಶದ ಊರುಗಳಿಂದ ಈ ಎಲ್ಲಾ ವರದಿಯಾಗಿವೆ.

ಏಪ್ರಿಲ್ 7 ರವರೆಗೆ ಲಭ್ಯವಾದ ಮಾಹಿತಿಯ ಪ್ರಕಾರ ಕಳೆದ ಮೂರು ವಾರ ಗಳಲ್ಲಿ ಆರು ಮಂದಿ ರೈತರು ಪ್ರಾಣ ಕಳೆದು ಕೊಂಡಿದ್ದಾರೆ. ಇದು ಸರಕಾರ ಕೂಡ ಒಪ್ಪಿರುವ ಅಂಶ. ಆದರೆ ಈ ಸಂಖ್ಯೆ ಇನ್ನೂ ಹೆಚ್ಚಿರ ಬಹುದು ಎಂಬುದು ಒಂದು ಅಂದಾಜು.

ಬೆಳೆ ನಷ್ಟಕ್ಕೆ ಪರಿಹಾರ ಕೇಳಿದರೆ..!

ಕಳೆದ ವರ್ಷ ಡಿಸೆಂಬರ್‌ನಲ್ಲಿ, ಅಂದರೆ ಕೇವಲ ನಾಲ್ಕು ತಿಂಗಳ ಹಿಂದೆ ಹತ್ತಿ ಬೆಳೆ ಕಟಾವಿಗೆ ಬಂದ ವೇಳೆಯಲ್ಲಿ ಅಕಾಲಿಕವಾಗಿ ಬಿದ್ದ ಮಳೆಯಿಂದಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಯಿತು. ಹತ್ತಿಬೆಳೆ ಪೂರ್ತಿ ನಷ್ಟವಾಯಿತು. ರೈತ ಸಮುದಾಯ ಸಂಕಷ್ಟಕ್ಕೆ ಸಿಲುಕಿತು.

ಫಸಲಿಗಾದ ನಷ್ಟಕ್ಕೆ ಪರಿಹಾರ ಕೊಡುವಂತೆ ರೈತರು ಮಾಡಿದ ಮೊರೆ ಶಿವಸೇನೆ-ಬಿಜೆಪಿ ಮೈತ್ರಿಕೂಟ ಸರಕಾರವನ್ನು ತಲುಪಲಿಲ್ಲ.

ಬಹುಶಃ, ನಮ್ಮನ್ನು ಗುಂಡು ಹಾರಿಸಿ ಸಾಯಿಸಿ ಎಂದು ರೈತರು ಹೇಳಿದರೆಂದು ಆ ಸರಕಾರಕ್ಕೆ ಕೇಳಿಸಿರಬೇಕು. ನ್ಯಾಯ ಕೇಳಿ ಚಳುವಳಿ ಮಾರ್ಗ ಹಿಡಿದ ರೈತ ಬಂಧುಗಳ ಮೇಲೆ ಸಂಘಪರಿವಾರದ ಈ ಸರಕಾರ ಹಾರಿ ಸಿದ ಗುಂಡಿಗೆ ಒಂಭತ್ತು ರೈತರು ಬಲಿಯಾದರು.

ಆ ನಂತರ ಬೆಳೆ ನಷ್ಟಕ್ಕೆಂದು ಸರಕಾರ ನಿಗದಿಪಡಿಸಿ ಬಿಡುಗಡೆ ಮಾಡಿದ ಪರಿಹಾರ ಮೊತ್ತ ಕೂಡ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತಿತ್ತು.

ಡಿಸೆಂಬರ್‌ನಲ್ಲಿ ಬಿದ್ದ ಅಕಾಲಿಕ ಮಳೆ ಯಿಂದ ಆದ ಗಾಯ ಇನ್ನೂ ಹಸಿಯಾಗಿರು ವಂತೆಯೇ ಗಾಯದ ಮೇಲೆ ಬರೆ ಎಳೆದಂತೆ ಮಾರ್ಚ್ ತಿಂಗಳಲ್ಲಿ ಬಿರುಗಾಳಿ ಬೀಸಿ ರೈತರಿಗೆ ಇನ್ನಷ್ಟು ಆಘಾತವಾಯಿತು. ಈ ಪ್ರಕೃತಿ ವಿಕೋಪದಿಂದಾಗಿ ಸೂರ್ಯಕಾಂತಿ, ದವಸ ಧಾನ್ಯ ಮತ್ತು ಹತ್ತಿ ಫಸಲು ವ್ಯಾಪಕವಾಗಿ ಹಾನಿಯಾಯಿತು. ರೈತರ ಜೀವನಕ್ಕೆ ದಿಕ್ಕೇ ತೋಚದಂತಾಯಿತು.

ಸಾಲಸೋಲ ಮಾಡಿ ಬೆಳೆ ಬೆಳೆಸಿದ ರೈತ ಕುಟುಂಬಗಳು ಬೆಳೆ ನಷ್ಟದಿಂದಾಗಿ ಅತ್ತ ಜೀವನ ವನ್ನು ನಿರ್ವಹಿಸಲಾಗದೇ ಇತ್ತ ಸಾಲ ಮರು ಪಾವತಿಯನ್ನು ಮಾಡಲಾಗದೆ ವಿಲವಿಲ ಒದ್ದಾಡತೊಡಗಿದೆ. ದುಬಾರಿ ಬಡ್ಡಿಗೆ ಹಣ ಕೊಡುವ ಮಾರ್ವಾಡಿಗಳ ಬಲೆಗೆ ಬೀಳ ತೊಡಗಿವೆ. ಒಟ್ಟಾರೆಯಾಗಿ ಸಾಲದ ಹೊರೆ ಯನ್ನು ಹೊರಲಾಗದೆ ಅನೇಕ ರೈತರು ಆತ್ಮ ಹತ್ಯೆಯ ಹಾದಿಯನ್ನು ಹಿಡಿಯತೊಡಗಿದ್ದಾರೆ.

ಇದರಲ್ಲಿ ಆರ್ಥಿಕ ಉದಾರೀಕರಣ ಮತ್ತು ಜಾಗತೀಕರಣದ ಪಾಲು ಸಾಕಷ್ಟಿದೆ ಎನ್ನುವುದು ಸ್ಪಷ್ಟವಾಗಿದೆ.

ದೇಶದ ಬೆನ್ನೆಲುಬನ್ನು ಉಳಿಸಿಕೊಳ್ಳಲು ಪ್ರಬಲವಾದ ಹೋರಾಟ ಮುಂದಿನ ದಿನಗಳಲ್ಲಿ ರೂಪುಗೊಳ್ಳಬೇಕಾದುದು ಅತ್ಯಗತ್ಯ. ಇಲ್ಲದಿದ್ದರೆ ಈ ಕಳವಳಕಾರಿ ಪ್ರವೃತ್ತಿ ಬೇರೆ ಕ್ಷೇತ್ರಗಳಿಗೂ ವಿಸ್ತರಿಸುವ ಅಪಾಯವನ್ನು ತಳ್ಳಿ ಹಾಕಲಾಗದು.

ಪ.ಬಂಗಾಳ ಎಡರಂಗ ಸರ್ಕಾರದ ಬೇಡಿಕೆ ಪಟ್ಟಿ

ವಿಶೇಷವಾಗಿ ರಾಜ್ಯಗಳಿಗೆ ಆರ್ಥಿಕ ಅಧಿಕಾರ ನೀಡಿಕೆಗೆ ಸಂಬಂಧಿಸಿದ ವಿಚಾರಗಳಿಗೂ ಸೇರಿದಂತೆ 21 ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸುವ ಮನವಿ ಪತ್ರವೊಂದನ್ನು ಪಶ್ಚಿಮಬಂಗಾಳದ ಎಡರಂಗ ಸರಕಾರ ಕೇಂದ್ರ ಸರಕಾರಕ್ಕೆ ಸಲ್ಲಿಸಿದೆ.

ಬೇಡಿಕೆ ಪತ್ರದ ಪ್ರಮುಖ ಅಂಶಗಳು ಹೀಗಿವೆ:

1. ರಾಜ್ಯಗಳಿಂದ ಸಂಗ್ರಹಿಸಲಾದ ಕೇಂದ್ರೀಯ ತೆರಿಗೆಗಳಲ್ಲಿ ಶೇಕಡ 33.3 ನ್ನು ರಾಜ್ಯಗಳಿಗೆ ನೀಡಬೇಕು. ಮುಂದೆ ಈ ಮೊತ್ತವನ್ನು ಹೆಚ್ಚಿಸಬೇಕು. 2. ಅಕ್ರಮವಾಗಿ ಇಟ್ಟುಕೊಳ್ಳಲಾಗಿರುವ ಕಪ್ಪು ಹಣವನ್ನು ರಾಜ್ಯಗಳ ನೆರವಿನಿಂದ ಕೇಂದ್ರ ಸರ್ಕಾರ ಆದಷ್ಟು ಹೆಚ್ಚಿಗೆ ಹೊರಗೆಳೆಯಬೇಕು. ಅದರ ಒಂದು ಭಾಗವನ್ನು ರಾಜ್ಯಗಳಿಗೆ ನೀಡಬೇಕು. 3. ಕಲ್ಲಿದ್ದಲು ಮೇಲಿನ ಹೆಚ್ಚುವರಿ ರಾಯಲ್ಟಿಯನ್ನು ಪಶ್ಚಿಮ ಬಂಗಾಳಕ್ಕೆ ನಿಗದಿಪಡಿಸಬೇಕು. 4. ಕನ್‌ಸೈನ್‌ಮೆಂಟ್ ತೆರಿಗೆಯ ಒಂದು ಪಾಲು ರಾಜ್ಯಗಳಿಗೂ ಸಲ್ಲಬೇಕು. 5. 'ಸೇವಾ ತೆರಿಗೆ' ಸಂಗ್ರಹಿಸುವ ಅಧಿಕಾರ ಪ್ರತಿರಾಜ್ಯಕ್ಕೆ ಇರಬೇಕು. 6. ಆಯಾ ರಾಜ್ಯಗಳ ಉತ್ಪಾದನೆಗಳ ರಫ್ತಿನಿಂದ ಬರುವ ವಿದೇಶಿ ವಿನಿಮಯದಲ್ಲಿ ಒಂದು ಪಾಲನ್ನು ಸಂಗ್ರಹಿಸುವ ಅಧಿಕಾರ ಪ್ರತಿ ರಾಜ್ಯಕ್ಕಿರಬೇಕು. 7. ರಾಜ್ಯ ಪಟ್ಟಿಯಲ್ಲಿರುವ ಯೋಜನೆಗಳನ್ನು ಹಣಕಾಸು ನಿಯಂತ್ರಣ ದೊಂದಿಗೆ ರಾಜ್ಯಗಳಿಗೆ ಹಸ್ತಾಂತರಿಸಬೇಕು. 8. ಕೇಂದ್ರೀಯ ಯೋಜನಾ ನೆರವಿನ ಸಾಲದ ಪ್ರಮಾಣವನ್ನು ಸೇ 70 ರಿಂದ 50ಕ್ಕೆ ಇಳಿಸಬೇಕು. 9. ಸಣ್ಣ ಉಳಿತಾಯಗಳಲ್ಲಿ ನಿವ್ವಳ ಗಳಿಕೆ ಸಾಧಿಸಿದ ರಾಜ್ಯಗಳಲ್ಲಿ ಅವುಗಳನ್ನು ಆಯಾ ರಾಜ್ಯಕ್ಕೆ ನೆರವಿನ ರೂಪದಲ್ಲಿ ಕೊಡಬೇಕೇ ಹೊರತು ಸಾಲವಾಗಿ ಅಲ್ಲ. 10. ಅಂತರರಾಜ್ಯ ಮಂಡಳಿ ಮಟ್ಟದಲ್ಲಿ ಅಂಗೀಕಾರವಾಗಿರುವ ಸರ್ಕಾರಿಯಾ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು. 11. ಪಶ್ಚಿಮ ಬಂಗಾಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕುಗಳ ಸಾಲ-ಠೇವಣಿ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದ ಸಾಲವನ್ನು ಏರಿಸಬೇಕು 12. ರಾಜ್ಯದಲ್ಲಿನ ಮುಚ್ಚಿರುವ ಕೈಗಾರಿಕೆ ಘಟಕಗಳನ್ನು ತೆರೆಯಲು ಕಾಲ ಮಿತಿಯ ಕ್ರಮಗಳನ್ನು ಕೇಂದ್ರ ಸರಕಾರ ಕೈಗೊಳ್ಳಬೇಕು, ರೋಗಗ್ರಸ್ತ ಉದ್ದಿಮೆಗಳ ಪುನರುಜ್ಜೀವನಕ್ಕೆ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥ ಕೈಗಾರಿಕೋದ್ಯಮಿಗಳನ್ನು ಶಿಕ್ಷಿಸಬೇಕು. 13. ರಾಜ್ಯಗಳ ನಿಕಟ ಸಹಕಾರದೊಂದಿಗೆ ನಿರುದ್ಯೋಗ ಸಮಸ್ಯೆಯನ್ನು ಎದುರಿಸಲು ಕೇಂದ್ರ ಸರಕಾರ ಮುಂದಾಗಬೇಕು, 14. ರಸ್ತೆ, ಬಂದರು, ವಿಮಾನ ನಿಲ್ದಾಣಗಳು, ರೈಲ್ವೆ, ಮೆಟ್ರೋ ಮೊದಲಾದ ಕೇಂದ್ರ ಪಟ್ಟಿಯ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಬೇಕು 15. ನಿರಾಶ್ರಿತ ಪುನರ್ ವಸತಿಯಂಥ ರಾಷ್ಟ್ರೀಯ ಮಹತ್ವದ, ಆದರೆ ರಾಜ್ಯಗಳ ಮೇಲೆ ಪರಿಣಾಮ ಬೀರುವ ಯೋಜನೆಗಳಿಗೆ ಹೆಚ್ಚಿನ ನಿಧಿಯನ್ನು ಒದಗಿಸಬೇಕು. 16. ಗಂಗಾ ನದಿಯ ತವೆತವನ್ನು ತಡೆಯಲು, ಪ್ರವಾಹ ನಿಯಂತ್ರಣ ಕ್ರಮಗಳಿಗೆ ಹಾಗೂ ದೊಡ್ಡ ನಿರಾವರಿ ಯೋಜನೆಗಳಿಗೆ ಕೇಂದ್ರದಿಂದ ಹೆಚ್ಚು ಹಣಕಾಸಿನ ಅಗತ್ಯವಿದೆ. 17. ಪಶ್ಚಿಮ ಬಂಗಾಳದ ಉತ್ತರ ಹಾಗೂ ಪಶ್ಚಿಮ ಭಾಗಗಳ ಅಭಿವೃದ್ಧಿಗೆ ಕೇಂದ್ರದ ಪಾಲ್ಗೊಳ್ಳುವಿಕೆ ತೀರಾ ಅತ್ಯಗತ್ಯ. 18. ಕಲ್ಕತ್ತಕ್ಕೆ ಎ-1 ನಗರದ ಸ್ಥಾನಮಾನ ನೀಡಬೇಕು. 'ಮೆಗಾಸಿಟಿ ನೆರವು' ಪ್ರಮಾಣವನ್ನು ಕನಿಷ್ಟ ಶೇ 50 ರಷ್ಟು ಹೆಚ್ಚಿಸಬೇಕು. 19. ಸಾರ್ವಜನಿಕ ವಿತರಣೆ ವ್ಯವಸ್ಥೆ ಮೂಲಕ ಅವಶ್ಯಕ ಸಾಮಾಗ್ರಿಗಳ ವಿತರಣೆಗಾಗಿ ಹೆಚ್ಚಿನ ಕೇಂದ್ರೀಯ ಸಬ್ಸಿಡಿಯ ಅವಶ್ಯಕತೆ. 20. ಕೇಂದ್ರ ವೇತನ ಆಯೋಗದ ಶಿಫಾರಸ್ಸಿನ ನ್ಯಾಯ ವೇತನದಲ್ಲಿ ಉಂಟಾಗುವ ಹೆಚ್ಚಳದ ಪೈಕಿ ಶೇ 50 ನ್ನು ಕೇಂದ್ರ ಸರಕಾರ ಭರಿಸಬೇಕು. 21. ಹನ್ನೊಂದನೇ ವೇತನ ಆಯೋಗದ ವಿಚಾರದಲ್ಲಿ ಕೇಂದ್ರ ಸರಕಾರ ರಾಜ್ಯಗಳೊಂದಿಗೆ ಸಮಾಲೋಚಿಸಬೇಕು.

ಬಿಮಲ್ ಸಿನ್ಹಾ: ಧೀರ ಹೋರಾಟಗಾರ

ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ



ತ್ರಿಪುರಾ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು ಹಾಗೂ ಎಡರಂಗ ಸರಕಾರದ ಆರೋಗ್ಯ ಮಂತ್ರಿಗಳೂ ಆಗಿದ್ದ ಕಾಮ್ರೇಡ್ ಬಿಮಲ್‌ಸಿನ್ಹಾರವರ ಹತ್ಯೆಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತೀವ್ರ ಆಘಾತ ವ್ಯಕ್ತಪಡಿಸಿದೆ. ಈ ರಾಜ್ಯವನ್ನು ಕಳೆದ ಕೆಲವು ವರ್ಷಗಳಿಂದ ತಟ್ಟಿರುವ ಉಗ್ರಗಾಮಿ ಹಿಂಸಾಚಾರವನ್ನು ಧೈರ್ಯದಿಂದ ಎದುರಿಸಿ ಹೋರಾಡುತ್ತಿದ್ದ ಒಬ್ಬ ಪ್ರಮುಖ ಮುಂದಾಳು ಅವರು ಎಂದು ಪೊಲಿಬ್ಯೂರೋ ಹೇಳಿದೆ. 1988 ರಿಂದ 1993 ರ ನಡುವೆ ಕಾಂಗ್ರೆಸ್-ಟಿಯುಜೆಎಸ್ ಸರಕಾರ ಹರಿಯಬಿಟ್ಟ ಭಯೋತ್ಪಾದನೆಯನ್ನು ಅವರು ಧೈರ್ಯದಿಂದ ಎದುರಿಸಿದವರು. ಬಿಷ್ಣುಪ್ರಿಯ ಮಣಿಪುರಿಗಳೆಂಬ ಸಣ್ಣ ಕೋಮಿನಿಂದ ಬಂದ ಇವರು ಎಲ್ಲಾ ಜನವಿಭಾಗಗಳ ಐಕ್ಯತೆಯ ಒಬ್ಬ ಧೀರ ಹೋರಾಟಗಾರ, ದುಡಿಯುವ ಜನಗಳ ಧ್ಯೇಯಸಾಧನೆಗಾಗಿ ನಿರಂತರ ಶ್ರಮಿಸಿದವರು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ತ್ರಿಪುರಾದ ಎಡ ಆಂದೋಲನ ಮತ್ತು ಸಿಪಿಐ(ಎಂ) ದೊಡ್ಡ ನಷ್ಟ ಅನುಭವಿಸಿದೆ ಎಂದಿರುವ ಪೊಲಿಟ್‌ಬ್ಯೂರೋ ಅವರ ಪತ್ನಿ ಮಕ್ಕಳಿಗೆ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರ ತಕ್ಷಣ ಕ್ರಮ ಕೈಗೊಂಡು ರಾಜ್ಯಕ್ಕೆ ರಾಜ್ಯಕ್ಕೆ ಹೆಚ್ಚಿನ ಕೇಂದ್ರ ಅರೆಸೈನಿಕ ಪಡೆಗಳನ್ನು ಕಳಿಸುವುದು ಅಗತ್ಯ ಎಂದಿರುವ ಪೊಲಿಟ್‌ಬ್ಯೂರೋ ಚುನಾವಣೆಗಳ ಸಮಯದಲ್ಲಿ ದೇಶದ ಇತರೆಡೆಗೆ ಬೇಕಾಗುತ್ತದೆಂದು ಹಿಂತೆಗೆದುಕೊಂಡ ಪಡೆಗಳನ್ನು ಮತ್ತೆ ಕಳಿಸಬೇಕು ಎಂದು ಹಲವು ಬಾರಿ ಮನವಿ ಮಾಡಿಕೊಂಡರೂ ಅವನ್ನಿನ್ನೂ ಕಳಿಸಿಲ್ಲ ಎಂದಿದೆ. 800 ಕಿ.ಮಿ. ದೀರ್ಘವಾದ ಅಂತರ್ರಾಷ್ಟ್ರೀಯ ಗಡಿ ಹೊಂದಿರುವ ತ್ರಿಪುರಾಕ್ಕೆ ಉದ್ದನೆಯ ಹಾಗೂ ಕಷ್ಟಕರ ಗಡಿ ಪ್ರದೇಶವನ್ನು ಬಳಸಿಕೊಳ್ಳುತ್ತಿರುವ ಉಗ್ರಗಾಮಿ ಪೀಡೆಯನ್ನು ತಡೆಯಲು ಕೇಂದ್ರದ ನಿರಂತರ ಸಹಾಯ ಅಗತ್ಯ ಎಂದು ಸಿಪಿಐ(ಎಂ) ನೆನಪಿಸಿದೆ.

ಜೈನ್ ಆಯೋಗದ ಅಂತಿಮ ವರದಿ

ಕಾಂಗ್ರೆಸ್ಸಿನ ಬೇಜವಾಬ್ದಾರಿತನ ಬಯಲು

ರಾಜೀವಗಾಂಧಿಯವರ ಹತ್ಯೆಯ ಸನ್ನಿವೇಶಗಳ ಬಗ್ಗೆ ತನಿಖೆ ನಡೆಸಿರುವ ಜೈನ್ ಆಯೋಗದ ಅಂತಿಮ ವರದಿ ಬಂದಿದ್ದು ಈ ಹತ್ಯೆಯ ಪಿತೂರಿಯಲ್ಲಿ ಡಿಎಂಕೆಯ ಪಾತ್ರವಿದೆಯೆಂಬ ಬಗ್ಗೆ ತೀರ್ಮಾನಕ್ಕೆ ಬರುವಂತಹ ಸಾಕ್ಷ್ಯಗಳೇನೂ ಇಲ್ಲ ಎಂದು ಅದು ಸ್ಪಷ್ಟವಾಗಿ ಸೂಚಿಸಿದೆಯೆಂದು ವರದಿಯಾಗಿದೆ.

ಜೈನ್ ಆಯೋಗದ ಮಧ್ಯಂತರ ವರದಿ ಹಾಗೂ ಅದರಲ್ಲಿ ಡಿಎಂಕೆಯ ವಿರುದ್ಧ ಟಿಪ್ಪಣಿಗಳನ್ನು ಕಾಂಗ್ರೆಸ್ ಪಕ್ಷ ಸಂಯುಕ್ತ ರಂಗಕ್ಕೆ ಬೆಂಬಲ ಹಿಂತೆಗೆದುಕೊಳ್ಳಲು ನೆವವಾಗಿ ಬಳಸಿತ್ತು. ಅಂತಿಮ ವರದಿ ಬರುವ ವರಗೆ ಕಾಯಿರಿ ಎಂಬ ವಿವೇಚನಾ ಪೂರ್ಣ ಸಲಹೆಯನ್ನು ಅದು ಕಿವಿಗೆ ಹಾಕಿಕೊಳ್ಳಲಿಲ್ಲ. ಅದರ ಬೇಜವಾಬ್ದಾರಿ ಹಾಗೂ ವಿವೇಚನಾರಹಿತ ನಿಲುವಿನಿಂದಾಗಿ ಮಧ್ಯಂತರ ಚುನಾವಣೆಗಳು ನಡೆದು ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ರಚಿಸುವಂತಾಗಿದೆ ಎಂಬುದೀಗ ಸ್ಪಷ್ಟ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ದೇಶದೊಳಗೆ

ವಿಶ್ವ

ಅಹವಾಲು ಆಲಿಕೆ 'ಜನಪರ' ಪ್ರಧಾನಿಯ ಶೈಲಿ!

ಬಡವರ ಓಟಿನಿಂದ ಇವರು ಪ್ರಧಾನಿಯಾದರು, ಈಗ ನಮ್ಮೊಂದಿಗೆ ಮಾತಾಡಲೂ ಇವರಿಗೆ ವ್ಯವಧಾನವಿಲ್ಲ. 'ನಾವು ಇವರ ಭಾಷಣ ಕೇಳಲು ಬಂದಿಲ್ಲ. ನಾವು ಏನು ಹೇಳುತ್ತೇವೆನ್ನುವುದನ್ನು ಅವರು ಕೇಳಬೇಕು. ಓಟು ಕೇಳಲು ಅವರು ನಮ್ಮ ಬಳಿ ಬಂದಾಗ ನಮ್ಮ ಸಮಸ್ಯೆ ಆಲಿಸುವುದಾಗಿ ಆಶ್ವಾಸನೆಗಳನ್ನು ನೀಡಿದ್ದರು.

'ಹಿಂದೆಲ್ಲಾ ಭೇಟಿಯಾದರೂ ಸಿಗುತ್ತಿತ್ತು. ಈ ಬಾರಿ ಅದೂ ಇಲ್ಲ'

.... ಇವು ಪ್ರಧಾನಿ ಎ.ಬಿ.ವಾಜಪೇಯಿ ಅವರ ನಿವಾಸದ ಬಳಿ ಏಪ್ರಿಲ್ 7 ರಂದು ಕೇಳಿ ಬಂದ ಕೆಲವು ಮಾತುಗಳಿವು.

ಪ್ರಧಾನಿಯಾಗಿ ಸಾರ್ವಜನಿಕರಿಗೆ ಭೇಟಿ ಕೊಟ್ಟು ಅವರ ಅಹವಾಲುಗಳನ್ನು ಕೇಳುವ ವಾಜಪೇಯಿಯವರ ಮೊದಲ ಕಾರ್ಯಕ್ರಮ ಅದಾಗಿತ್ತು. ಆದರೆ ಈ ಮೇಲೆ ಉದ್ದೇಶಿಸಿದ ಮಾತುಗಳು ಅಲ್ಲೇನು ನಡೆಯಿತು ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ. ಜನರು ಛೀ ಥೂ ಎಂದು ಉಗಿಯಲಿಲ್ಲ ಅಷ್ಟೇ.

ಪ್ರಧಾನಿ ದರ್ಶನಕ್ಕಾಗಿ ಗಂಟೆಗಟ್ಟಲೆ ಕಾದು 'ಅಟಲ್ ಬಿಹಾರಿ ಜಿಂದಾಬಾದ್' ಜೈ ಶ್ರೀರಾಮ್' ಎಂದು ಘೋಷಣೆ ಹಾಕಿದ್ದ ಜನರೇ ನಂತರ ಅಟಲ್ ಬಿಹಾರಿ ಮುರ್ದಾಬಾದ್' ಎಂಬ ಘೋಷಣೆ ಹಾಕಿದರೆಂದರೆ ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತು, ಜನರ ಸಹನೆಯ ಕಟ್ಟೆ ಹೇಗೆ ಒಡೆದಿತ್ತು ಎನ್ನುವುದನ್ನು ಸ್ಪಷ್ಟ ಪಡಿಸುತ್ತದೆ.

ತಮ್ಮ ಮೊದಲ 'ಜನತಾದರ್ಶನ' ಕ್ಕೆ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಅನಿವಾರ್ಯ ಕಾರ್ಯಗಳಿಂದ ತಡವಾಗಿ ಬಂದು ಬಲುಬೇಗ ನಿರ್ಗಮಿಸಬೇಕಾಯಿತು.

ಸಫದರ್ ಜಂಗ್‌ನ ಪ್ರಧಾನಿಯವರ ಮನೆಯಲ್ಲಿ ವಾಜಪೇಯಿ ಅವರ ಭೇಟಿಗಾಗಿ ಕಾದಿದ್ದ ಮೂರು ನೂರಕ್ಕೂ ಹೆಚ್ಚು ಜನರಿಗೆ ನಿರಾಸೆ ಕಾದಿತ್ತು.

ತಮ್ಮ ಅಹವಾಲುಗಳನ್ನು ಖುದ್ದು ಪ್ರಧಾನಿಯ ಬಳಿ ಹೇಳಿ ಕೊಳ್ಳಬಹುದೆಂದು ಬಂದ ಅವರಿಗೆ ಅಟಲ್ ಸಮಯದ ಅಭಾವದಿಂದ ಹೆಚ್ಚುಹೊತ್ತು ಸಂದರ್ಶನ ನೀಡಲಾಗಲಿಲ್ಲ. ಆದರೆ ಎಲ್ಲರ ಅರ್ಜಿಗಳನ್ನು ಸ್ವೀಕರಿಸಿ, ಸಮಸ್ಯೆಗಳತ್ತ ಸೂಕ್ತ ಗಮನ ನೀಡುವಂತೆ ಅವರು ತಮ್ಮ ಸಹಾಯಕರಿಗೆ ಆದೇಶ ನೀಡಿದರು.

ಶಿಶುಗಳ ಸಾವು ಹಾಗೂ ಗರ್ಭಿಣಿಯರ ಸಾವಿನ ಸಂಖ್ಯೆ ಕಡಿಮೆ ಮಾಡುವ ಅಗತ್ಯದ ಕುರಿತು ಜನತಾ ದರ್ಶನದಲ್ಲಿ ಪ್ರಧಾನಿ ಮಾತನಾಡಿದರು.

ತಮ್ಮ ಕೆಲಸದ ಸ್ಥಳದಲ್ಲಿ ಕುರುಡರಿಗಾಗುತ್ತಿರುವ ಅನ್ಯಾಯದ ಬಗ್ಗೆ ಗಮನ ಸೆಳೆಯಲು ಬಂದಿದ್ದ ಓಂಪ್ರಕಾಶ್ ಚೌಹಾಣ್ ಪ್ರಧಾನಿಯವರನ್ನು ಭೇಟಿಯಾಗಲು ಸಾಧ್ಯವಿಲ್ಲವೆಂದು ತಿಳಿದಾಗ ತುಂಬ ಬೇಸರಗೊಂಡರು. ಹತ್ತಿರದಲ್ಲಿಯೇ ಇದ್ದ ಕಬ್ಬಿಣದ ತಡೆಗಳನ್ನೇರಿ ಸರ್ಕಾರದ ವಿರುದ್ಧ ಘೋಷಣೆ ಹಾಕತೊಡಗಿದರು.

ಉತ್ತರ ಪ್ರದೇಶದ ಸುಲ್ತಾನಪುರದಿಂದ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ತಿಳಿಸಲು ಬಂದಿದ್ದ ಗೋಪಾಲ್ ಪಾಂಡೆ, ಓಂಪ್ರಕಾಶ್ ಜೊತೆಗೂಡಿ ಘೋಷಣೆ ಹಾಕಿದರು.

ಜನಪರ ಪ್ರಧಾನಿ ಎಂದು ಹಾಕಲಾಗುವ ಬೊಂಬ್ಡಿ ಎಷ್ಟು ಟೊಳ್ಳು ಎಂಬುದಕ್ಕೆ ಜನತಾದರ್ಬಾರಿನ ಮೊದಲ ದಿನದ 'ಕಲಾಪಗಳೇ' ಸಾಕ್ಷಿಯಾಗಿವೆ.

ಲೋಕಸಂಚಾರ

ರಶ್ಯಾ ಸರಕಾರ ವಜಾ-ಯೆಲ್ಸಿನ್‌ರ ಹೊಸ ಸರಕಾರದ ಜತೆ ಪಾರ್ಲಿಮೆಂಟು ವಿವಾದ

ರಶ್ಯಾದ ಅಧ್ಯಕ್ಷ ಯೆಲ್ಸಿನ್ ತಮ್ಮ ಇಡೀ ಸರ್ಕಾರವನ್ನು ವಜಾ ಮಾಡುವ ಮೂಲಕ, ಇನ್ನೊಮ್ಮೆ ರಶ್ಯಾದ ಮಾಫಿಯಾ ಬಂಡವಾಳ ಶಾಹಿಯ ರಾಜಕೀಯ ಬಿಕ್ಕಟ್ಟಿನ ಆಳವನ್ನು ತೋರಿಸಿಕೊಟ್ಟಿದ್ದಾರೆ. ಈ ಹಠಾತ್ತಾದ ಯೆಲ್ಸಿನ್ ನಿರ್ಧಾರದ ಪ್ರಕಾರ ಪ್ರಧಾನ ಮಂತ್ರಿ ಚೆರ್ನೊಮಿರ್ಡಿನ್‌ರ ಇಡೀ ಸಂಪುಟವನ್ನು ವಜಾ ಮಾಡಿದ್ದಾರೆ. ಮಾತ್ರವಲ್ಲ, ಕಿರಿಯೆಂಡೊ ಎಂಬ ಕೆಲವು ವರ್ಷಗಳ ಆಡಳಿತ ಅನುಭವವಿರುವ ವ್ಯಕ್ತಿಯನ್ನು ಪ್ರಧಾನ ಮಂತ್ರಿಯಾಗಿ ನೇಮಿಸಿದ್ದಾರೆ. ಹೊಸ ಮಂತ್ರಿಮಂಡಳವನ್ನು ಹೊಸ ಪ್ರಧಾನಿ ರಚಿಸಬೇಕು. ಹಾಗೂ ಇಡೀ ಸಂಪುಟಕ್ಕೆ ಡೊಮೊ(ರಶ್ಯನ್ ಪಾರ್ಲಿಮೆಂಟು)ದ ಅಂಗೀಕಾರ ಪಡೆಯಬೇಕು. ಎಡ ಪ್ರಜಾಸತ್ತಾತ್ಮ ಪಕ್ಷಗಳ ಬಹುಮತ ಇರುವ ಡೊಮಾದ ಕಮ್ಯುನಿಸ್ಟ್ ನಾಯಕರು ಹೊಸ ಪ್ರಧಾನಿ ಹಾಗೂ ಮಂತ್ರಿಮಂಡಳವನ್ನು ಅಂಗೀಕರಿಸಿಸುವುದಿಲ್ಲವೆಂದು ಹೇಳಿದ್ದರು. ಆದರೆ ರಶ್ಯನ್ ಅಧಿಕಾರಶಾಹಿ ಸಂವಿಧಾನದಲ್ಲಿ ಡೊಮಾಕ್ಕೆ ಹೆಚ್ಚಿನ ಅಧಿಕಾರವಿಲ್ಲ, ಮೂರು ಬಾರಿ ಅಧ್ಯಕ್ಷರು ಸೂಚಿಸಿದ ಮಂತ್ರಿಮಂಡಳ ತಿರಸ್ಕರಿಸಿದರೆ ಪಾರ್ಲಿಮೆಂಟನ್ನು ವಿಸರ್ಜಿಸುವ ಅಧಿಕಾರ ಅಧ್ಯಕ್ಷರಿಗಿದೆ, ಅಧ್ಯಕ್ಷ ಯೆಲ್ಸಿನ್ ಈ ಅಧಿಕಾರ ಪ್ರಯೋಗಿಸುವುದಾಗಿ ಬೆದರಿಸಿದ್ದರು. ಆದರೆ ಈಗ ಅಧ್ಯಕ್ಷರು ಹಾಗೂ ಪಾರ್ಲಿಮೆಂಟಿನ ನಾಯಕರ ನಡುವೆ ಮಾತುಕತೆಗೆ ಒಪ್ಪಂದ ಆಗಿದೆ. ಆದರೆ ಸರಕಾರಕ್ಕೆ ನಿರ್ಣಾಯಕ ಅಂಗೀಕಾರ ಇನ್ನೂ ದೊರೆತಿಲ್ಲ.

ಯೆಲ್ಸಿನ್‌ರ ಹಠಾತ್ ಕ್ರಮಕ್ಕೆ, ಚೆರ್ನೋಮಿರ್ಡಿನ್ ಸರ್ಕಾರ ಕಳೆದ ಹಲವು ತಿಂಗಳುಗಳಿಂದ ಕಾರ್ಮಿಕರ ವೇತನ ಬಾಕಿ ನೀಡುವ ಆಶ್ವಾಸನೆ ಈಡೇರಿಸದ್ದು ಕಾರಣವೆಂದು ಹೇಳಲಾಗಿದೆ. ಆದರೆ ನಿಜವಾದ ಕಾರಣ ರಶ್ಯನ್ ಜನತೆ ಮಾಫಿಯಾ ಬಂಡವಾಳಶಾಹಿ ಪದ್ಧತಿಯ ಬಗ್ಗೆ ರೋಸಿ ಹೋಗಿದ್ದು, ಆ ಕೋಪವನ್ನು ಚೆರ್ನೊಮಿರ್ಡಿನ್ ಸರ್ಕಾರದ ಮೇಲೆ ತಿರುಗಿಸುವ ತಂತ್ರ ಇದು. ಇಡೀ ವ್ಯವಸ್ಥೆಯ ವೈಫಲ್ಯವನ್ನು, ಕೆಲವು ಮಂತ್ರಿಗಳ ವೈಫಲ್ಯ ಎಂದು ತೋರಿಸುವ ತಂತ್ರ. ಆದರೆ ಇಂತಹ ತಂತ್ರಗಳು ಸಫಲವಾಗುವ ಸ್ಥಿತಿ ದಾಟಿ ರಶ್ಯನ್ ರಾಜಕೀಯ ಬೆಳವಣಿಗೆ ಮಹತ್ವದ ತಿರುವು ಪಡೆದಿದೆ.

ನೇಪಾಳಿ ಸರ್ಕಾರ ಪುನಃ ಅಭದ್ರ

ಕಮ್ಯುನಿಸ್ಟರನ್ನು ಸರ್ಕಾರದಿಂದ ಹೊರಗಿಡಲು ಸಿದ್ಧವಾದ ಅಪವಿತ್ರ ಮೈತ್ರಿ ಮೇಲೆ ಆಧಾರಿತ ನೇಪಾಳಿ ಕಾಂಗ್ರೆಸ್ - ರಾಷ್ಟ್ರೀಯ ಪ್ರಜಾತಂತ್ರ ಪಾರ್ಟಿ ಸಂಯುಕ್ತ ಸರ್ಕಾರ ಅಭದ್ರವಾಗುವ ಸೂಚನೆಗಳಿವೆ. ಎರಡು ಪಾರ್ಟಿಗಳ ನಡುವೆ ತೀವ್ರ ವಿರಸ-ಭಿನ್ನಾಭಿಪ್ರಾಯಗಳು ಉಂಟಾಗಿವೆ. ರಾಷ್ಟ್ರೀಯ ಪ್ರಜಾತಂತ್ರ ಪಾರ್ಟಿಯ ಏಕಪಕ್ಷೀಯ ಸರ್ಕಾರದ ವಿರುದ್ಧ ನೇಪಾಳಿ ಕಾಂಗ್ರೆಸ್-ಕಮ್ಯುನಿಸ್ಟ್ ಪಕ್ಷಗಳು ಜಂಟಿ ಹೋರಾಟ ನಡೆಸಿ, ಬಹುಪಕ್ಷೀಯ ಪಾರ್ಲಿಮೆಂಟರಿ ಪ್ರಜಾಸತ್ತೆ ವ್ಯವಸ್ಥೆ ಜಾರಿಗೆ ಬಂದಿದ್ದು, ಅಂತರರಾಷ್ಟ್ರೀಯ ಪ್ರಜಾತಂತ್ರ ಪಾರ್ಟಿ ಜತೆ, ನೇಪಾಳಿ ಕಾಂಗ್ರೆಸ್ ಮೈತ್ರಿ ಬೆಳೆಸಿ ಸರ್ಕಾರ ರಚಿಸಿದೆ. ಮಾತ್ರವಲ್ಲ, ಪ್ರಧಾನ ಮಂತ್ರಿ ಪದವಿಯನ್ನು ಆ ಪಾರ್ಟಿಯ ಸೂರ್ಯ ಬಹದ್ದೂರ್ ಥಾಪಗೆ ಬಿಟ್ಟು ಕೊಟ್ಟಿತ್ತು. ಆದರೆ ಏಪ್ರಿಲ್ 10 ರಂದು ಪ್ರಧಾನಿ ಮಂತ್ರಿ ಪದವಿ ನೇಪಾಳಿ ಕಾಂಗ್ರೆಸ್ ನಾಯಕರಿಗೆ ಬಿಟ್ಟುಕೊಡ ಬೇಕೆಂಬ ಗುಪ್ತ ಒಪ್ಪಂದವನ್ನು ಆತ ಜಾರಿ ತರುವ ಅಂದಾಜಿನಲ್ಲಿ ಇಲ್ಲದ್ದು ಹೊಸ ಬಿಕ್ಕಟ್ಟಿಗೆ ಕಾರಣವಾಗಿದೆ. ನೇಪಾಳಿ ಕಾಂಗ್ರೆಸ್ ಒಳಗೆ ಈ ಸರ್ಕಾರದಲ್ಲಿ ಮುಂದುವರಿಯುವ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಉಂಟಾಗಿದೆ.

ಈ ನಡುವೆ ಥಾಪಾ ಪಾರ್ಲಿಮೆಂಟು ವಿಸರ್ಜಿಸಿ ಹೊಸ ಚುನಾವಣೆ ನಡೆಸಲು ಮಾಡಿದ್ದ ಶಿಫಾರಸ್ಸನ್ನು ಸಂವಿಧಾನ ವಿರೋಧಿ ಎಂದು ಸುಪ್ರೀಂಕೋರ್ಟು ತಳ್ಳಿಹಾಕಿ ಬಿಕ್ಕಟ್ಟನ್ನು ಜಟಿಲಗೊಳಿಸಿ ಪಾರ್ಲಿಮೆಂಟು ವಿಸರ್ಜಿಸುವ ಥಾಪಾ ನಿರ್ಧಾರವನ್ನು ನೇಪಾಳಿ ಕಾಂಗ್ರೆಸ್ಸು ವಿರೋಧಿಸಿತ್ತು. ನೇಪಾಳಿ ಕಾಂಗ್ರೆಸ್ ಚುನಾವಣೆಗೆ ಹೆದರುತ್ತಿರುವುದನ್ನು ಥಾಪಾ ಈ ಪಾರ್ಟಿಯ ಮೇಲೆ ಒತ್ತಡ ತರಲು ಬಳಸುತ್ತಿದ್ದಾನೆ. ಮಾತ್ರವಲ್ಲ, ನೇಪಾಳಿ ಕಾಂಗ್ರೆಸ್ ಒಳಗಿರುವ ಗುಂಪುಗಾರಿಕೆಯನ್ನು ಆತ ಚೆನ್ನಾಗಿ ಬಳಸುತ್ತಿದ್ದಾನೆ. ನೇಪಾಳಿ ಕಾಂಗ್ರೆಸ್ ನಾಯಕ ಕೊಯಿರಾಲ ಮಹಾ ಕಮ್ಯುನಿಸ್ಟ್ - ವಿರೋಧಿಯಾಗಿದ್ದು, ಪ್ರಸಕ್ತ ಅಪವಿತ್ರ ಮೈತ್ರಿ ಸರ್ಕಾರಕ್ಕೆ ಕಾರಣನಾಗಿದ್ದ. ನೇಪಾಳೀ ಕಮ್ಯುನಿಸ್ಟ್ ಪಕ್ಷ ಇಬ್ಭಾಗವಾಗಿದ್ದು, ರಾಜಕೀಯ ಪರಿಸ್ಥಿತಿ ಇನ್ನೂ ಜಟಿಲವಾಗಿದೆ. ಥಾಪ ಪ್ರಧಾನ ಮಂತ್ರಿಯಾಗಿ ಮುಂದುವರೆದರೆ ಬಹುಪಕ್ಷೀಯ ಪಾರ್ಲಿಮೆಂಟರಿ ವ್ಯವಸ್ಥೆಗೆ ಅಪಾಯವಿದೆ.

ಅಫಘಾನಿಸ್ತಾನದ ದುರಂತವನ್ನು ಇನ್ನೂ ಘೋರವಾಗಿಸಿದ ಭೂಕಂಪ

ತಾಲಿಬಾನ್ ಹಾಗೂ ಇತರ ಮುಸ್ಲಿಂ ಮೂಲಭೂತವಾದಿ ಹಾಗೂ ಇತರ ಗೆರಿಲ್ಲಾ ಗುಂಪುಗಳು ಆಂತರಿಕ ಸಮರದ ದುರಂತವನ್ನು ಸೋವಿಯತ್ ಪಡೆಗಳು 1989 ರಲ್ಲಿ ಅಫಘಾ ನಿಸ್ತಾನದಿಂದ ತೆರಳಿದಂದಿನಿಂದ ಎದುರಿಸು ತ್ತಿರುವ ಅಫ್‌ಘನ್ನರು ಈಗಿರುವುದಕ್ಕಿಂತ ಹೆಚ್ಚಿನ ದುರಂತ ಸಾಧ್ಯವೇ ಇಲ್ಲ ಎಂದು ಒಂದು ತರಹದ ಸಮಾಧಾನ ಮಾಡಿಕೊಂಡಿದ್ದರು.

ಅವರ ಸಮಾಧಾನವನ್ನು ನುಚ್ಚುನೂರುಗೈದಿದೆ ಇತ್ತೀಚೆಗೆ ಉತ್ತರ ಅಫಘಾನಿಸ್ತಾನವನ್ನು ನಡುಗಿಸಿದ ಭೀಕರ ಭೂಕಂಪ. ಈ ಭೂಕಂಪ ಸುಮಾರು ನಾಲ್ಕು ಸಾವಿರ ಜನರನ್ನು ಬಲಿತೆಗೆದುಕೊಂಡಿದೆ ಎನ್ನಲಾಗಿದೆ. ಭೂಕಂಪ ಎಷ್ಟು ಭೀಕರವಾಗಿತ್ತು ಹಾಗೂ ಪರಿಹಾರ ಕ್ರಮಗಳು ಎಷ್ಟು ನಗಣ್ಯವಾಗಿದೆಯೆಂದರೆ ಒಟ್ಟು ಸತ್ತ ಜನರು ಈ ಅಂದಾಜುಗಳಿಗಿಂತ ಎಷ್ಟೋ ಹೆಚ್ಚಿರಬೇಕು ಎನ್ನಲಾಗಿದೆ. ಅಫಘಾನಿಸ್ತಾನದ ಭೀಕರ ಚಳಿಗಾಲ, ಭೂಕುಸಿತಗಳು ಹಲವು ಭೂಕಂಪ ಪೀಡಿತ ಪ್ರದೇಶಗಳಿಗೆ ಯಾವುದೇ ಪರಿಹಾರ ಕ್ರಮಗಳು ತಲುಪುವುದು ದುಸ್ತರಗೊಳಿಸಿತ್ತು.

ಈ ದುರಂತ ಇಷ್ಟು ಭೀಕರವಾಗಿದ್ದರೂ, ಗೆರಿಲ್ಲಾ ಗುಂಪುಗಳು ಕದನ ವಿರಾಮ ಸಹ ಘೋಷಿಸಿಲ್ಲ. ಅಫಘಾನರ ಭೀಕರ ಚಳಿಗಾಲದಿಂದ ಕದನ ಚುರುಕಿನಲ್ಲಿ ಇರಲಿಲ್ಲ ಅಷ್ಟೇ, ಪರಿಹಾರ ಒದಗಿಸಲು ಈ ಗುಂಪುಗಳು ಪ್ರಯತ್ನಿಸುತ್ತಿಲ್ಲ. ಮಾತ್ರವಲ್ಲ ಪರಿಹಾರ ಒದಗಿಸಲು ಪ್ರಯತ್ನಿಸುತ್ತಿರುವ ಅಂತರ್ರಾಷ್ಟ್ರೀಯ ಸಂಸ್ಥೆಗೆ ಭೂಕಂಪ ಪೀಡಿತ ಪ್ರದೇಶಗಳಿಗೆ ಅಡೆತಡೆಯಿಲ್ಲದೆ ಪ್ರವೇಶಕ್ಕೂ ಅವಕಾಶ ಮಾಡಿಕೊಡುತ್ತಿಲ್ಲ. ಇದರಿಂದ ಪರಿಹಾರದ ಕಾರ್ಯ ಇನ್ನಷ್ಟು ಕಠಿಣವಾಗಿದೆ.

ಮಾಸ್ಕೊ ಬಳಿ 'ಯುರೋಪಿಯನ್ ತ್ರಿವಳಿ' ಶೃಂಗಸಭೆ

ಮಾಸ್ಕೊದ ಬಳಿ 'ಯುರೋಪಿಯನ್ ತ್ರಿವಳಿ' ಎಂದು ಕರೆಸಿಕೊಳ್ಳುವ ಫ್ರಾನ್ಸ್, ಜರ್ಮನಿ ಮತ್ತು ರಶ್ಯಾಗಳ ಅಧ್ಯಕ್ಷರುಗಳು ಶೃಂಗಸಭೆ ನಡೆಸಿದರು. ಫ್ರಾನ್ಸ್‌ನ ಅಧ್ಯಕ್ಷ ಚಿರಾಕ್ ಮತ್ತು ಜರ್ಮನಿಯ ಚಾನ್ಸ್‌ಲರ್ ಕೊಹ್ಲ್ ಮಾಸ್ಕೊಗೆ ಈ ಶೃಂಗಸಭೆಗಾಗಿ ಆಗಮಿಸಿದ್ದರು. 'ಏಕೈಕ ಸೂಪರ್ ಪವರ್' ನ ಯುಗದಲ್ಲಿ ಅಮೆರಿಕದ ಅಧಿಪತ್ಯಕ್ಕೆ ಸವಾಲು ಹಾಕುವುದು, ಬಹುಧ್ರುವೀಯ ಜಗತ್ತಿನ ಅಗತ್ಯ ಪ್ರತಿಪಾದಿಸುವುದು ಈ ಶೃಂಗಸಭೆಯ ಉದ್ದೇಶ. ಅಂತರ್ರಾಷ್ಟ್ರೀಯ ವಿಚಾರಗಳಲ್ಲಿ ಹೆಚ್ಚಿನ ಪಾತ್ರವಹಿಸುವುದು, ದ್ವಿಪಕ್ಷೀಯ ವಿಚಾರಗಳ ಬಗ್ಗೆ ಚರ್ಚೆ ಸಹ ಶೃಂಗಸಭೆ ಚರ್ಚಿಸಿತಂತೆ. ಇತ್ತೀಚೆಗೆ ಇರಾಕಿನಲ್ಲಿ ಅಮೆರಿಕನ್ ಆಕ್ರಮಣ ತಪ್ಪಿಸುವುದರಲ್ಲಿ, ಫ್ರಾನ್ಸ್ ಮತ್ತು ರಶ್ಯಾ ವಹಿಸಿದ ಪಾತ್ರ ಈ ತ್ರಿವಳಿಗೆ ಸ್ಫೂರ್ತಿ ಕೊಟ್ಟಿದೆಯಂತೆ.

ಹೆರಿಗೆ ರಜೆ ಕೊಡದ ಆರು ದೇಶಗಳಲ್ಲೊಂದು ಅಮೆರಿಕಾ: ಐಎಲ್‌ಓ ಅಧ್ಯಯನ

ವಿಶ್ವಸಂಸ್ಥೆಯ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಓ), 152 ಸದಸ್ಯ ದೇಶಗಳ ಸಮೀಕ್ಷೆ ನಡೆಸಿತು - ಈ ದೇಶದ ಕಾನೂನುಗಳು ಎಷ್ಟರ ಮಟ್ಟಿಗೆ ಹೆರಿಗೆ ಸಮಯದಲ್ಲಿ ಮಹಿಳೆಗೆ ವೇತನ ಸಹಿತ ರಜೆ, ಮುಂತಾದ ರಕ್ಷಣೆ ನೀಡುತ್ತವೆ ಎಂದು. ಆ ಸಮೀಕ್ಷೆಯ ಫಲಿತಾಂಶಗಳು ದಂಗು ಬಡಿಸುವಂತಹದು. ಮಹಿಳೆಯರಿಗೆ ಹೆರಿಗೆ ಸಮಯದಲ್ಲಿ ಯಾವುದೇ ರೀತಿಯ ರಕ್ಷಣೆ ಒದಗಿಸದ ಕೇವಲ ಆರು ದೇಶಗಳಲ್ಲಿ ಅಮೇರಿಕ ಪ್ರಮುಖವಾಗಿದೆ. ಇತರ ದೇಶಗಳೆಂದರೆ ಆಸ್ಟ್ರೇಲಿಯಾ, ನ್ಯೂಝಿಲೆಂಡ್, ಸ್ವಾಜಿಲ್ಯಾಂಡ್, ಲೆಸೊಥೋ ಮತ್ತು ಪಾಪುವ ನ್ಯೂಗಿನಿ, ಈ ದೇಶಗಳಲ್ಲಿ ಮಾತ್ರ ಹೆರಿಗೆಗೆ ವೇತನ ಸಹಿತ ರಜೆ ಕೊಡಬೇಕೆಂಬ ಕನಿಷ್ಟ ಕಾನೂನುಗಳೂ ಇಲ್ಲ. ಏಶ್ಯಾ ಮತ್ತು ಆಫ್ರಿಕಾದ ಮೂರನೇ ಜಗತ್ತಿನ ಸುಮಾರು 29 ದೇಶಗಳಲ್ಲಿ ವೇತನ ಸಹಿತ ಹೆರಿಗೆ ರಜೆ ಮಾತ್ರವಲ್ಲ, ಈ ಅವಧಿಯಲ್ಲಿ ಮಹಿಳೆಯರನ್ನು ಕೆಲಸದಿಂದ ವಜಾ ಮಾಡುವುದರ ಮತ್ತು ವೇತನ ಕಡಿತಗೊಳಿಸುವುದರ ವಿರುದ್ಧ ಸಹ ರಕ್ಷಣೆ ನೀಡಿವೆ.

ಕೆಲಸ ನಿರತ ಮಹಿಳೆಯರ ಅಧ್ಯಯನ ಮಾಡಿದ ಶೇಕಡಾ 30 ರಷ್ಟು ಮನೆಗಳಲ್ಲಿ ಕುಟುಂಬದ ಅರ್ಧಕ್ಕೂ ಹೆಚ್ಚಿನ ಆದಾಯವನ್ನು ಗಳಿಸುತ್ತಾರೆ. ಅಮೆರಿಕಾದಲ್ಲಿ ಶೇಕಡಾ 50 ಕ್ಕೂ ಹೆಚ್ಚಿನ ಕುಟುಂಬಗಳಲ್ಲಿ ಮಹಿಳೆಯರೇ ಮುಖ್ಯ ಗಳಿಕೆದಾರರು. ಮಹಿಳೆಯರಿಗೆ ಹೆರಿಗೆ ಮತ್ತು ಬಾಣಂತಿತನದ ಅವಧಿಯಲ್ಲಿ ಯಾವುದೇ ರಕ್ಷಣೆ ನೀಡದೆ, ಮಹಿಳೆಯರು ಮತ್ತು ಇಡೀ ದೇಶವನ್ನು ಅರೆನಗ್ನ ಅಪಾಯದಲ್ಲಿ ನೂಕಿದಂತಾಗುತ್ತದೆ. ಅಲ್ಲದೆ ಮಗು ಹೆರುವ ಸಾಕುವ ವಯಸ್ಸಿನ ಮಹಿಳೆಯಲ್ಲಿ ಶೇಕಡಾ 73 ರಷ್ಟು ಕೆಲಸ ಮಾಡುತ್ತಿದ್ದರೆ, ಇದು ಇನ್ನೂ ಹತ್ತು ವರ್ಷದಲ್ಲಿ ಶೇಕಡಾ 81 ಕ್ಕೇರಲಿದೆ. ಆದ್ದರಿಂದ ಈ ರಕ್ಷಣೆಯ ಮಹತ್ವ ಇನ್ನಷ್ಟು ಹೆಚ್ಚಲಿದೆ.

ಜಗತ್ತಿನ ಅತ್ಯಂತ ಶ್ರೀಮಂತ ದೇಶಕ್ಕೆ ಈ ಕನಿಷ್ಟ ರಕ್ಷಣೆ ಒದಗಿಸಲು ಸಾಧ್ಯವಿಲ್ಲವೇ? ಅದರ ಬದಲು ಅಮೇರಿಕ ಹಲವು ದೈತ್ಯ ಕಂಪನಿಗಳು ಹೆರಿಗೆಯ ಮೊದಲೇ ಕೆಲಸದಿಂದ ತೆಗೆದು ಹಾಕುವುದು, ಅಲ್ಪಕಾಲಿಕ ಕೆಲಸಗಾರರಾಗಿ ಪರಿವರ್ತಿಸುವುದು - ಸಾಮಾನ್ಯ ನೀತಿಯಾಗಿವೆ. ಮಾತ್ರವಲ್ಲ ಮಹಿಳೆಯರನ್ನು ದೊಡ್ಡ ಪ್ರಮಾಣದಲ್ಲಿ ಅಲ್ಪಕಾಲಿಕ ಕೆಲಸಗಾರರಾಗೇ ತೆಗೆದುಕೊಳ್ಳಲಾಗುತ್ತಿದೆ.

ಇಸ್ರೇಲಿನ 'ಮೊಸಾದ್'ಗೆ ಮುಖಭಂಗ

ಮೊಸಾದ್ ಇಸ್ರೇಲಿನ ಕುಖ್ಯಾತ ಬೇಹುಗಾರಿಕೆ ಸಂಸ್ಥೆ. ಇತರ ದೇಶಗಳಲ್ಲಿ ಹಲವು ಕುಕೃತ್ಯಗಳನ್ನು ನಡೆಸಿದ 'ಕೀರ್ತಿ' ಇದರದ್ದು. ಪ್ಯಾಲೆಸ್ಟೀನ್ ಮತ್ತು ಇತರ ಅರಬ್‌ದೇಶಗಳಲ್ಲಿ ಪ್ರಗತಿಪರ ಚಳುವಳಿಗಳನ್ನು ಮಟ್ಟ ಹಾಕುವುದರಲ್ಲಿ ನಿಸ್ಸೀಮ. ಇತರ ಹಲವು ಮೂರನೇ ಜಗತ್ತಿನ ದೇಶಗಳಲ್ಲಿ ಪ್ರತಿಗಾಮಿ ಸರ್ಕಾರದ ಬೇಹುಗಾರಿಕೆ ಸಂಸ್ಥೆಗಳಿಗೆ ಪ್ರಗತಿಪರ ಚಳುವಳಿ ಹತ್ತಿಕ್ಕುವುದಕ್ಕೆ 'ಮೊಸಾದ್' ದೇ ತರಬೇತಿ. ಇಂತಹ ಮೊಸಾದ್‌ಗೆ ಇತ್ತೀಚೆಗೆ ತೀವ್ರ ಮುಖಭಂಗವಾಗುವ ಘಟನೆಗಳು ನಡೆದಿವೆ.

ಸೆಪ್ಟೆಂಬರ್ 97 ರಲ್ಲಿ ಜೋರ್ಡಾನ್‌ನ ರಾಜಧಾನಿಯಲ್ಲಿ 'ಹಾಮಾಸ್' ಎಂಬ ಸಂಘಟನೆಯ ನಾಯಕನನ್ನು ಹತ್ಯೆ ಮಾಡಲು ಯತ್ನಿಸಿದ 'ಮೊಸಾದ್' ಏಜೆಂಟುಗಳು ಸಿಕ್ಕಿಬಿದ್ದಿದ್ದರು. ಈ ಮೊಸಾದ್ ಏಜೆಂಟ್‌ಗಳು ವಿಷಕಾರಿ ಇಂಜೆಕ್ಷನ್ ಚುಚ್ಚಿ ಆತನನ್ನು ಕೊಲ್ಲಲು ಯತ್ನಿಸಿದ್ದರು. ಅದು ಮಾತ್ರವಲ್ಲ ಈ ಏಜೆಂಟರು ಖೋಟಾ ಕೆನಡಾದ ಪಾಸ್‌ಪೋರ್ಟ್ ಬಳಸಿದ್ದರು. ಬಂಧಿತರಾದ ಏಜೆಂಟರ ಬಿಡುಗಡೆಗೆ ಇಸ್ರೇಲಿ ಸರ್ಕಾರ ದೊಡ್ಡ ರಾಜಕೀಯ ಬೆಲೆ ತೆರಬೇಕಾಯಿತು. ಇಸ್ರೇಲಿ 'ಮೊಸಾದ್' ನ ಈ ಭಯೋತ್ಪಾದಕ ಕೃತ್ಯದ ಬಗ್ಗೆ ಜೋರ್ಡಾನ್ ಹಾಗೂ ಕೆನಡಿಯನ್ ಸರ್ಕಾರಗಳು ತೀವ್ರ ಪ್ರತಿಭಟನೆ ಸಲ್ಲಿಸಿದ್ದವು. ಈ ಘಟನೆಯಿಂದ ಮೊಸಾದ್‌ನ ಮುಖ್ಯಸ್ಥ ರಾಜೀನಾಮೆ ಕೊಡಬೇಕಾಯಿತು.

ಇತ್ತೀಚೆಗೆ ಮೊಸಾದ್ ಇನ್ನೊಂದು ಭಯೋತ್ಪಾದಕ ಕೃತ್ಯದಲ್ಲಿ ಸಿಕ್ಕಿಹಾಕಿಕೊಂಡು ಮುಖಭಂಗ ಅನುಭವಿಸಿದೆ. ಸ್ವಿಟ್ಜರ್‌ಲ್ಯಾಂಡ್‌ನ ಬರ್ನ್ ನಗರದಲ್ಲಿ ಇರಾನಿಯನ್ ರಾಜತಾಂತ್ರಿಕರ ಮನೆಯೊಳಗೆ ನುಗ್ಗಿದ ಐದು ಮೊಸಾದ್ ಏಜೆಂಟರನ್ನು ಬಂಧಿಸಲಾಗಿತ್ತು. ಸ್ವಿಸ್ ಮತ್ತು ಇರಾನಿ ಸರ್ಕಾರಗಳು ಪ್ರತಿಭಟನೆ ಸಲ್ಲಿಸಿವೆ.

ವಿದ್ಯಾರ್ಥಿ - ಉಪನ್ಯಾಸಕರ ಶೋಷಣೆ ವಿರುದ್ಧ ಪ್ರತಿಭಟನೆ

ಕಾರವಾರ: ಸರ್ಕಾರದಿಂದ ಅನುಮತಿ ಪಡೆದಿರುವ ಜಿಲ್ಲೆಯ ಏಕೈಕ ಖಾಸಗಿ ಚಿತ್ರಕಲಾ ಶಾಲೆಯಲ್ಲಿ ಬಾರೀ ಪ್ರಮಾಣದ ಭ್ರಷ್ಟಾಚಾರ ನಡೆದು, ಆಡಳಿತ ಮಂಡಳಿಯ ವಿವಾದದಲ್ಲಿ ವಿದ್ಯಾರ್ಥಿ ಉಪನ್ಯಾಸಕರನ್ನು ಹಲವಾರು ತಿಂಗಳಿಂದ ಶೋಷಿಸುತ್ತಿರುವುದನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ವಿರೋಧಿಸಿ ಫೆ. 17 ರಂದು ಕಾರವಾರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಎಸ್.ಪಿ.ಯವರಿಗೆ, ಡಿ.ಸಿ.ಯವರಿಗೆ ಮನವಿ ಅರ್ಪಿಸಿ, ಟಾಗೋರ ಚಿತ್ರಕಲಾ ಶಾಲೆಯ ಅವ್ಯವಹಾರದ ತನಿಖೆ ನಡೆಸಬೇಕು, ಆರು ತಿಂಗಳಿನಿಂದ ಉಪನ್ಯಾಸಕರಿಗೆ ನೀಡದ ಸಂಬಳವನ್ನು ತಕ್ಷಣ ಬಿಡುಗಡೆ ಮಾಡಬೇಕು, ಪದಚ್ಯುತ ಗೌರವ ಪ್ರಾಚಾರ್ಯ ಹಾಗೂ ಆಡಳಿತ ಮಂಡಳಿಯಿಂದ ಕಾಲೇಜಿನ ಬೀಗಮುದ್ರೆಯನ್ನು ಕಾನೂನು ರೀತ್ಯಾ ತೆಗೆಸಿ, ವಿದ್ಯಾರ್ಥಿಗಳ ಅಭ್ಯಾಸಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕೆಂಬ ವಿದ್ಯಾರ್ಥಿಗಳ ಬೇಡಿಕೆ ಈಡೇರಿಕೆಗೆ ಆಗ್ರಹಿಸಿತ್ತು. ಸತತ 4 ದಿನಗಳ ಹೋರಾಟದ ಪರಿಣಾಮವಾಗಿ ಜೆ.ಡಿ.ಯವರ ನಿರ್ದೇಶನದ ಮೇರೆಗೆ ಇಲಾಖೆಯ ಹಿರಿಯ ಅಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಎಸ್‌ಎಫ್‌ಐನ ಮುಖಂಡರೊಂದಿಗೆ ಚರ್ಚಿಸಿ ಬೀಗ ಒಡೆದು ತೆಗೆದರಲ್ಲದೇ ಉಪನ್ಯಾಸಕರ ಸಂಬಳ ಬೇಗನೇ ನೀಡುವುದಾಗಿ ಭರವಸೆ ನೀಡಿದ್ದಾರೆ.

ತದನಂತರ 1 ತಿಂಗಳ ಅವಧಿಯಲ್ಲಿ ಟಾಗೋರ ಚಿತ್ರಕಲಾ ವಿದ್ಯಾಲಯದಲ್ಲಿ 2 ಆಡಳಿತ ಮಂಡಳಿಗಳಾದವು. ಪದಚ್ಯುತ ಕಾರ್ಯದರ್ಶಿಯ ಪತ್ನಿಯೇ ಗುಮಾಸ್ತೆಯಾಗಿರುವುದರಿಂದ ವಿದ್ಯಾರ್ಥಿಗಳ ಪ್ರವೇಶ ಪತ್ರವನ್ನು ನೀಡದೆ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಸತಾಯಿಸುತ್ತಿದ್ದು, ದೈನಂದಿನ ಆಡಳಿತ ನೋಡಿಕೊಳ್ಳಲು ಶಿಕ್ಷಣ ಇಲಾಖೆ ಅಧಿಕಾರಿಯೋರ್ವರನ್ನು ನೇಮಿಸಿದಾಗ್ಯೂ ಅವರಿಗೆ ಕಾಗದ ಪತ್ರಗಳನ್ನು ನೀಡದೇ ಗುಮಾಸ್ತೆಯವರು ವಾಪಸ್ ಕಳಿಸಿದ್ದರಿಂದ ಸಂಬಳವಿಲ್ಲದೇ ಉಪನ್ಯಾಸಕರು ಒದ್ದಾಡುವಂತಾಗಿದೆ. ಈ ಮಧ್ಯೆ ಮಾರ್ಚ್ 30 ಕ್ಕೆ ಪರೀಕ್ಷೆಗಳಿದ್ದರೂ ಹಿಂದಿನ ದಿನದವರೆಗೂ ಹಾಲ್‌ಟಿಕೆಟ್ ನೀಡದಿದ್ದುದರಿಂದ ಎಸ್‌ಎಫ್‌ಐ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಜಿಲ್ಲಾಧಿಕಾರಿಗಳ ಮಧ್ಯ ಪ್ರವೇಶದಿಂದ ಪರೀಕ್ಷೆಗಳು ಸುಗಮವಾಗಿ ನಡೆಯುವಂತಾಗಿದೆ.

ವಿದ್ಯಾರ್ಥಿಗಳ ಪರವಾಗಿ ಎಸ್‌ಎಫ್‌ಐ ಜಿಲ್ಲಾಧ್ಯಕ್ಷೆ ಯಮುನಾ ಗಾಂವ್ಕರ್, ಕಾರವಾರ ತಾಲೂಕು ಅಧ್ಯಕ್ಷ ರಾಜೇಶ್, ಕಾರ್ಯದರ್ಶಿ ಕೇಶವ, ಡಿವೈಎಫ್‌ಐನ ಶಾಂತರಾಮ ನಾಯಕ, ಎಸ್ ಎಫ್‌ಐನ ಸಂತೋಷ, ನಿರ್ಮಲಾ ನಾಯ್ಕರು ನೇತೃತ್ವ ವಹಿಸಿದ್ದರು.

ಏಕೆ ಅಡ್ವಾಣಿಯವರ ಈ ಹೊಸ ಗುರುತು ಚೀಟಿ?

ಕೇಂದ್ರ ಗೃಹಮಂತ್ರಿ ಅಡ್ವಾಣಿಯವರು ದೇಶದ ಎಲ್ಲಾ ನಾಗರಿಕರಿಗೆ ಫೋಟೋ ಗುರುತುಪತ್ರ ನೀಡುವ ಹೊಸದೊಂದು ಯೋಜನೆಯನ್ನು ಪ್ರಕಟಿಸಿದ್ದಾರೆ. ಆಮೂಲಾಗ್ರ ಚರ್ಚೆಯ ನಂತರ ಚುನಾವಣಾ ಆಯೋಗ ಎಲ್ಲಾ ಮತದಾರರಿಗೆ ಗುರುತು ಪತ್ರಗಳನ್ನು ನೀಡುವ ಒಂದು ಯೋಜನೆಯನ್ನು ಈಗಾಗಲೇ ಕೈಗೆತ್ತಿಕೊಂಡಿರುವಾಗ ಈ ಹೊಸ ಯೋಜನೆಯ ಅಗತ್ಯವೇನಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಪ್ರಶ್ನಿಸಿದೆ. ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಚರ್ಚೆಯ ನಂತರ ಇವು ಎಲ್ಲಾ ನಾಗರಿಕರಿಗೆ ಬಹುಪಯೋಗಿ ಗುರುತುಪತ್ರವಾಗುತ್ತದೆ ಎಂದು ನಿರ್ಧರಿಸಲಾಗಿತ್ತು. ದೇಶಾದ್ಯಂತ ಈ ಯೋಜನೆ ಜಾರಿಯಾಗುತ್ತಿದ್ದು ಈಗಾಗಲೇ ಕೋಟ್ಯಾಂತರ ರೂಪಾಯಿಗಳು ಖರ್ಚಾಗಿವೆ. ಇಷ್ಟೊಂದು ಸಂಪನ್ಮೂಲ, ಸಮಯವನ್ನು ವ್ಯಯಿಸಿದಮೇಲೆ ಆ ಪ್ರಕ್ರಿಯೆಯನ್ನು ಕೈಬಿಡುವುದಕ್ಕೆ ಏನೇನೂ ಅರ್ಥವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಈ ಹೊಸ ಯೋಜನೆಯ ಮುಖ್ಯ ಉದ್ದೇಶ ಕಾನೂನುಬಾಹಿರ ವಲಸಿಗರನ್ನು ಗುರುತಿಸುವುದು ಎಂಬ ಸೂಚನೆ ಗಾಂಧಿನಗರದಲ್ಲಿ ಗೃಹಮಂತ್ರಿಗಳು ನೀಡಿದ ಹೇಳಿಕೆಯಿಂದ ಕಾಣುತ್ತದೆ. ರಾಷ್ಟ್ರೀಯ ಭದ್ರತೆಗೆ ಹೆಚ್ಚುತ್ತಿರುವ ಬೆದರಿಕೆಯನ್ನು ಎದುರಿಸಲು ಈ ಕ್ರಮವಂತೆ. ಕೆಲವು ಒಪ್ಪಂದಗಳನ್ನು ಹಾಗೂ ಕಾನೂನು ನಿರ್ಣಯಗಳನ್ನು ಜಾರಿ ಮಾಡಲು ಪ್ರಯತ್ನಿಸಲಾಗುತ್ತಿರುವ ಅಸ್ಸಾಂನಲ್ಲಿ ದೇಶದ ನಾಗರೀಕರನ್ನು ಗುರುತಿಸುವ ವಿಧಾನ ಬಹಳಷ್ಟು ವಿವಾದಗಳನ್ನು ಎಬ್ಬಿಸಿದೆ. ಈ ರೀತಿಯಲ್ಲಿ ನಾಗರಿಕರ ಗುರುತಿನ ಬಗ್ಗೆ ಪ್ರಶ್ನೆಗಳನ್ನೆಬ್ಬಿಸುವುದು ದೇಶಕ್ಕೆ ಒಳ್ಳೆಯದಲ್ಲ, ಜನಗಳ ನಡುವೆ ಇದು ಸಂದೇಹಗಳನ್ನು ಮೂಡಿಸುತ್ತದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ. ಗುರುತು ಪತ್ರಗಳನ್ನು ನೀಡುವ ಬಗ್ಗೆ ಕೇಂದ್ರ ಸರ್ಕಾರ ಗಂಭೀರವಾಗಿದ್ದರೆ ಚುನಾವಣಾ ಆಯೋಗದ ಮುತುವರ್ಜಿಯಿಂದ ಆರಂಭವಾಗಿರುವ ಬಹುಪಯೋಗಿ ಗುರುತು ಪತ್ರಗಳನ್ನು ನೀಡುವ ಕೆಲಸವನ್ನು ಮುಂದುವರಿಸಿ ಚುರುಗೊಳಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಬೆಂಗಳೂರಿನಲ್ಲಿ ಶ್ರದ್ಧಾಂಜಲಿ

ಏಪ್ರಿಲ್ 4ರಂದು ಬೆಂಗಳೂರಿನ ದುಡಿಯುವ ಜನರು, ಇತರ ಪ್ರಗತಿಪರರು, ಸಾಹಿತಿಗಳು, ವಿಜ್ಞಾನಿಗಳು, ಸಮಾಜ ವಿಜ್ಞಾನಿಗಳು ಇಎಂಎಸ್ ರವರಿಗೆ ಗಂಭೀರ ಸಮಾರಂಭವೊಂದರಲ್ಲಿ ಶ್ರದ್ಧಾಂಜಲಿ ಅರ್ಪಿಸಿದರು. ನಗರದ ಪುರಭವನದಲ್ಲಿ ಈ ಶ್ರದ್ಧಾಂಜಲಿ ಸಭೆ ನಡೆಯಿತು.

ಹಿರಿಯ ಕಾರ್ಮಿಕ ಮುಖಂಡ ಸೂರ್ಯನಾರಾಯಣರಾವ್ ಇಎಂಎಸ್ ರ ಮಹಾನ್ ವ್ಯಕ್ತಿತ್ವವನ್ನು, ತ್ಯಾಗವನ್ನು ಸ್ಮರಿಸುತ್ತಾ ಯಾವ ವಿಶ್ವವಿದ್ಯಾಲಯದ ಪದವಿಯಿಲ್ಲದಿದ್ದರೂ ಎಲ್ಲಾ ಪದವೀಧರರನ್ನೂ ಮೀರಿಸಿದ ಮೇಧಾವಿ,ನುಡಿದಂತೆ ನಡೆದು ತೋರಿಸಿದ ಕ್ರಾಂತಿಕಾರಿ ಎಂದರು. ತಾನು ಶಾಸಕನಾದಾಗ ಇಎಂಎಸ್ ಸ್ವಜನ ಪಕ್ಷಪಾತವೆಂಬುದು ಸಾಮಾನ್ಯವಾಗಿರುವ ವಾತಾವರಣದಲ್ಲಿ ಅದಕ್ಕೆ ಬಲಿಬೀಳದಂತೆ ಎಚ್ಚರದ ಕಿವಿಮಾತನ್ನು ಹೇಳಿದ್ದನ್ನು ನೆನಪಿಸಿಕೊಳ್ಳುತ್ತಾ ಎರಡು ಬಾರಿ ಮುಖ್ಯಮಂತ್ರಿಗಳಾಗಿದ್ದರೂ ಪಕ್ಷ ಒದಗಿಸಿದ ಚಿಕ್ಕ ಬಾಡಿಗೆ ಮನೆಯಲ್ಲಿಯೇ ವಾಸಿಸುತ್ತಾ ಕೊನೆಯ ವರೆಗೂ ಪಕ್ಷಕ್ಕೆ ಮಾರ್ಗದರ್ಶನ ನೀಡಿದ ಅವರದ್ದು ಸರಳ ಹಾಗೂ ಉನ್ನತ ಜೀವನ ಎಂದರು.


ಅಪೂರ್ವ ಸಾಧಕ

ಅವರ ಸರಳ ಹಾಗೂ ಉನ್ನತ ವ್ಯಕ್ತಿತ್ವವನ್ನು ತಮ್ಮದೇ ಆದ ರೀತಿಯಲ್ಲಿ ಶ್ಲಾಘಿಸಿದರು ಡಾ.ಎನ್. ಎಸ್. ರಾಮಸ್ವಾಮಿ. ಬೆಂಗಳೂರಿನ ಪ್ರತಿಷ್ಠಿತ ಇಂಡಿಯನ್ ಇನ್ಸ್ ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಪ್ರಾಧ್ಯಾಪಕರಾಗಿದ್ದಾಗ ಎತ್ತಿನ ಗಾಡಿಯ ಆಧುನೀಕರಣ ಪ್ರಯತ್ನಕ್ಕೆ ಹೆಸರಾಗಿದ್ದು ಈಗ ನಿವೃತ್ತರಾಗಿರುವ ಡಾ.ರಾಮಸ್ವಾಮಿ ತಾನೊಬ್ಬ ಆಧ್ಯಾತ್ಮ ವ್ಯಕ್ತಿಯಾಗಬೇಕು ಎಂದು ಹಂಬಲಿಸುತ್ತಿರುವವರು ಎನ್ನುತ್ತಲೇ ತಾತ್ವಿಕವಾಗಿ ಭೌತವಾದಿಯಾದ ಇಎಂಎಸ್ ರವರದ್ದು ಅಪೂರ್ವ ಸಾಧನೆ ಎಂದರು. ಇಎಂಎಸ್ ಮುಖ್ಯಮಂತ್ರಿಯಾಗಿದ್ದಾಗ ಅಲ್ಲಿನ ಪೋಲೀಸ್ ಅಧಿಕಾರಿಯೊಬ್ಬನ ಮಗನಾಗಿ ಬೇಲಿಯ ಈಚೆ ನಿಂತು ಕೇರಳದ ಬೆಳವಣಿಗೆಗಳನ್ನು ನೋಡುತ್ತಾ ಇಎಂಎಸ್ ವ್ಯಕ್ತಿತ್ವದ ಬಗ್ಗೆ ಗೌರವ ಬೆಳೆಸಿಕೊಡವರು ಇವರು. ಇಎಂಎಸ್ ಸರಕಾರದ ವಜಾ ಒಂದು ಅಧಾರ್ಮಿಕ ಕೃತ್ಯ, ಅವನತಿಯ ಆರಂಭ ಎಂದು ಈಗಿನ ತನ್ನ ಆಧ್ಯಾತ್ಮಿಕ ಭಾಷೆಯಲ್ಲಿ ವರ್ಣಿಸಿದರೂ ಇವರು ಈಗಲೂ ಸಾಮಾಜಿಕ ಸಂಘಟನೆಗಳು ಮಾತ್ರವೇ ಎಂದು ನಂಬಿದವರು.ಆದ್ದರಿಂದ ಇನ್ನು 50-100 ವರ್ಷಗಳಲ್ಲಿ ಬರಲಿರುವ ಯುಗದ ಅಡಿಗಲ್ಲನ್ನು ಹಾಕಿದವರು ಇಎಂಎಸ್ ಎಂದು ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು.

'ಕೇರಳ ಮಾದರಿ'ಯ ಪಿತೃ

ಇಎಂಎಸ್ ಸಾಮಾಜಿಕ ಅಭಿವೃದ್ಧಿಯ ಕೇರಳ ಮಾದರಿಯ ಪಿತೃ

ಕಾಂ. ಇ.ಎಂ.ಎಸ್.



ಲಾಲ್ ಸಲಾಮ್

ಎಂದು ತಮ್ಮ ಶ್ರದ್ಧಾಂಜಲಿ ಅರ್ಪಿಸಿದವರು ನಗರದ ಇನ್ನೊಂದು ಪ್ರತಿಷ್ಠಿತ ಸಂಸ್ಥೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ನ ಜೀವಭೌತಶಾಸ್ತ್ರದ ಪ್ರಾಧ್ಯಾಪಕ ಡಾ.ವಿಜಯನ್. ಇವರಿಗೆ ಇಎಂಎಸ್ ಕೌಟುಂಬಿಕ ಪರಿಚಯ. ಆದರೆ ಇಎಂಎಸ್ ಬಗ್ಗೆ ಅಪಾರ ಗೌರವ ಆ ಕಾರಣಕ್ಕಾಗಿ ಅಲ್ಲ. ಇವರ ತಂದೆ ಹಾಗೂ ಇಎಂಎಸ್ ನಂಬೂದಿರಿ ಯುವಕರಾಗಿ ತಮ್ಮ ಕೋಮಿನೊಳಗಿನ ಸುಧಾರಣೆಗಳ ಹೋರಾಟದಲ್ಲಿ ಜೊತೆಯಾದವರು. ತಮ್ಮ ತಂದೆ ಇಎಂಎಸ್ ರ ಸುಮಾರಾಗಿ ಆರಾಧನೆಯನ್ನೇ ಮಾಡುತ್ತಾರೆ ಎನ್ನುವ ಡಾ. ವಿಜಯನ್ ಗೆ ಇಎಂಎಸ್ ರ ಮೊತ್ತ ಮೊದಲ ನೆನಪು - ಅವರು ನಂಬೂದಿರಿಗಳಿಗೆ "ನೀವು ಮಾನವ ಜೀವಿಗಳಾಗಿ" ಎಂದು ಹೇಳಿದ ಅವರ ಭಾಷಣದ್ದು. ನಂತರ 1940ರ ದಶಕದಲ್ಲಿ ಇಎಂಎಸ್ ಭೂಗತರಾಗಿದ್ದಾಗ ಇವರ ತಂದೆಯವರ ಮನೆಯಲ್ಲೇ ಆಶ್ರಯ ಪಡೆದಿದ್ದರು. ಈ "ತಲೆತಪ್ಪಿಸಿಕೊಂಡ ಪ್ರಖ್ಯಾತ ವ್ಯಕ್ತಿ" ತಮ್ಮ ಮನೆಯ ಮಹಡಿಯಲ್ಲಿ ನೆಲದ ಮೇಲೆ ಕೂತು ದಿನವಿಡೀ ಬರೆಯುತ್ತಿದ್ದುದನ್ನು ಒಬ್ಬ ಬಾಲಕನಾಗಿ ಕೌತುಕದಿಂದ ನೋಡುತ್ತಿದ್ದುದನ್ನು ಡಾ.ವಿಜಯನ್ ನೆನಪಿಸಿಕೊಂಡರು.

ಮಾರುಕಟ್ಟೆ ಆರ್ಥಿಕ ಉಂಟುಮಾಡುತ್ತಿರುವ ನೈತಿಕ ಪತನದ ಬಗ್ಗೆ ಆಧ್ಯಾತ್ಮಿಕ ದೃಷ್ಟಿಯಿಂದ ಡಾ.ರಾಮಸ್ವಾಮಿ ಅ ಹಿನ್ನಲೆಯಲ್ಲಿ ಇಎಂಎಸ್‌ರನ್ನು ನೆನಸಿಕೊಂಡರೆ, ಡಾ|| ವಿಜಯನ್ ಅದು ಉಂಟುಮಾಡಿರುವ 'ಕೊಳ್ಳುಬಾಕತನ' (Consumerism) ಹಾಗೂ ಅದರ ಹಿಂದಿರುವ 'ಜಾಗತೀಕರಣ'ದ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾ ಇಎಂಎಸ್ ರನ್ನು ನೆನೆಸಿಕೊಂಡರು. ಇಎಂಎಸ್ ಕೇರಳ ಮಾದರಿಯ ಪಿತೃವಾದರೂ ಅದರಲ್ಲಿನ ಕೊರತೆಗಳನ್ನು ಮೊದಲು ಗುರುತಿಸಿದವರೂ ಅವರೇ ಎಂದ ಈ ವಿಜ್ಞಾನಿ ಅದನ್ನು ಸರಿಪಡಿಸಲು ಇಎಂಎಸ್ ಜನತಾ ಯೋಜನೆಯ ವಿಚಾರವನ್ನು ಮುಂದಿಟ್ಟು ಅದನ್ನು ಇಳಿವಯಸ್ಸಿನಲ್ಲೂ ಕಾರ್ಯರೂಪಕ್ಕೆ ತರಲು ಮುಂದಾದುದನ್ನು ನೆನೆಸಿಕೊಂಡರು. ಕೇರಳ ಸರಕಾರ ನೇಮಿಸಿದ ಶಿಕ್ಷಣ ಆಯೋಗದ ಸದಸ್ಯನಾಗಿ ತನಗೆ ಅವರಿಂದ ದೊರೆತ ಅಮೂಲ್ಯ ಮಾರ್ಗದರ್ಶನವನ್ನು ಡಾ.ವಿಜಯನ್ ಸ್ಮರಿಸಿಕೊಂಡರು.

ಬೆವರಿನ ಲೋಕದ ಇತಿಹಾಸಕಾರ

ಇಎಂಎಸ್ ಬದ್ಧತೆಯ ಪ್ರತೀಕ, ಬೆವರಿನ ಲೋಕದ ಇತಿಹಾಸಕಾರ ಎಂದು ಶ್ರದ್ಧಾಂಜಲಿ ಅರ್ಪಿಸಿದವರು ಬಂಡಾಯ ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪ. ಸೈದ್ಧಾಂತಿಕತೆಯನ್ನು ಬಿಟ್ಟುಕೊಡದೆ ಅದನ್ನು ಕ್ರಿಯಾಶೀಲಗೊಳಿಸಿದ ಇಎಂಎಸ್ ರ ನೆನಪು ಜನ ಪ್ರತಿನಿಧಿಗಳು ಜನಗಳ ಪ್ರತಿನಿಧಿಗಳಾಗದೆ ಕೇವಲ ಸಂಖ್ಯೆಗಳಾಗುತ್ತಿರುವ ಈಗಿನ ವಾತಾವರಣದಲ್ಲಿ ಸದಾ ಕಾಡಿಸುತ್ತದೆ, ಸದಾ ಒಳಗಡೆ ನಮ್ಮನ್ನು ಕಾಡಿಸುತ್ತಿರಲಿ ಎಂದು ಹಾರೈಸಿದರು.

ಹಳೆಯ ಪೀಳಿಗೆಯ ಎಲ್ಲಾ ಕಮ್ಯುನಿಸ್ಟರ ಗುರುಗಳು ಎಂದು ಇಎಂಎಸ್‌ರವರನ್ನು ನೆನಪಿಸಿಕೊಂಡರು ಸಿಪಿಐನ ಹಿರಿಯ ಮುಂದಾಳುಗಳಾದ ಎಂ.ಸಿ.ನರಸಿಂಹನ್ ಮತ್ತು ಎಂ.ಸಿ. ವೆಂಕಟರಾಮು. 1957 ರಲ್ಲಿ ಕೇರಳದಲ್ಲಿ ಮೊತ್ತಮೊದಲು ಕಮ್ಯುನಿಸ್ಟ್ ಸರಕಾರ ಬಂದಾಗ ಉಂಟಾಗಿದ್ದ ಸ್ಫೂರ್ತಿಯ ವಾತಾವರಣ ವನ್ನು ಇಬ್ಬರೂ ನೆನಪಿಸಿಕೊಳ್ಳುತ್ತಾ ಉದಾಹರಣೆಯಾಗಿ ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಇಎಂಎಸ್ 50 ಸಾವಿರಕ್ಕೂ ಹೆಚ್ಚು ಮಂದಿಯನ್ನುದ್ದೇಶಿಸಿ ತನ್ನ ಉಗ್ಗನ್ನೂ ಮೀರಿ ಒಂದೂವರೆ ಗಂಟೆ ಕಾಲ ಮಾತನಾಡಿದ್ದನ್ನೂ, ಜನ ಅದನ್ನು ಕಿವಿಗೊಟ್ಟು ಕೇಳಿದ್ದ ಘಟನೆಯನ್ನು ವಿವರಿಸಿದರು.

ಜನತಾದಳದ ಮುಖಂಡ ಪ್ರೊ.ಲಕ್ಷ್ಮಿ ಸಾಗರ್ ಈ ಶತಮಾನದ ಗೌರವಾನ್ವಿತ, ಪ್ರಭಾವಿ, ಧೀಮಂತ ವ್ಯಕ್ತಿ ಇಎಂಎಸ್ ಎಂದು ತಮ್ಮ ಶ್ರದ್ಧಾಂಜಲಿ ಅರ್ಪಿಸಿದರು.

ಸೂತ್ರಾಂಧತೆಯಲ್ಲ

ಮಾರ್ಕ್ಸ್‌ವಾದವೆಂದರೆ ಸೂತ್ರಾಂಧತೆಯಲ್ಲ ಎಂದು ಜೀವನವಿಡೀ ಎತ್ತಿ ತೋರಿದ ಧೀಮಂತ ತತ್ವಶಾಸ್ತ್ರಜ್ಞ ಎಂದ ಸಿಪಿಐ(ಎಂ)ನ ಶಾಸಕ ಶ್ರೀರಾಮ ರೆಡ್ಡಿಯವರು ಕಮ್ಯುನಿಸ್ಟ್ ಆಂದೋಲನದಲ್ಲಿನ ನ್ಯೂನತೆಗಳನ್ನು ಗುರುತಿಸಿ ಸರಿಪಡಿಸಿದರು, ಇಎಂಎಸ್‌ಗೆ ಇಎಂಎಸ್ ಮಾತ್ರವೇ ಸಾಟಿ ಎಂದು ವರ್ಣಿಸಿದರು. ಸೈದ್ಧಾಂತಿಕ ಘರ್ಷಣೆಯ ಈ ಕಾಲದಲ್ಲಿ ಮಾರ್ಕ್ಸ್‌ವಾದದ ಜೀವಂತಿಕೆಯನ್ನು ಎತ್ತಿ ಹಿಡಿಯುವುದೇ ಅವರಿಗೆ ಸಲ್ಲಿಸುವ ಶ್ರದ್ಧಾಂಜಲಿ ಎಂದು ಶ್ರೀರಾಮರೆಡ್ಡಿಯವರು ಹೇಳಿದರು.

ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಸಂಘಟಿಸಿದ್ದ ಈ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯ ಕಾರ್ಯದರ್ಶಿಗಳೂ, ಕೇಂದ್ರ ಸಮಿತಿ ಸದಸ್ಯರೂ ಆಗಿರುವ ಪಿ.ರಾಮಚಂದ್ರರಾವ್ ಇಎಂಎಸ್ ರ ಅಂತಿಮ ಯಾತ್ರೆಯಲ್ಲಿ ಕಂಡ ಅಂಶಗಳನ್ನೂ ಅಂದು ನಡೆದ ಸರ್ವಪಕ್ಷ ಸಭೆಯಲ್ಲಿ ಮಾತನಾಡಿದವರ ಭಾವನೆಗಳನ್ನು ಹೇಳುತ್ತಾ ಕಳೆದ ಏಳು ದಶಕಗಳಲ್ಲಿ ಕೇರಳದ ಸಮಾಜದ ಬದಲಾವಣೆಯ ಕೀರ್ತಿ ಇಎಂಎಸ್‌ಗೆ ಸಲ್ಲಬೇಕು ಎಂದರು. ಇಎಂಎಸ್‌ರವರು ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ದೇಶದ ಬೆಳವಣಿಗೆಯ ಹಿತದೃಷ್ಟಿಯಿಂದ ನಡೆಸಿದ ಹಲವು ಚರ್ಚೆಗಳನ್ನು ಅವರು ವಿವರಿಸಿದರು.

ಇಎಂಎಸ್ ರವರ ಬಗ್ಗೆ ಸಮಾಜದ ವಿವಿಧ ವಿಭಾಗಗಳ ಜನ ಹೊಂದಿರುವ ಪ್ರೀತಿ, ಗೌರವಗಳು, ಅದಕ್ಕೆ ಕಾರಣಗಳು ವ್ಯಕ್ತಗೊಂಡ ಈ ಶ್ರದ್ಧಾಂಜಲಿ ಸಮಾರಂಭವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ನಡೆಸಿಕೊಟ್ಟರು.

ಸಭೆ ನಡೆದ ಟೌನ್‌ಹಾಲಿನಲ್ಲಿ ಇಎಂಎಸ್‌ರವರ ಜೀವನ ಸಾಧನೆ ಹಾಗೂ ತಿರುವನಂತಪುರದಲ್ಲಿ ಅವರಿಗೆ ಲಕ್ಷಾಂತರ ಮಂದಿ ನೀಡಿದ ಅಂತಿಮನಮನ ಕುರಿತಾದ ಚಿತ್ರಗಳ ಪ್ರದರ್ಶನ ಹಾಗೂ ಅವರ ಕೆಲವು ಪುಸ್ತಕಗಳ ಮಾರಾಟವನ್ನೂ ಈ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು. ○



ನೋಡಬೇಕಾದ ಶ್ರೇಷ್ಠ ಚಿತ್ರ 'ತಾಯಿ ಸಾಹೇಬ'

ಒಂದು ಸಂವಾದ

ದೇಶದ ಸ್ವಾತಂತ್ರ್ಯದ ಸ್ವರ್ಣ ಜಯಂತಿ ಸಂದರ್ಭದಲ್ಲಿ ಕನ್ನಡ ಚಿತ್ರ ರಂಗ ರಾಷ್ಟ್ರಕ್ಕೆ ಅರ್ಪಿಸಿದ ಶ್ರೇಷ್ಠ ಚಲನ ಚಿತ್ರ 'ತಾಯಿ ಸಾಹೇಬ' ಕುರಿತು ಬೆಂಗಳೂರಿನಲ್ಲಿ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕೃಷಿಕೂಲಿಕಾರರ ಸಂಘಟನೆಗಳು ಏಪ್ರಿಲ್ 7 ರಂದು ಒಂದು ಸಹೃದಯ ಸಂವಾದ ಕಾರ್ಯಕ್ರಮ ನಡೆಸಿದವು.

ಈ ಸಂವಾದದಲ್ಲಿ ಸಾಹಿತಿಗಳು, ವಿಮರ್ಶಕರು ಮಹಿಳಾ ಸಂಘಟನೆಗಳ ಕಾರ್ಯಕರ್ತೆಯರು, ಪತ್ರಕರ್ತರು, ನಿರ್ದೇಶಕ ಗಿರೀಶ್ ಕಾಸರವಳ್ಳಿ, ಚಲನಚಿತ್ರ ನಟಿ ಜಯಮಾಲ, ಚಿತ್ರದ ಕಲಾತಂತ್ರಜ್ಞರು ಭಾಗವಹಿಸಿದ್ದರು.

ಚಿತ್ರ ಕುರಿತು ಮಾತನಾಡಿದ ಸಾಹಿತಿ ಕೃಷ್ಣ ಅಯ್ಯರ್ ತಾಯಿ ಸಾಹೇಬ ಮುಂಬೈ-ಹೈದ್ರಬಾದ್ ಕರ್ನಾಟಕಗಳಲ್ಲಿ ಸ್ವಾತಂತ್ರ್ಯದ ಮತ್ತು ನಂತರದ ಸ್ಥಿತಿಗತಿಗಳ ಕುರಿತು ಹೇಳುವ, ಜೊತೆಗೆ ದೇಶದ ಸ್ವಾತಂತ್ರ್ಯಕ್ಕಾಗಿ, ಊಳಿಗಮಾನ್ಯ ಪದ್ಧತಿ ವಿರುದ್ಧ ಮುಕ್ತಿಗಾಗಿ ದುಡಿಯುವ ದೇಶಗತಿಯ ಪತ್ನಿ, ಪಾಳೇಗಾರಿಯಿಂದ ಮುಕ್ತಿ ಪಡೆಯ ಹೊರಟ ಹಿರಿಯಪತ್ನಿ, ಹುಸಿ ಅಂತಸ್ತು, ಗೌರವ ಪ್ರತಿಷ್ಠೆಗಳಿಂದ ಹೊರಬರಲು ಬಯಸುವ ದೇಶಗತಿಯ ದತ್ತುಕ ಪುತ್ರ ಮತ್ತು ಬದುಕಿಗಾಗಿ ಊರ ಹೊರ ನೌಕರಿಗೆ ಹೊರಟ ರೈತ ಹೀಗೆ ಹತ್ತು ಹಲವು ರೀತಿಯಲ್ಲಿ ಚಿತ್ರದಲ್ಲಿ ಬರುವ ಎಲ್ಲಾ ಪಾತ್ರಗಳೂ, ಸನ್ನಿವೇಶಗಳು ಹೊಸತನ್ನು ಪಡೆಯುವ ಹಂಬಲವನ್ನು 'ತಾಯಿ ಸಾಹೇಬ' ಸವಿವರವಾಗಿ ಹೇಳಿದೆ ಎಂದರು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ದೇಶಗತಿ ಸಾಹೇಬ ಮನೆಯಲ್ಲಿ ತನ್ನ ಪತ್ನಿಯ ಸ್ವಾತಂತ್ರ್ಯದ ಬಗ್ಗೆ ಯೋಚಿಸದೆ ಅವಳಾಸೆ, ಅನಿಸಿಕೆಗಳಿಗೆ ಸ್ಪಂದಿಸದ ವರ್ತನೆ, ಅಂದಿನ ದೇಶಗತಿ ಮತ್ತು ಇಂದಿನ ಭೂಮಾಲಿಕ ಪಾಳೇಗಾರಿ ಪುರುಷ ಪ್ರಧಾನ ಸಮಾಜವನ್ನು ಪ್ರತಿಬಿಂಬಿಸಿದೆ. ರಾಜವಾಡೆಯಿಂದ ಹೊರಬರದ ಒಡವೆವಸ್ತ್ರ ಒಡೆತನಗಳಿಗೆ ಸೀಮಿತವಾಗಿದ್ದ ಹೆಣ್ಣು, ಅದರಾಚೆಯ ಬದುಕಿನ ಯೋಚನೆ, ಮೌಲ್ಯಗಳ ಘರ್ಷಣೆ ಮತ್ತು ಕುಟುಂಬದ ಆಯಾಮಗಳ ವಿಘಟನೆ ಈ ಚಿತ್ರದಲ್ಲಿದೆ.

ರಾಜಕೀಯ ಶ್ರೇಷ್ಠ ಮೌಲ್ಯವನ್ನು ಎತ್ತಿ ಹಿಡಿಯುವ ತಂದೆ ಸಾಹೇಬನ ಕೌಟುಂಬಿಕ ಹುಸಿ ಮೌಲ್ಯವನ್ನು ಪ್ರತಿಭಟಿಸುವ ದತ್ತುಕ ಪುತ್ರ ನಾಣಿ ಹೀಗೆ ಎಲ್ಲಾರು ಒಂದೊಂದೇ ಲಕ್ಷ್ಮಣ ರೇಖೆಯಿಂದ ಹೊರಕ್ಕೆ ಸರಿಯುತ್ತಾರೆ.

ಕೃಷಿಕೂಲಿಕಾರರು, ಬಡರೈತರು ನೋಡಲೇಬೇಕಾದ ಚಿತ್ರ 'ತಾಯಿಸಾಹೇಬ' ಹೀಗೆಂದವರು ಜಿ.ಎನ್.ನಾಗರಾಜ್. ಸ್ವಾತಂತ್ರ್ಯ ಚಳುವಳಿಯಲ್ಲಿ ಭೂಮಾಲಿಕರಿಗೆ ದೇಶಗತಿಗಳಿಗೆ ಅಂದು ಇದ್ದ ಮುನ್ನೋಟವನ್ನು ಗಿರೀಶ್ ಕಾಸರವಳ್ಳಿಯವರ ಈ ಚಿತ್ರದಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಸ್ವಾತಂತ್ರ್ಯದ ಸಂಭ್ರಮವನ್ನು ದೇಶದ ಸಾಮಾನ್ಯರೂ, ಕೂಲಿಕಾರರು, ರೈತರು, ಕೆಳ ವರ್ಗದ ಜನತೆ, ಅಷ್ಟೇ ಏಕೆ? ದೇಶಾಯಿಯ ಪತ್ನಿ ಅನುಭವಿಸುವ, ಅವರ ಪರಕೀಯತೆಯನ್ನು ಹೇಳುವಲ್ಲಿ ಚಿತ್ರ ಯಶಸ್ವಿಯಾಗಿದೆ. ಸ್ವಾತಂತ್ರ್ಯದ ಮೌಲ್ಯಗಳ ಬಗ್ಗೆ ಬಡ ಜನತೆ, ಕೆಳ ವರ್ಗಗಳ ದುಡಿಯುವ ಜನತೆ ಭ್ರಮ ನಿರಸನವಾಗಿರುವುದಕ್ಕೆ ಸಾಕ್ಷ್ಯ ಒದಗಿಸಿದೆ ಎಂದು ಅವರು ಹೇಳಿದರು.

ಉಳುವವನಿಗೇ ಭೂಮಿ ಎಂಬ ಕಾನೂನಿದ್ದರೂ ದೇಶಗತಿಗಳು ಪಟ್ಟಭದ್ರತೆಗಾಗಿ ರೈತರಿಗೆ ಭೂಮಿ ನಿರಾಕರಿಸಿದಾಗ ಭಾರತ-ಚೀನಾ ಯುದ್ಧಕ್ಕೆ ಆಹಾರವಾಗ ಹೊರಟ ಅಂದಿನ ರೈತರ ಚಿತ್ರಣವನ್ನು ಇದು ನೀಡಿದೆ ಎಂದರು.

ಹೈದ್ರಬಾದ್ ಕರ್ನಾಟಕದ ಜನತೆಯ ಸಾಮಾಜಿಕ, ವಿದ್ಯಾಭ್ಯಾಸ, ಒಟ್ಟಾರೆ ಜೀವನ ಮಟ್ಟ, ಪಾಳೇಗಾರಿ ಭೂ ಸಂಬಂಧಗಳ ನಿರೂಪಣೆ ಚಿತ್ರದಲ್ಲಿದೆ.

ವ್ಯವಸ್ಥೆಯ ವಿರುದ್ಧ ಬಂಡುಕೋರ ಮಹಿಳೆಯಾಗಿ 'ತಾಯಿಸಾಹೇಬ' ಗೋಚರಿಸುತ್ತಾಳೆ. ಚಿತ್ರದ ಪ್ರಮುಖ ಪಾತ್ರಗಳು ವ್ಯವಸ್ಥೆ ವಿರುದ್ಧ ಹೋರಾಟ ನಡೆಸಿದರೂ ತಂದೆ ಸಾಹೇಬ ಭೂಮಾಲಿಕತ್ವದ ವಿರುದ್ಧ, ತಾಯಿ ಸಾಹೇಬ ಅಂದಿನ ಸಾಮಾಜಿಕ ಪದ್ಧತಿ ವಿರುದ್ಧ ವಾಡೆ ದಾಟಿ ಹೊರ ಬರುವುದು ಮತ್ತು ದತ್ತು ಪುತ್ರ ನಾಣಿ ಸ್ವತಂತ್ರ ಜೀವನಕ್ಕಾಗಿ ಹಂಬಲಿಸುವುದು, ಹೀಗೆ ಎಲ್ಲರೂ ಹೊರಬರಲು ತುಡಿದರೂ ಒಬ್ಬೊಬ್ಬರ ನಡುವಿನ ಪರಕೀಯತೆಯಿಂದ ವಿಫಲ ಗೊಳ್ಳುವುದು, ಪ್ರಗತಿ ಬಗ್ಗೆ ಯೋಚಿಸುವ ಜನತೆಗೆ ಇತಿಹಾಸದ ಪಾಠದಂತಿದೆ 'ತಾಯಿ ಸಾಹೇಬ' ಚಿತ್ರ.

ಸ್ವಾತಂತ್ರ್ಯದ ಪೂರ್ವಾಪರತೆಗಳನ್ನು ಬಿಂಬಿಸುವ ಉದ್ದೇಶದಿಂದ ಚಿತ್ರವನ್ನು ಈ ಸಂದರ್ಭಕ್ಕೆ ಆಯ್ಕೆ ಮಾಡಿಕೊಂಡೆ ಎನ್ನುತ್ತಾರೆ ಚಿತ್ರದ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ. ಚರ್ಚೆಯಲ್ಲಿ ಭಾಗವಹಿಸಿದ ಅವರು ವ್ಯಕ್ತಿಯಿಂದ ಕ್ರೌರ್ಯ ಬರುವುದಿಲ್ಲ, ವ್ಯವಸ್ಥೆಯಿಂದ ಬರುತ್ತದೆ, ಹೆಣ್ಣು ಮಕ್ಕಳ ನೋವಿನ ಭಾವನೆ ಹೊರಚಿಮ್ಮಬೇಕೆಂಬುದು ನನ್ನ ಉದ್ದೇಶವಾಗಿತ್ತು ಎಂದರು.

ಚಿತ್ರದ ನಿರ್ಮಾಪಕಿ ಮತ್ತು 'ತಾಯಿ ಸಾಹೇಬ' ಪಾತ್ರದ ಜಯಮಾಲ ಮಾತನಾಡಿ 25 ವರ್ಷಗಳ ತನ್ನ ಚಿತ್ರ ಜೀವನದಲ್ಲಿ ಚಿತ್ರರಂಗಕ್ಕೆ ಒಂದು ಅವಿಸ್ಮರಣೀಯ ಚಿತ್ರ ನೀಡುವುದರ ಜೊತೆಗೆ ಜನತೆಗೆ ಅರಿವು ಹಚ್ಚುವ ಗುರಿಯಿಂದ 'ತಾಯಿ ಸಾಹೇಬ' ನಿರ್ಮಿಸಿದೆ ಎಂದರಲ್ಲದೆ, ಈ ಸಂವಾದ ಕಾರ್ಯಕ್ರಮದ ವ್ಯವಸ್ಥಾಪಕರಿಗೆ ಕೃತಜ್ಞತೆ ಸಲ್ಲಿಸಿದರು.

ಚರ್ಚೆಯಲ್ಲಿ ನಟ ಶಿವರಾಂ, ಸಿ.ಆರ್.ಸಿಂಹ, ಡಾ|| ವಿಜಯ, ಮನು ಚಕ್ರವರ್ತಿ, ಸುರೇಂದ್ರರಾವ್ ಇನ್ನೂ ಹಲವರು ಪಾಲ್ಗೊಂಡು ಗಿರೀಶ್ ಕಾಸರವಳ್ಳಿ ಹಾಗೂ ಜಯಮಾಲರನ್ನು ಸದಭಿರುಚಿ ಚಿತ್ರ ನಿರ್ಮಿಸಿದ್ದಕ್ಕಾಗಿ ಅಭಿನಂದಿಸಿದರು.

ಸಂವಾದದಲ್ಲಿ ಪಾಲ್ಗೊಂಡಿದ್ದ ಜೆ.ಎಂ.ಎಸ್. ರಾಜ್ಯ ಕಾರ್ಯದರ್ಶಿ ಕೆ.ನೀಲಾ ಮಾತನಾಡಿ ಚಿತ್ರ ಒಳ್ಳೆಯ ಕಲಾಕೃತಿಯಾಗಿದೆ, ಇದು ಇಡೀ ಉತ್ತರ ಕರ್ನಾಟಕದ ನೋವಿನ ಕಥೆಯನ್ನು, ವಿಶೇಷವಾಗಿ ಹೆಣ್ಣುಮಕ್ಕಳ ನಿಜ ಬದುಕನ್ನು ಸಾರುವಂತದ್ದಾಗಿದೆ. ಇಂತಹ ಸಂವಾದ ಮತ್ತಿತರ ಕಾರ್ಯಕ್ರಮಗಳ ಮೂಲಕ ಬೀದರ್, ಗುಲ್ಬರ್ಗ, ಬಿಜಾಪುರ, ರಾಯಚೂರು ಮತ್ತು ಬಳ್ಳಾರಿ ಕಡೆಗಳಲ್ಲಿ ಜನ ನೋಡುವಂತೆ ಮಾಡಲು ನಮ್ಮ ಸಂಘಟನೆಗಳ ಜೊತೆ ಗಿರೀಶ್ ಕಾಸರವಳ್ಳಿ ಜಯಮಾಲ ಬರುವುದಾದರೆ ಪ್ರತಿಮನೆಗೆ ಚಿತ್ರದ ಕಥಾ ತಿರುಳನ್ನು ತಲುಪಿಸಲು ಸಾಧ್ಯವೆಂದರು. ಕೆ.ಎಸ್ ವಿಮಲ ನಿರೂಪಣೆ ಮಾಡಿದರೆ ಪ್ರಭಾ ವಂದನೆ ಸಲ್ಲಿಸಿದರು.

ರಂ.ಶಾ ಕಾಂದಬರಿ ಆಧಾರಿತ ಗಿರೀಶ್ ಕಾಸರವಳ್ಳಿ ನಿರ್ದೇಶನದ 'ತಾಯಿ ಸಾಹೇಬ' ಸ್ವಾತಂತ್ರ್ಯ ಪೂರ್ವಾಪರತೆ ವ್ಯವಸ್ಥೆಯ ಕ್ರೌರ್ಯ, ಅಸಹನೆ, ಆಶೆ, ಟೊಳ್ಳುತನ, ಗಾಂಧಿಜೀ ಕನಸಿನ ಸ್ವಾತಂತ್ರ್ಯ ಮೌಲ್ಯದ ವಿಫಲತೆ, ದೇಶಗತಿಗಳ ಕೌಟಂಬಿಕ ಸಂಬಂಧದಲ್ಲಿ ಪತ್ನಿ-ಉಪಪತ್ನಿ ಸಂಬಂಧ, ಪಾಳೇಗಾರಿಯಿಂದ ಬಂಡವಾಳಶಾಹಿಯತ್ತ ಹೊರಳುವ ಸನ್ನಿವೇಶ, ಬಂಧನ ಮುಕ್ತಿ ಬಯಸುವ ಹೆಣ್ಣು, ಗೌರವಯುತ ಬಾಳು ಬಯಸುವ ಉಪಪತ್ನಿ, ಐಭೋಗ ಅಂತಸ್ತಿಂದ ಹೊರಹೋಗ ಬಯಸುವ ಮಗ, ಸ್ವಂತ ಅನ್ನ ಬಯಸುವ ಸಾಮಾನ್ಯ ರೈತ ಹೀಗೆ ಎಲ್ಲವನ್ನೂ ಬಿಂಬಿಸುವಲ್ಲಿ ಯಶಸ್ವಿಯಾಗಿರುವ 'ತಾಯಿ ಸಾಹೇಬ' ಛಾಯಾಗ್ರಹಣ, ಬೆಳಕು, ನಿರೂಪಣೆ, ನಟ-ನಟಿಯರ ಪ್ರೌಢ ಅಭಿನಯ, ಮಾತಿನಲ್ಲಿ ಹೇಳಲಾರದ್ದನ್ನು ಮೌನ, ಬೆಳಕು-ಕತ್ತಲೆಯು ಪ್ರೇಕ್ಷಕರ ಮನಮುಟ್ಟುವಲ್ಲಿ ಯಶಸ್ವಿ ಯಾಗಿದೆ. ಎಲ್ಲರೂ ನೋಡಬೇಕಾದ ಒಂದು ಉನ್ನತ ಕಲಾಕೃತಿ 'ತಾಯಿ ಸಾಹೇಬ'.

ಚಿತ್ರ ತಂಡಕ್ಕೆ 'ಐಕ್ಯರಂಗ'ದ ಅಭಿನಂದನೆ.

ವರದಿ:
ಜಯರಾಮು.ಎಂ

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27